ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಏಪ್ರಿಲ್ 24 ಬುಧವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 9 | ಪುಟಗಳು: 12 + VIII

₹4

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com




ಮೈಸೂರು–ಕೊಡಗು ಲೋಕಸಭೆ ಚುನಾವಣೆ – 2024
ದಿನಾಂಕ: 26-04-2024ನೇ ಶುಕ್ರವಾರದಂದು ನಡೆಯಲಿರುವ ಚುನಾವಣೆಯಲ್ಲಿ
ಕಾಂಗ್ರೆಸ್ ಪಕ್ಷದ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ
ಎಂ.ಲಕ್ಷ್ಮಣ್
ಕ್ರಮ ಸಂಖ್ಯೆ 2 ಕ್ಕೆ
ತಮ್ಮ ಅತ್ಯಮೂಲ್ಯವಾದ ಮತ ನೀಡಿ ಜಯಶೀಲರನ್ನಾಗಿ ಮಾಡಬೇಕಾಗಿ ತಮ್ಮಲ್ಲಿ ವಿನಂತಿ
ಹಸ್ತದ ಗುರುತಿಗೆ
ನಿಮ್ಮ ಮತ.....
ಶ್ರೀ ಅತೀಖ್‌ವುಲ್ಲಾ
ಅಧ್ಯಕ್ಷರು
ಮೈಸೂರು ಲೋಡರ್ಸ್, ಅನ್‌ಲೋಡರ್ಸ್ ಅಸೋಸಿಯೇಷನ್
ಶ್ರೀ ಆರ್. ಶ್ರೀಪಾಲ್
ರಾಜ್ಯ ಕಾರ್ಯದರ್ಶಿ
ಕೆ.ಪಿ.ಸಿ.ಸಿ. ಅಸಂಘಟಿತ ಕಾರ್ಮಿಕ ವಿಭಾಗ, ಮೈಸೂರು
ಶುಭಕೋರುವವರು: ಶ್ರೀ ಆರ್. ಶ್ರೀಪಾಲ್, ರಾಜ್ಯ ಕಾರ್ಯದರ್ಶಿ, ಕೆ.ಪಿ.ಸಿ.ಸಿ. ಅಸಂಘಟಿತ ಕಾರ್ಮಿಕ ವಿಭಾಗ ಹಾಗೂ ಮೈಸೂರು ಲೋಡರ್ಸ್, ಅನ್‌ಲೋಡರ್ಸ್ ಅಸೋಸಿಯೇಷನ್
ಅಧ್ಯಕ್ಷರು ಮತ್ತು ಆಡಳಿತ ಮಂಡಳಿ, ನಂ.31 ಇಂಡಸ್ಟ್ರೀಯಲ್ ಲೇಔಟ್ ಬನ್ನಿಮಂಟಪ, ಎಕ್ಸ್‌ಟೆನ್‌ಷನ್ ಮೈಸೂರು-570015
ವಿನ್ಯಾಸ ಮತ್ತು ಮುದ್ರಣ
PRINT SOLUTIONS
9448389861
ಜೆಎಸ್‌ಎಸ್ ಹೊಸ ಆಸ್ಪತ್ರೆ ಎದುರು, ಅಗ್ರಹಾರ, ಮೈಸೂರು

ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ | ಏಪ್ರಿಲ್ 24 ಬುಧವಾರ 2024

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್. ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸಂಪುಟ: 45 | ಸಂಚಿಕೆ: 9 | ಪುಟಗಳು: 12 + VIII
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ಲೋಕಸಭಾ ಚುನಾವಣೆ ಮೊದಲ ಹಂತದ 14 ಕ್ಷೇತ್ರಗಳಲ್ಲಿ

ಬಹಿರಂಗ ಪ್ರಚಾರಕ್ಕೆ ಇಂದು ತೆರೆ



● ಇದರೊಂದಿಗೆ ಮದ್ಯ ಮಾರಾಟ ಇಂದು ಸಂಜೆ 5ರಿಂದ ಶುಕ್ರವಾರ ಮಧ್ಯರಾತ್ರಿವರೆಗೆ ನಿಷಿದ್ಧ ● ಕ್ಷೇತ್ರದವರಲ್ಲದ ಕಾರ್ಯಕರ್ತರು, ಮುಖಂಡರು ಕ್ಷೇತ್ರ ತೊರೆಯಬೇಕು ● ಏ.26ರಂದು ಬೆಳಗ್ಗೆ 7ರಿಂದ ಸಂಜೆ 6ರವರೆಗೆ ಮತದಾನ

ಬೆಂಗಳೂರು, ಏ.23(ಕೆಎಂಶಿ)–ಹಳೆ ಮೈಸೂರು ಭಾಗದ 14 ಲೋಕಸಭಾ ಕ್ಷೇತ್ರಗಳ ಅಬ್ಬರದ ಪ್ರಚಾರಕ್ಕೆ ಬುಧವಾರ ಸಂಜೆ ತೆರೆಬೀಳಲಿದೆ.

ಮತದಾನಕ್ಕೆ 48 ಗಂಟೆಗಳ ಮೊದಲು ಬಹಿರಂಗ ಪ್ರಚಾರ ಸಮಯ ಅಂತ್ಯಗೊಳ್ಳುತ್ತಿದ್ದಂತೆ ಕ್ಷೇತ್ರದವರಲ್ಲದ ಕಾರ್ಯಕರ್ತರು, ಮುಖಂಡರು, ರಾಜಕಾರಣಿಗಳು ಕ್ಷೇತ್ರ ತೊರೆಯಬೇಕಾಗುತ್ತದೆ. ಅಭ್ಯರ್ಥಿಗಳು ಮನೆ ಮನೆಗೆ ತೆರಳಿ ಮತ ಯಾಚನೆ ಮಾಡಲು ಅವಕಾಶ ಇರುತ್ತದೆ. ಆದರೆ, ಅವರು ಗುಂಪು ಕಟ್ಟಿಕೊಂಡು ಪ್ರಚಾರ ನಡೆಸುವಂತಿಲ್ಲ. ಕ್ಷೇತ್ರ ವ್ಯಾಪ್ತಿಯ ಎಲ್ಲಾ ತೆರನಾದ ಮದ್ಯದ ಅಂಗಡಿಗಳು ಮತ್ತು ಬಾರ್ ಅಂಡ್ ರೆಸ್ಟೋರೆಂಟ್‌ಗಳು ಶುಕ್ರವಾರ ಮಧ್ಯರಾತ್ರಿವರೆಗೆ ವಹಿವಾಟು ನಡೆಸುವಂತಿಲ್ಲ.

ಮೊದಲ ಹಂತದಲ್ಲಿ ಮಂಡ್ಯ, ಮೈಸೂರು–ಕೊಡಗು, ಚಾಮರಾಜನಗರ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ಕೇಂದ್ರ, ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ, ಚಿತ್ರದುರ್ಗ, ತುಮಕೂರು, ಹಾಸನ, ಚಿಕ್ಕಬಳ್ಳಾಪುರ, ಕೋಲಾರ, ಉಡುಪಿ–ಚಿಕ್ಕಮಗಳೂರು, ದಕ್ಷಿಣ ಕನ್ನಡ ಲೋಕಸಭಾ ಕ್ಷೇತ್ರಗಳಿಗೆ ಏಪ್ರಿಲ್ 26ರಂದು ಮತದಾನ ನಡೆಯಲಿದೆ.

ಅಂದು ಬೆಳಗ್ಗೆ 7 ಗಂಟೆಯಿಂದ ಸಂಜೆ 6 ಗಂಟೆವರೆಗೂ ಮತದಾರರು ಮತದಾನ ಮಾಡಲು ಕೇಂದ್ರ ಚುನಾವಣಾ ಆಯೋಗ ಅವಕಾಶ ಮಾಡಿಕೊಟ್ಟಿದೆ.

ಪ್ರಚಾರ ಅಂತ್ಯಗೊಳ್ಳಲು ಒಂದು ದಿನ ಬಾಕಿ ಇರುವ ಹಿನ್ನೆಲೆಯಲ್ಲಿ ಕೇಂದ್ರ ಗೃಹ ಸಚಿವ ಅಮಿತ್ ಷಾ, ಕಾಂಗ್ರೆಸ್ ಅಧಿನಾಯಕಿ ಪ್ರಿಯಾಂಕ ಗಾಂಧಿ ವಾದ್ರಾ, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಮುಖ್ಯಮಂತ್ರಿ ಸಿದ್ದರಾಮಯ್ಯ ತಮ್ಮತಮ್ಮ ಪಕ್ಷದ ಅಭ್ಯರ್ಥಿಗಳ ಪರ ಬಿರುಸಿನ ಪ್ರಚಾರ ನಡೆಸಿದರು.

ಮೊದಲ ಹಂತದ ಎಲ್ಲಾ ಕ್ಷೇತ್ರಗಳಲ್ಲೂ ಕಾಂಗ್ರೆಸ್ ತನ್ನ ಅಭ್ಯರ್ಥಿಗಳನ್ನು ಕಣಕ್ಕಿಳಿಸಿದ್ದರೆ, ಎನ್‌ಡಿಎ ಮೈತ್ರಿಕೂಟದ ಬಿಜೆಪಿ 11ರಲ್ಲೂ, ಮಿತ್ರ ಪಕ್ಷ ಜೆಡಿಎಸ್ 3ರಲ್ಲೂ ಕಣಕ್ಕಿಳಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ, ಜೆಡಿಎಸ್ ರಾಜ್ಯಾಧ್ಯಕ್ಷ ಎಚ್.ಡಿ.ಕುಮಾರಸ್ವಾಮಿಗೆ ಮೊದಲ ಹಂತದ ಕ್ಷೇತ್ರಗಳು ಪ್ರತಿಷ್ಠಿತ ಕಣಗಳಾಗಿವೆ. ಮುಖ್ಯಮಂತ್ರಿ ಅವರು ಪ್ರತಿನಿಧಿಸುವ ಮೈಸೂರು–ಕೊಡಗು ಹಾಗೂ ಚಾಮರಾಜನಗರ ಕ್ಷೇತ್ರಗಳಿಗೆ ಚುನಾವಣೆ ನಡೆಯುತ್ತಿರುವುದರಿಂದ ಎರಡೂ ಕ್ಷೇತ್ರಗಳನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ. ಅದರಲ್ಲೂ ಬಿಜೆಪಿ, ರಾಜವಂಶಸ್ಥ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರನ್ನು ಮುಖ್ಯಮಂತ್ರಿ ಅವರ ತವರು ಕ್ಷೇತ್ರದಲ್ಲಿ ಕಣಕ್ಕಿಳಿಸಿ ಆ ಕ್ಷೇತ್ರವನ್ನು ಉಳಿಸಿಕೊಳ್ಳಲು ಹೋರಾಟ ನಡೆಸಿದೆ. ಕುಮಾರಸ್ವಾಮಿ ಸ್ವತಃ ಮಂಡ್ಯ ಕ್ಷೇತ್ರದಲ್ಲಿ ಎನ್‌ಡಿಎ ಕೂಟದ ಅಭ್ಯರ್ಥಿ ಆಗಿರುವುದರಿಂದ ಅದು ಪ್ರತಿಷ್ಠಿತ ಕ್ಷೇತ್ರವಾಗಿ ಮಾರ್ಪಟ್ಟಿದೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸಹೋದರ ಡಿ.ಕೆ.ಸುರೇಶ್ ಬೆಂಗಳೂರು ಗ್ರಾಮಾಂತರದಲ್ಲಿ ನಾಲ್ಕನೇ ಬಾರಿಗೆ ಮರು ಆಯ್ಕೆ ಬಯಸಿ ಕಣಕ್ಕಿಳಿದಿದ್ದಾರೆ, ಅವರ ಪ್ರತಿಸ್ಪರ್ಧಿ ದೇವೇಗೌಡರ ಅಳಿಯ, ಹೃದಯ ತಜ್ಞ ಡಾ.ಮಂಜುನಾಥ್ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕಿಳಿದಿರುವುದರಿಂದ ಈ ಕ್ಷೇತ್ರದ ಬಗ್ಗೆ ಜನತೆ ಕುತೂಹಲದಿಂದ ನೋಡುತ್ತಿದ್ದಾರೆ.

ಕಳೆದ 2019ರಲ್ಲಿ ಈ 14 ಕ್ಷೇತ್ರಗಳಿಗೆ ನಡೆದ ಚುನಾವಣೆಯಲ್ಲಿ ಬಿಜೆಪಿ 11ರಲ್ಲೂ, ಕಾಂಗ್ರೆಸ್, ಜೆಡಿಎಸ್ ಹಾಗೂ ಪಕ್ಷೇತರರು ತಲಾ ಒಂದು ಸ್ಥಾನದಲ್ಲಿ ಗೆಲುವು ಗಳಿಸಿದ್ದರು. ● 6ನೇ ಪುಟಕ್ಕೆ

ಮೈಸೂರು–ಕೊಡಗು, ಚಾಮರಾಜನಗರ

ಕ್ಷೇತ್ರಗಳಲ್ಲಿ ಮತದಾನಕ್ಕೆ ಸಿದ್ಧತೆ ಪೂರ್ಣ

● 10,65,714 ಮಹಿಳೆಯರು ಸೇರಿ 20,92,222 ಮತದಾರರು ● 2,202 ಮತಗಟ್ಟೆಗಳು, 9,809 ಸಿಬ್ಬಂದಿ ನೇಮಕ ● 473 ಸಾರಿಗೆ ಬಸ್, 33 ಜೀಪ್‌ಗಳು, 79 ಮಿನಿ ಬಸ್‌ಗಳ ಬಳಕೆ: ಜಿಲ್ಲಾ ಚುನಾವಣಾಧಿಕಾರಿ ಡಾ.ಕೆ.ವಿ.ರಾಜೇಂದ್ರ ಮಾಹಿತಿ

ಮೈಸೂರು, ಏ.23(ಆರ್‌ಕೆ)– ಮೈಸೂರು–ಕೊಡಗು, ಚಾಮರಾಜನಗರ ಲೋಕಸಭಾ ಕ್ಷೇತ್ರದಲ್ಲಿ ಏಪ್ರಿಲ್ 26ರಂದು ನಡೆಯಲಿರುವ ಮೊದಲ ಹಂತದ ಚುನಾವಣೆಗೆ ಸಂಪೂರ್ಣ ಸಿದ್ಧತೆ ನಡೆಸಲಾಗಿದೆ.

ಜಿಲ್ಲಾ ಚುನಾವಣಾಧಿಕಾರಿಗಳೂ ಆದ ಮೈಸೂರು ಜಿಲ್ಲಾಧಿಕಾರಿ ಡಾ. ಕೆ.ವಿ.ರಾಜೇಂದ್ರ ಹಾಗೂ ಚಾಮರಾಜನಗರ ಜಿಲ್ಲಾಧಿಕಾರಿ ಶಿಲ್ಪಾನಾಗ್ ತಿಳಿಸಿದ್ದಾರೆ.

ತಮ್ಮ ಕಚೇರಿ ಸಭಾಂಗಣದಲ್ಲಿ ಇಂದು ಸುದ್ದಿಗೋಷ್ಠಿಯಲ್ಲಿ ಮತದಾನಕ್ಕೆ ಕ್ಷೇತ್ರದಾದ್ಯಂತ ಕೈಗೊಂಡಿರುವ ಸಿದ್ಧತೆ ಕುರಿತು ಡಾ.ರಾಜೇಂದ್ರ ಇಂದು ಮೈಸೂರಲ್ಲಿ ಮಾಹಿತಿ ನೀಡಿದರು. ಏಪ್ರಿಲ್ 26ರಂದು ಬೆಳಗ್ಗೆ 7ರಿಂದ ಸಂಜೆ 6 ಗಂಟೆವರೆಗೆ ಮತದಾನ


ಕೆ.ವಿ.ರಾಜೇಂದ್ರ


ಶಿಲ್ಪಾನಾಗ್

ನಡೆಯಲಿದ್ದು, ಹಕ್ಕು ಚಲಾಯಿಸಿದ ಮತದಾರರ ಎಡಗೈ ತೋರು ಬೆರಳಿಗೆ ಅಳಿಸಲಾಗದ ಶಾಯಿ ಹಾಕಲಾಗುವುದು.

ಕ್ಷೇತ್ರದಲ್ಲಿ ಒಟ್ಟು 2,202 ಮತಗಟ್ಟೆಗಳನ್ನು ಸ್ಥಾಪಿಸಲಾಗಿದ್ದು, 10,65,714 ಮಹಿಳೆಯರು, 184 ಇತರರು ಸೇರಿ ಒಟ್ಟು 20,92,222 ಮತದಾರರು ತಮ್ಮ ಹಕ್ಕು ಚಲಾಯಿಸಲು ಅರ್ಹರಾಗಿದ್ದಾರೆ. ಮತದಾನ ಪ್ರಕ್ರಿಯೆಗೆ 2,434 ಪಿಆರ್‌ಓ, 2,482 ಎಪಿಆರ್‌ಓ, 4,893 ಪಿಓ ಸೇರಿ ಒಟ್ಟು 9,809 ಸಿಬ್ಬಂದಿಗಳನ್ನು ಮತಗಟ್ಟೆಗಳಿಗೆ ನಿಯೋಜಿಸಲಾಗಿದೆ.

ಮಸ್ಟರಿಂಗ್ ಪ್ರಕ್ರಿಯೆ: ಏಪ್ರಿಲ್ 25ರಂದು ಬೆಳಗ್ಗೆ 8 ಗಂಟೆಯಿಂದ ಕ್ಷೇತ್ರದ 8 ಮಸ್ಟರಿಂಗ್ ಅಧಿಕಾರಿಗಳು, ಸಿಬ್ಬಂದಿ ಮತದಾನ ಪ್ರಕ್ರಿಯೆ ಪರಿಕರಗಳು, ವಿದ್ಯುನ್ಮಾನ ಮತಯಂತ್ರಗಳು, ಲೇಖನ ಸಾಮಗ್ರಿಗಳೊಂದಿಗೆ ಸಾರಿಗೆ ಬಸ್ಸುಗಳಲ್ಲಿ ನಿಯೋಜಿತ ಮತಗಟ್ಟೆಗಳಿಗೆ ತಲುಪುವರು. ಪ್ರತಿ ಮತಗಟ್ಟೆಯಲ್ಲಿ ಓರ್ವ ಮತಗಟ್ಟೆ ಅಧಿಕಾರಿ, ಓರ್ವ ಸಹಾಯಕ ● 6ನೇ ಪುಟಕ್ಕೆ

ನಕ್ಕರೆ ಅದೇ ಸ್ವರ್ಗ

ಗುಂಡ : "ಏನೋ ನೀನೇ ಪಾತ್ರೆ ತಿಕ್ತಾ ಇದ್ದೀಯಾ? ಮನೆಯಲ್ಲಿ ಕೆಲಸದವಳಿದ್ದಾಳೆ ಅಂತಿದ್ದೆ"

ತಿಮ್ಮ : "ಓ.. ಅದಾ.. ಕೆಲ ದಿನಗಳ ಹಿಂದೆ ಅವಳನ್ನೇ ಮದುವೆಯಾದೆ!"

ಮೈಸೂರು ಮಿತ್ರ

ಬುಧವಾರ, 24 ಏಪ್ರಿಲ್ 2024

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!

(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತವಾಹಿನಿ..........

ನಿಮ್ಮ ಆಂತರಿಕ ಸ್ಥಿತಿಯ ಮೇಲೆ ನಿಮಗೆ ನಿಯಂತ್ರಣವಿಲ್ಲದಿದ್ದರೆ ನೀವು ಯಾವುದೇ ಕೆಲಸ ಮಾಡಲಿ ಅಥವಾ ಏನೂ ಮಾಡದಿದ್ದರೂ ನಿಮಗೆ ಒತ್ತಡ ಇರುತ್ತದೆ. – ಜಗ್ಗೀ ವಾಸುದೇವ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಹಂಚಿ ಉಂಡರೆ ಹಸಿವಿಲ್ಲ

ನಿಮ್ಮ ಪತ್ರಗಳು

ವಿರೋಧ ಪಕ್ಷಗಳ ಪ್ರಧಾನಿ ಅಭ್ಯರ್ಥಿ ಯಾರು?

ಮಾನ್ಯರೆ,

ಈಗಾಗಲೇ ದೇಶದ ಕೆಲವು ಭಾಗಗಳಲ್ಲಿ ಲೋಕಸಭಾ ಚುನಾವಣೆಯ ಮೊದಲ ಹಂತದ ಮತದಾನ ಮುಗಿದಿದೆ. ಎಲ್ಲರಿಗೂ ಗೊತ್ತಿರುವ ಹಾಗೇ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟ, ಮೂರನೇ ಬಾರಿಗೆ ನರೇಂದ್ರ ಮೋದಿಯವರು ದೇಶದ ಪ್ರಧಾನಿಯಾಗಿ ಅಧಿಕಾರ ವಹಿಸಿಕೊಳ್ಳಲಿದ್ದಾರೆಂದು ಘೋಷಿಸಿದೆ. ಸಾಮಾನ್ಯವಾಗಿ, ಪ್ರಧಾನಿ ಅಭ್ಯರ್ಥಿಯನ್ನು ಮೊದಲು ಘೋಷಿಸಿ ನಂತರ ಚುನಾವಣಾ ಅಖಾಡಕ್ಕೆ ಇಳಿಯುವುದು ನಮ್ಮ ದೇಶದಲ್ಲಿ ಒಂದು ಸಂಪ್ರದಾಯವಾಗಿದೆ. ಈ ಮೂಲಕ ಅಂತಹ ನಾಯಕನ ವರ್ಚಸ್ಸು ಮತದಾರರ ಮೇಲೆ ಸಕಾರಾತ್ಮಕ ಪರಿಣಾಮ ಬೀರಬಹುದು ಎಂದು ಭಾವಿಸಲಾಗಿದೆ. ನೆಹರೂ, ಇಂದಿರಾಗಾಂಧಿ ಮುಂತಾದವರ ಕಾಲದಿಂದಲೂ ಇದು ನಡೆದು ಬಂದಿದೆ. ಬ್ರಿಟನ್, ಅಮೇರಿಕಾ, ಜಪಾನ್, ಜರ್ಮನಿ, ಫ್ರಾನ್ಸ್ ಮುಂತಾದ ಅಭಿವೃದ್ಧಿ ಹೊಂದಿದ ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಕೂಡ ಮುಂಚಿತವಾಗಿಯೇ ಪ್ರಧಾನಿ ಅಥವಾ ಅಧ್ಯಕ್ಷ ಅಭ್ಯರ್ಥಿಯ ಹೆಸರನ್ನು ಘೋಷಿಸಿ ಅವರ ನೇತೃತ್ವದಲ್ಲೇ ಚುನಾವಣೆ ನಡೆಯುತ್ತದೆ. ಆದರೆ ಭಾರತದಲ್ಲಿ ಸಮ್ಮಿಶ್ರ ಸರ್ಕಾರಗಳ ಶಕೆ ಪ್ರಾರಂಭವಾದ ನಂತರ, ಭಾರತ ರಾಷ್ಟ್ರೀಯ ಕಾಂಗ್ರೆಸ್ ಪಕ್ಷದಲ್ಲಿ ನಾಯಕತ್ವದ ಕೊರತೆ ಎದ್ದು ಕಾಣುತ್ತಿದೆ. ಯುದ್ಧದಲ್ಲಿ ಕೂಡ ನಾಯಕನನ್ನು ಮುಂದಿಟ್ಟುಕೊಂಡೇ ಯುದ್ಧವನ್ನು ನಡೆಸಲಾಗುತ್ತದೆ. ದುರದೃಷ್ಟವಶಾತ್ ಕಾಂಗ್ರೆಸ್ ನೇತೃತ್ವದ ವಿರೋಧ ಪಕ್ಷಗಳಿಗೆ ತಮ್ಮ ಪ್ರಧಾನಿ ಅಭ್ಯರ್ಥಿಯ ಹೆಸರನ್ನು ಘೋಷಿಸಲು ಇದುವರೆಗೂ ಸಾಧ್ಯವಾಗದಿರುವುದು ಒಂದು ದೊಡ್ಡ ಕೊರತೆಯೇ ಸರಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು, 9341731661

ಹಣ ಹಂಚದಿರುವ ಪಕ್ಷ ಯಾವುದಾದರೂ ಇದೆಯೋ?

ಮಾನ್ಯರೆ,

ಮಾಜಿ ಪ್ರಧಾನಿ ದೇವೇಗೌಡರು ರಾಜಕಾರಣದಲ್ಲಿ ಹಿರಿಯರು, ಸಾಕಷ್ಟು ಅನುಭವ ಉಳ್ಳವರು. ಇವರು ರಾಜ್ಯ ಸರ್ಕಾರ ಅಧಿಕಾರ ದುರುಪಯೋಗ ಮಾಡಿಕೊಳ್ಳುತ್ತಿದೆ ಎಂದು ರಾಜ್ಯಕ್ಕೆ ಕೇಂದ್ರ ಪಡೆ ಕರೆಸಿಕೊಂಡಿದ್ದಾರೆ. ಇದು ಕೇಂದ್ರ ಸರ್ಕಾರದ ಅಧಿಕಾರ ದುರುಪಯೋಗ ಅಲ್ಲದೇ ಮತ್ತೇನು. ಕಾಂಗ್ರೆಸ್ ಮತ ಸೆಳೆಯಲು ಹಣ ಉಡುಗೊರೆ ನೀಡುತ್ತಿದೆ ಎಂದು ದೂರಿದ್ದಾರೆ. ಎಲ್ಲರಲ್ಲೂ ಸಹಜವಾಗಿ ಮೂಡುವ ಪ್ರಶ್ನೆ ಎಂದರೆ ಮಂಡ್ಯ, ಹಾಸನ, ಬೆಂಗಳೂರು ಗ್ರಾಮಾಂತರ, ಮೈಸೂರು–ಕೊಡಗು ಕ್ಷೇತ್ರದಲ್ಲಿ ಅಭ್ಯರ್ಥಿಗಳು ಮತದಾರನಿಗೆ ಹಣ ಹಂಚುವುದಿಲ್ಲವೇ? ದೇವೇಗೌಡರ ಪ್ರಕಾರ ಹಂಚುವುದಿಲ್ಲ ಎಂದಾದರೆ ಚಾಮುಂಡಿ ತಾಯಿಯ ಮಡಿಲಲ್ಲಿ ಸತ್ಯಮಾಡಿ ಮತದಾರನಿಗೆ ನಮ್ಮ ಅಭ್ಯರ್ಥಿಯ ಪರವಾಗಿ ಯಾರೂ ಮತದಾರನಿಗೆ ಯಾವುದೇ ಆಮಿಷ ಒಡ್ಡುವುದಿಲ್ಲ ಎಂದು ಪ್ರಮಾಣ ಮಾಡಲಿ ಆಗ ಒಪ್ಪಬಹುದು. ಕಾಂಗ್ರೆಸ್ ನಿಯಂತ್ರಿಸುವ ಸಲುವಾಗಿ ಇಂತಹ ಪ್ರಯತ್ನವೇ ಅಥವಾ ಸೋಲಿನ ಹತಾಶೆಯೋ ತಿಳಿಯುತ್ತಿಲ್ಲ. ಬರೆ ಚುನಾವಣಾ ಆಯೋಗಕ್ಕೆ ಪತ್ರ ಬರೆದಿದ್ದರೆ ಓಕೆ. ಅದನ್ನು ಬಿಟ್ಟು ಕೇಂದ್ರ ಗೃಹ ಸಚಿವರಿಗೆ ಮಾಹಿತಿ ನೀಡಿರುವುದು ಮೈತ್ರಿ ಪಕ್ಷದ ಸಂಚಿನ ಫಲವಾಗಿ ಸಿಐಎಸ್‌ಎಫ್ 16 ತುಕಡಿ ರಾಜ್ಯಕ್ಕೆ ಬಂದಿರುವುದು ನಿಸ್ಸಂಶಯ. ಚುನಾವಣಾ ಆಯೋಗ ಯಾರ ಮಾತಿಗೂ ಮಣೆ ಹಾಕದೆ ಸ್ವಇಚ್ಛೆಯಿಂದ ಸುಲಲಿತ ಮತದಾನಕ್ಕೆ ಅವಕಾಶ ಮಾಡಿಕೊಡಲಿ. ಯಾವೊಂದು ಪಕ್ಷದ ಮುಲಾಜಿಗೆ ಅಧಿಕಾರಿಗಳು ಒಳಗಾಗದಿರಲಿ. ಇದರಿಂದ ಪ್ರಜಾಪ್ರಭುತ್ವ ಉಳಿಯಲಿ.

–ದಡದಹಳ್ಳಿ ರಮೇಶ್, ಚಂದಕವಾಡಿ ಹೋಬಳಿ, ಚಾಮರಾಜನಗರ ಜಿಲ್ಲೆ.

ಯುವಕರನ್ನು ಎಚ್ಚರಿಸುವ ಲೇಖನ

ಮಾನ್ಯರೆ,

ದಿನಾಂಕ 22.4.2024ರ ಸೋಮವಾರ 'ಮೈಸೂರು ಮಿತ್ರ' ದಿನಪತ್ರಿಕೆಯ ಪುಟ 4 ರಲ್ಲಿ ಪ್ರಕಟವಾಗಿರುವ ತ್ರಿಪುರಾಂತಕ ಅವರ **'ಅಕ್ಷರಸ್ಥರು ವಿದ್ಯಾವಂತರಾಗೋದು ಯಾವಾಗ'** ಲೇಖನ ಸಕಾಲಿಕವಾಗಿತ್ತು ಮತ್ತು ತಪ್ಪು ದಾರಿಯಲ್ಲಿ ಹೋಗುತ್ತಿರುವ ಯುವ ಜನಾಂಗವನ್ನು ಎಚ್ಚರಿಸುವಂತಿತ್ತು.

ಇತ್ತೀಚೆಗೆ ಸುಲಿಗೆ, ಅತ್ಯಾಚಾರ, ಅನಾಚಾರ ಮಾಡುವವರ ಸಂಖ್ಯೆ ಜಾಸ್ತಿ ಆಗಿದೆ. ಅದರಲ್ಲೂ ವಿದ್ಯಾವಂತರೆನಿಸಿಕೊಂಡ ಯುವ ಜನಾಂಗದವರು ಹೆಚ್ಚಿದ್ದಾರೆ ಎನ್ನುವುದು ಹೆಚ್ಚು ಕಳವಳವುಂಟು ಮಾಡುವ ವಿಷಯ. ಇಂತಹ ಪೈಶಾಚಿಕ ಕೃತ್ಯಗಳನ್ನು ಖಂಡಿಸುವವರು, ಪ್ರತಿಭಟಿಸುವವರೂ ಕಡಿಮೆ. ಪಾರದರ್ಶಕವಾಗಿ ನಡೆಯಬೇಕಾಗಿದ್ದ ಚುನಾವಣೆಯಲ್ಲಿ ಅಲ್ಲಲ್ಲಿ ಅಕ್ರಮವಾಗಿ ಹಣ ಇನ್ನಿತರ ವಸ್ತುಗಳನ್ನು ಸಾಗಿಸುವುದು, ಸಿಕ್ಕಿಹಾಕಿಕೊಂಡಿರುವುದು ಪ್ರತಿದಿನ ಪತ್ರಿಕೆಯಲ್ಲಿ ನೋಡುತ್ತಾ ಇದ್ದೇವೆ. ಪ್ರಜಾಪ್ರಭುತ್ವದ ದೊಡ್ಡ ಹಬ್ಬ ಎನಿಸಿದ ಚುನಾವಣೆಯಲ್ಲಿ ಕೂಡ ತನ್ನ ವಿವೇಚನೆ ಬಳಸಿ ಇದ್ದುದರಲ್ಲೇ ಸರಿಯಾದ ವ್ಯಕ್ತಿಗೆ ಮತ ಹಾಕಿ ತನ್ನ ಜವಾಬ್ದಾರಿ ನಿಭಾಯಿಸದೇ ಹಣ, ಹೆಂಡ ಮತ್ತು ಇನ್ನಿತರ ಆಮಿಷಗಳಿಗೆ ಒಳಗಾಗಿ ಮತ ಚಲಾಯಿಸುವವರಿಂದ ಇನ್ನೇನು ನಿರೀಕ್ಷಿಸಲು ಸಾಧ್ಯ.

–ರಾಘವೇಂದ್ರ ಜೋಯಿಸ್, ಮೈಸೂರು

ಮನೆ ಮನೆ ಮತದಾನದಿಂದ ವಂಚಿತ

ಮಾನ್ಯರೆ,

ಭಾರತ ಚುನಾವಣಾ ಆಯೋಗವು ಕಳೆದ ವಿಧಾನಸಭಾ ಚುನಾವಣೆಯಿಂದ 85 ವರ್ಷ ಮೀರಿದ ನಾಗರಿಕರು ಮತಗಟ್ಟೆಗೆ ಬಂದು ಮತ ಚಲಾಯಿಸಲು ಸಾಧ್ಯವಾಗದವರಿಗೆ ಮನೆಯಿಂದಲೇ ಮತದಾನ ಮಾಡಿ, ಚುನಾವಣೆ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ವ್ಯವಸ್ಥೆ ಮಾಡಿರುವುದು ಶ್ಲಾಘನೀಯ. ಈ ಬಾರಿಯ ಲೋಕಸಭಾ ಚುನಾವಣೆಯಲ್ಲೂ ಸಹ ಈ ವ್ಯವಸ್ಥೆ ಮುಂದುವರೆದಿದೆ.

ಹಿರಿಯ ನಾಗರಿಕನಾಗಿರುವ ನಾನು ಮತಗಟ್ಟೆಗೆ ಹೋಗಿ ಈ ಬಾರಿ ಮತ ಚಲಾಯಿಸುವ ಪರಿಸ್ಥಿತಿಯಲ್ಲಿ ಇಲ್ಲದ ಕಾರಣ ಮನೆಯಿಂದಲೇ ಮತ ಚಲಾಯಿಸುವ ವ್ಯವಸ್ಥೆಯ ಉಪಯೋಗ ಪಡೆಯಲು ಉತ್ಸುಕನಾಗಿದ್ದೆ. ಚುನಾವಣಾ ಆಯೋಗದಿಂದ ನಿಯೋಜಿತಗೊಂಡ ಅಧಿಕಾರಿಯೊಬ್ಬರು ಹದಿನೈದು ದಿನಗಳ ಹಿಂದೆ ಮನೆಗೆ ಬಂದು ನನ್ನ ವಿವರಗಳನ್ನು ಪಡೆದು, ನನ್ನ ಭಾವಚಿತ್ರ ಮತ್ತು ಇತರ ಮಾಹಿತಿಗಳನ್ನು ಮೊಬೈಲ್‌ನಲ್ಲಿ ಅಪ್‌ಲೋಡ್ ಮಾಡಿ, ನಮೂನೆಯೊಂದಕ್ಕೆ ಸಹಿ ಪಡೆದು, ಸಂಪರ್ಕ ಸಂಖ್ಯೆ ಪಡೆದುಕೊಂಡು, ಚುನಾವಣೆಯ ದಿನಕ್ಕಿಂತ ಮುಂಚೆ ಮನೆಗೆ ಬಂದು ಮತದಾನಕ್ಕೆ ವ್ಯವಸ್ಥೆ ಮಾಡಲಾಗುವುದೆಂದು ತಿಳಿಸಿ ಹೋದರು.

ಆದರೆ, ಮನೆಯಿಂದ ಮತದಾನ ಮಾಡುವ ಕಾಲಾವಕಾಶ ಮುಕ್ತಾಯಗೊಂಡಿರುತ್ತದೆ. ನನಗೆ ಮತ ಚಲಾಯಿಸಲು ಮನೆಗೆ ಚುನಾವಣಾ ಸಿಬ್ಬಂದಿಯವರು ಬಾರದ ಕಾರಣ ಸಾಧ್ಯವಾಗಿರುವುದಿಲ್ಲ. ಇದರಿಂದ ಅಧಿಕಾರಿಗಳ ನಿರ್ಲಕ್ಷ್ಯತೆಯಿಂದಾಗಿ ನಾನು ಮತ ಚಲಾಯಿಸುವುದರಿಂದ ವಂಚಿತನಾಗಿರುತ್ತೇನೆ. ಸಂಬಂಧಪಟ್ಟ ಅಧಿಕಾರಿಗಳು ಸ್ಪಷ್ಟನೆ ನೀಡುವರೆಂದು ನಂಬಿರುವೆ.

–ಎಚ್.ಆರ್. ನಾರಾಯಣಶೆಟ್ಟಿ, ಮೈಸೂರು.



ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.

ಸಂಸ್ಕೃತಿ ಚಿಂತನಾ

ಮಂಕುತಿಮ್ಮನು ಕಂಡ ರಾಮಾಯಣ

ಡಿ.ವಿ.ಜಿ. ಎಂದೇ ಪ್ರಸಿದ್ಧರಾಗಿದ್ದ ಡಿ.ವಿ. ಗುಂಡಪ್ಪನವರು ವಾಲ್ಮೀಕಿ ರಾಮಾಯಣವನ್ನು ಪ್ರೀತಿಸಿದವರು, ಗೌರವಿಸಿದವರು. ಆ ಆದಿ ಕಾವ್ಯದ ಗಾಢಪ್ರಭಾವ ಅವರ ಅನೇಕ ಕೃತಿಗಳಲ್ಲಿದೆ. ಮಂಕುತಿಮ್ಮನ ಕಗ್ಗದ ಅನೇಕ ಪದ್ಯಗಳಲ್ಲಿ ರಾಮಾಯಣದ ಘಟನೆಗಳ ಮತ್ತು ಪಾತ್ರಗಳ ಉಲ್ಲೇಖವಿರುವುದನ್ನು ಕಾಣಬಹುದು. ವಾಲ್ಮೀಕಿಯನ್ನೂ ಅವರು ತಮ್ಮ ಪದ್ಯಗಳಲ್ಲಿ ನೆನಪಿಸಿಕೊಂಡಿದ್ದಾರೆ. ವಾಲ್ಮೀಕಿಯ ಕವನ ನರರಲ್ಲಿ ಯೋಗ ಪುಲಕಾಂಕುರವನ್ನು ಮೂಡಿಸುವುದೆಂದೂ ಹೇಳಿದ್ದಾರೆ –

ಆಗುಂಬೆಯಸ್ತಮಯ ದ್ರೋಣ ಪರ್ವತದುದಯ
ತ್ಯಾಗರಾಜನ ಗಾನ ವಾಲ್ಮೀಕಿ ಕವನ ।
ಆಗಿಸವೆ ತಾವೆಮ್ಮಂತರಂಗದಲಿ ಸತ್ವ
ಯೋಗ ಪುಲಕಾಂಕುರವ ಮಂಕುತಿಮ್ಮ ॥

ಡಿ.ವಿ.ಜಿ. ಅವರ ದೃಷ್ಟಿ ಎಷ್ಟು ವಿಶಾಲವೆಂದರೆ, ರಾಮನ ಶ್ವಾಸದ ಗಾಳಿ ರಾವಣನವರೆಗೂ ಹರಡಿರುತ್ತದೆ. ರಾಮನೂ ರಾವಣನು ಉಸಿರಾಡಿದ ಗಾಳಿಯನ್ನು ಸೇವಿಸಿರುತ್ತಾನೆ, ರಾಮ–ರಾವಣರ ಉಸಿರು ಇಂದು ನಮ್ಮೊಳಗೂ ಇವೆ ಎಂದಿದ್ದಾರೆ–

ರಾಮನುಚ್ಛ್ವಾಸವಲೆದಿರದೆ ರಾವಣನೆಡೆಗೆ
ರಾಮನುಂ ದಶಕಂಠನೆಲರನುಸಿರಿರನೆ?
ರಾಮರಾವಣರುಸಿರ್ಗಳಿಂದು ನಮ್ಮೊಳಗಿರವೆ
ಭೂಮಿಯಲಿ ಪೊಸತೇನೊ ಮಂಕುತಿಮ್ಮ ॥

ಹೀಗಾಗಿ ಪ್ರಪಂಚದಲ್ಲಿ ಕೊಡುವ ಕೊಳ್ಳುವ ವ್ಯವಹಾರ ಸದಾ ಇದ್ದದ್ದೇ, ಇದರಲ್ಲಿ ಹೊಸತು ಇಲ್ಲ–ಎನ್ನುವ ತತ್ತ್ವವನ್ನು ಡಿ.ವಿ.ಜಿ. ತೆರೆದಿಟ್ಟಿದ್ದಾರೆ.

ರಾಮನು ಮರ್ಯಾದಾ ಪುರುಷೋತ್ತಮ, ಅವತಾರವೆತ್ತಿದ ವಿಷ್ಣು, ಆದರೂ ಅವನ ಕಾಲದಲ್ಲೂ ದುಷ್ಟ ರಾವಣನಿದ್ದ. ಈ ಲೋಕದಲ್ಲಿ ದುಷ್ಟರಿಲ್ಲದ ಕಾಲವನ್ನು ಎಷ್ಟು ಹುಡುಕಿದರೂ ಅದು ಕಾಣುವುದೇ ಇಲ್ಲ ಎನ್ನುತ್ತಾರೆ ದಾರ್ಶನಿಕ ಕವಿ ಡಿ.ವಿ.ಜಿ.

ರಾಮನಿರ್ದಂದು ರಾವಣನೊಬ್ಬನಿರ್ದನಲ
ಭೀಮನಿರ್ದಂದು ದುಶ್ಶಾಸನನದೋರ್ವನ್‌।
ಈ ಮಹಿಯೊಳ ನ್ಯಾಯಕಾರಿಯಿಲ್ಲದುದೆಂದು
ರಾಮಭಟನಾಗು ನೀಂ ಮಂಕುತಿಮ್ಮ ॥

ಯಾವಾಗಲೂ ಜಗತ್ತಿನಲ್ಲಿ ಒಳ್ಳೆಯದೂ ಕೆಟ್ಟದೂ ಇರುವುದು ಅನಿವಾರ್ಯವಾದುದರಿಂದ ಜಾಣನು ಒಳ್ಳೆಯದನ್ನೇ ಗ್ರಹಿಸಬೇಕು. ರಾಮನ ಭಟನಾಗಬೇಕು. ರಾವಣನ ಸೈನಿಕನಾಗಬಾರದು. ಎಂದರೆ ರಾಮನ ಹಾಗೆ ವರ್ತಿಸಬೇಕು. ರಾವಣನಂತೆ ವರ್ತಿಸಬಾರದು – ಎಂಬುದು ಇಲ್ಲಿ ಸೂಚಿತವಾಗಿದೆ.

ಕೈಕೇಯಿಯ ಪಾತ್ರದ ಬಗೆಗೂ ಗಂಭೀರ ಚಿಂತನೆಯನ್ನು ಮಾಡಿರುವ ಡಿ.ವಿ.ಜಿ. ಅವಳನ್ನು ಜಗತ್‌ಸೃಷ್ಟಿಗೆ ಕಾರಣ ಎನಿಸಿದ ಮಾಯೆಗೆ ಹೋಲಿಸಿದ್ದಾರೆ. ಪರಬ್ರಹ್ಮವು ಈ ಸಂದರ್ಭದಲ್ಲಿ ಮಾಯಾವಶವಾಗಿ ಮುದಿ ದಶರಥ ಮಹಾರಾಜನಂತೆ ಅವಳ ಇಚ್ಛೆಗೆ ಅನುಸಾರವಾಗಿ ರಾಜ್ಯಭಾರವನ್ನು ಮಾಡುತ್ತಿದೆ ಎನ್ನುವ ಕಲ್ಪನೆಯನ್ನು ನಾವು ಪರಿಶೀಲಿಸಬೇಕು.

ರಾಯ ಮುದಿದಶರಥನನಾಡಿಸುವ ಕೈಕೇಯಿ
ಸ್ತ್ರೀಯ ವಶದಲಿ ಕೋಸಲವನಾಳಿದಂತೆ ।
ಮಾಯೆ ಬೊಮ್ಮನ ಬಿಸದವಡಿಸಿ ನಮ್ಮೀ ಜಗವ
ಕಾಯುವಳು ತನ್ನಿಚ್ಛೆ ಮಂಕುತಿಮ್ಮ ॥

ಕೈಕೇಯಿ ತನ್ನ ಮಗ ಭರತನಿಗಾಗಿ ರಾಮ ಪಟ್ಟಾಭಿಷೇಕವನ್ನು ತಪ್ಪಿಸಿದಳು. ರಾಮನನ್ನು ಕಾಡಿಗೆ ಕಳುಹಿಸಿದಳು ಎಂದು ಸಕಲ ರಾಮಭಕ್ತರಿಗೂ ಅವಳ ಮೇಲೆ ಕೋಪವಿದೆ. ಮಗನ ಮೇಲೆ ತಾಯಿಗಿದ್ದ ಮೋಹ ಕೈಕೇಯಿಯ ಹಠಕ್ಕೆ ಕಾರಣವಾಯಿತು. ಇದೇ ರೀತಿಯಾಗಿ ಕೃಷ್ಣನು ಸಂಪೂರ್ಣವಾಗಿ ತನ್ನವನೇ



ಆಗಿರಬೇಕೆಂಬ ಮೋಹಕ್ಕೆ ಒಳಗಾಗಿದ್ದ ಸತ್ಯಭಾಮೆಯನ್ನೂ ಡಿ.ವಿ.ಜಿ. ಉದಾಹರಣೆಯನ್ನಾಗಿ ತೆಗೆದುಕೊಂಡು ಕಗ್ಗದ ಒಂದು ಪದ್ಯವನ್ನು ಹೆಣೆದಿದ್ದಾನೆ –

ಕೈಕೇಯಿಯವೊಲು ಮಾತೆ, ಸತ್ಯಭಾಮೆವೊಲು ಸತಿಯು
ಸಾಕಿ ಸಂತಸವೆರೆಯೆ ಸಂಸಾರಲೀಲೆ ।
ಬೇಕು ಮತ್ಸರ–ಮಮತೆ ಮೋಹಂಗಳಾವೇಶ
ಲೋಕನಾಟಕಕಾಗಿ ಮಂಕುತಿಮ್ಮ ॥

ಕೈಕೇಯಿ ಜನಪ್ರಿಯಳಲ್ಲದಿರಬಹುದು. ಆದರೆ ತಾಯಿಯಾಗಿ ತನ್ನ ಮಗನ ಹಿತಕ್ಕಾಗಿ ವರಗಳನ್ನು ಬೇಡಿದಳು, ಸತ್ಯಭಾಮೆ ಒಲವಿನ ಮಡದಿಯಾಗಿ ಸವತಿ ಮಾತ್ಸರ್ಯವನ್ನು ತೋರಿಸಿದಳು. ಲೋಕನಾಟಕಕ್ಕಾಗಿ ಆ ಮತ್ಸರ–ಮಮತಾ–ಮೋಹಗಳ ಆವೇಶ ಕ್ಷಮ್ಯ–ಎಂದಿದ್ದಾರೆ ಡಿ.ವಿ.ಜಿ. ಈ ಇಬ್ಬರು ರಾಣಿಯರನ್ನೇ ಆಧಾರವಾಗಿಟ್ಟುಕೊಂಡು ಡಿ.ವಿ.ಜಿ. ರಚಿಸಿರುವ ಇನ್ನೊಂದು ಪದ್ಯವನ್ನು ನೋಡೋಣ–

ಕೈಕೇಯಿ ಸತ್ಯಭಾಮೆಯರಂಶವಿರದ ಪೆಣ್
ಲೋಕದೊಳಗಿರಳು; ಬೆಳೆವುದು ಲೋಕವವರಿಂ।
ಸಾಕಿ ಸಲಹುವ ಮತ್ಸರವದು ಸೃಷ್ಟಿಯುಪಾಯ
ಬೇಕದಕೆ ನಗು ಸಹನೆ ಮಂಕುತಿಮ್ಮ ॥

ಎಲ್ಲಾ ಹೆಂಗಸರಲ್ಲೂ ಕೈಕೇಯಿ ಮತ್ತು ಸತ್ಯಭಾಮೆಯ ಅಂಶ ಇದ್ದೇ ಇರುತ್ತದೆ. ಯಾವ ತಾಯಿ ತಾನೆ ತನ್ನ ಮಗನ ಹಿತವನ್ನು ಬಯಸಿ ಪಕ್ಷಪಾತವನ್ನು ಮಾಡುವುದಿಲ್ಲ? ಯಾವ ಹೆಂಡತಿ ತನ್ನ ಗಂಡನ ಮನಸ್ಸು ಸದಾ ತನ್ನ ಕಡೆಗೇ ವಾಲಬೇಕೆಂದು ಅಪೇಕ್ಷಿಸುವುದಿಲ್ಲ? ಆ ಭಾವನೆಯನ್ನು ಮತ್ಸರ ಎಂದು ಕೆಲವು ನಿಂದಿಸಿದರೂ ಅದು ಸಾಕಿ ಸಲಹುವ ಮತ್ಸರ. ಅದನ್ನು ಕಂಡಾಗ ನಕ್ಕು ಬಿಟ್ಟು ಬಿಡಬೇಕು, ಸಹಿಸಿಕೊಳ್ಳಬೇಕು. ಅದರ ಖಂಡನೆ ಅನಾವಶ್ಯಕ. ಈ ಸೂಕ್ಷ್ಮ ವಿಚಾರವನ್ನು ನಿರೂಪಿಸಿರುವ ಡಿ.ವಿ.ಜಿ. ವಂದನೀಯರು.

ರಾವಣನ ವಿಷಯವನ್ನು ತೆಗೆದುಕೊಂಡರೂ ಅಲ್ಲಿ ಡಿ.ವಿ.ಜಿ. ಕಾಣುವ ಸತ್ಯವೇ ಬೇರೆ. ರಾವಣನು ದಶಕಂಠ, ಅವನಿಗೆ ಹತ್ತು ತಲೆಗಳಿದ್ದುವು ಎಂಬುದು ಕಥೆ. ಅದನ್ನು ಡಿ.ವಿ.ಜಿ. ಅರ್ಥೈಸುವುದು ಬೇರೆ ರೀತಿಯಲ್ಲಿ.

ರಾವಣನ ದಶಶಿರವದೇಂ ವರನು ಶತಶಿರನು
ಸಾವಿರಾಸ್ಯಗಳನೊಂದೊರೊಳಣಗಿಸಿಹನು।
ಹಾವಾಗಿ ಹುಲಿಯಾಗಿ ಕಪ್ಪೆ ಹುಲ್ಲೆಯುಮಾಗಿ
ಭೂವ್ಯೋಮಕತಿಶಯನು ಮಂಕುತಿಮ್ಮ॥

ರಾವಣನ ಹತ್ತು ತಲೆಯಾದ ಮಹಾ ಸಾಧನೆ? ಮನುಷ್ಯನು ಒಬ್ಬನೇ ನೂರು ತಲೆಗಳನ್ನು ಹೊಂದಿರುತ್ತಾನೆ. ಅಷ್ಟೇ ಅಲ್ಲ. ನೂರು ಮುಖಗಳನ್ನು ಒಂದೇ ಮುಖದಲ್ಲಿ ಅಡಗಿಸಿಟ್ಟಿರುತ್ತಾನೆ. ಒಬ್ಬನೇ ಕಾಲಭೇದಗಳಿಂದ ಹಾವಾಗಿ ಹುಲಿಯಾಗಿ ಕಪ್ಪೆಯಾಗಿ ಜಿಂಕೆಯಾಗಿ ನಟಿಸುತ್ತಾನೆ. ಭೂಮಿಗೂ ಆಕಾಶಕ್ಕೂ ವ್ಯಾಪಿಸುವ ಅತಿಶಯ ಮಾನವನೇ.

ಇದನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕು. ನಾವು ಪ್ರಬಲರಾಗಿದ್ದಾಗ ದುರ್ಬಲರ ವಿಷಯದಲ್ಲಿ ಹುಲಿಯಂತೆ ಕ್ರೌರ್ಯವನ್ನು ತೋರಿಸುತ್ತೇವೆ. ನಮ್ಮ ಕ್ರೋಧಕ್ಕೆ ಹಗೆಗೆ ಗೋಚರವಾದವರನ್ನು ಕೊಲ್ಲಲು ಹಾವಾಗಿ ವಿಷವನ್ನು ಕಕ್ಕುತ್ತೇವೆ. ಮಾತನಾಡಲು ಅವಕಾಶ ಸಿಕ್ಕಿದಾಗ ಕಪ್ಪೆಯಂತೆ ವಟಗುಟ್ಟುತ್ತೇವೆ. ಹೆದರಿಕೆಯಾದಾಗ ಹುಲ್ಲೆ (ಜಿಂಕೆ)ಗಳಂತೆ ಓಡಿ ಹೋಗುತ್ತೇವೆ. ಈ ನಾಲ್ಕು ಉದಾಹರಣೆಗಳು ಮಾತ್ರ. ಕತ್ತೆಗಳಾಗಿ ಭಾರವನ್ನು ಹೊರುತ್ತೇವೆ. ಕುದುರೆಗಳಾಗಿ ಯಾರನ್ನೋ ಹೊತ್ತು ಮೆರೆಸುತ್ತೇವೆ. ನರಿಗಳಾಗಿ ಯಾರಿಗೋ ಮೋಸ ಮಾಡುತ್ತೇವೆ. ಕಪಿಗಳಾಗಿ ಯಾರ ಮುಂದೋ ನಿಂತು ಹಲ್ಲು ಕಿರಿಯುತ್ತೇವೆ. ನಮ್ಮಲ್ಲಿ ಒಬ್ಬೊಬ್ಬರಿಗೂ ಸಾವಿರ ತಲೆಗಳು. ಹಾಗಿರುವಾಗ ಹತ್ತು ತಲೆ ಯಾವ ಲೆಕ್ಕಕ್ಕೆ ಎಂದು ಡಿ.ವಿ.ಜಿ. ಕೇಳಿದ್ದಾರೆ.

ಆಕರ್ಷಕ ವಸ್ತುವನ್ನು ಕಂಡಾಗ ಅದಕ್ಕಾಗಿ ಆಶಿಸುವುದು ಎಲ್ಲರ ಸ್ವಭಾವ. ಹಾಗೆ ಸೀತೆಯನ್ನು ನೋಡಿದಾಗ ರಾವಣನ ಚಿತ್ತ ಚಂಚಲವಾಯಿತು. ಕನಕ ಮೃಗವನ್ನು, ಎಂದರೆ ಬಂಗಾರದ ಜಿಂಕೆಯನ್ನು ನೋಡಿದಾಗ ಸೀತೆಯ ಮನಸ್ಸು ಅದನ್ನು ಬಯಸಿ ಚಂಚಲವಾಯಿತು. ಇದನ್ನು ನೋಡಿ ಡಿ.ವಿ.ಜಿ. ಹೇಳುತ್ತಾರೆ–

ಜನಕಜೆಯ ದರುಶನದಿನಾಯ್ತು ರಾವಣ ಚಪಲ
ಕನಕಮೃದರುಶನದೆ ಜಾನಕಿಯ ಚಪಲ।
ಜನವವನ ನಿಂದಿಪುದು; ಕನಿಕರಿಪುದಾಕೆಯಲಿ
ಮನದ ಬಗೆಹರಿಯದದು ಮಂಕುತಿಮ್ಮ ॥

ಇಬ್ಬರದೂ ಚಾಪಲ್ಯವೇ. ಲೋಕವು ರಾವಣನನ್ನು ನಿಂದಿಸುತ್ತದೆ. ಸೀತೆಯಲ್ಲಿ ಕನಿಕರವನ್ನು ತೋರಿಸುತ್ತದೆ. ಆ ಲೋಕ ಮನಸ್ಸಿನ ಸ್ವಭಾವವನ್ನು ತಿಳಿಯದು–ಎಂದಿದ್ದಾರೆ ಡಿ.ವಿ.ಜಿ. ಸೀತೆಯ ಈ ಸ್ವಭಾವವನ್ನೇ, ಕನಕಮೃಗದ ಕಥೆಯನ್ನೇ ಇಟ್ಟುಕೊಂಡು ಅವರು ರಚಿಸಿರುವ ಇನ್ನೊಂದು ಪದ್ಯವನ್ನು ನೋಡೋಣ–

ಧಾರುಣೀಸುತೆಯವೊಲು ದೃಢಮನಸ್ಕರದಾರು?
ಮಾರೀಚಹರಿಣವಡ್ಡಾಡಲೇನಾಯ್ತು?
ವಾರಿಧಿಯೊಳಡಗಿ ನಿದ್ರಿಪ ಬಾಡವವೊ ತೃಷ್ಣೆ
ಆರದನು ಕೆರಳಿಪರೊ ಮಂಕುತಿಮ್ಮ ॥

ಧಾರುಣಿ ಎಂಬ ಪದ ಧರಣಿ ಎಂಬ ಸಂಸ್ಕೃತ ಪದದ ತದ್ಭವ. ಅದರ ಅರ್ಥ ಭೂಮಿ. ಧಾರುಣೀಸುತೆ ಎಂದರೆ ಭೂಮಿಯ ಮಗಳು. ಜನಕಮಹಾರಾಜನು ಯಜ್ಞಾರ್ಥವಾಗಿ ಭೂಮಿಯನ್ನು ಉಳುತ್ತಿದ್ದಾಗ ಸಿಕ್ಕಿದ ಮಗು ಆದ್ದರಿಂದ ಸೀತೆ ಧಾರುಣೀಸುತೆ. ಅವಳಂತೆ ದೃಢಮನಸ್ಸನ್ನು ಹೊಂದಿದ್ದ ಸ್ತ್ರೀಯರು ಬೇರೆ ಯಾರೂ ಇರಲಿಲ್ಲ. ಆದರೂ ಮಾರೀಚನು ಚಿನ್ನದ ಜಿಂಕೆಯಾಗಿ ಅವಳ ಆಶ್ರಮದ ಮುಂದೆ ಅಡ್ಡಾಡಲು ಏನಾಯ್ತು? ಅವಳು ಅದು ಬೇಕೆಂದು ಆಶೆಪಟ್ಟಳು. ಅದಕ್ಕಾಗಿ ರಾಮನನ್ನು ಬೇಡಿದಳು. ಕಾಡಿದಳು. ರಾಮನು ಅದಕ್ಕಾಗಿ ಹೋದಾಗ ಸೀತಾಪಹರಣವಾಯಿತು – ಇತ್ಯಾದಿ. ಇದರಿಂದ ತಿಳಿದು ಬರುವುದೇನೆಂದರೆ ಮನುಷ್ಯರ ಆಶೆ ಸಮುದ್ರದೊಳಗೆ ಅಡಗಿರುವ ಬಡವಾಗ್ನಿಯಂತೆ. ಅದು ಸುಪ್ತವಾಗಿರುತ್ತದೆ. ಯಾವುದೋ ವಸ್ತು ಅಥವಾ ಯಾವುದೋ ವ್ಯಕ್ತಿ ಸುಪ್ತವಾಗಿದ್ದ ಆ ಆಶೆಯನ್ನು ಕೆರಳಿಸುತ್ತಾರೆ. ಆಗ ದೃಢಮನಸ್ಸು ಚಂಚಲವಾಗುತ್ತದೆ.

ಹೀಗೆ ಮಹಾಮನೀಷಿ ಡಿ.ವಿ. ಗುಂಡಪ್ಪನವರು ರಾಮಾಯಣದ ಹಲವು ಪ್ರಸಂಗಗಳನ್ನು ಮಂಕುತಿಮ್ಮನ ಕಗ್ಗದಲ್ಲಿ ಪ್ರಸ್ತಾಪಿಸಿದ್ದಾರೆ. ಕವಿಯ ಕಣ್ಣಿಗೆ ನಮಗೆ ಗೋಚರಿಸದ ಹಲವು ವಿಷಯಗಳು ಕಗ್ಗದಲ್ಲಿ ಕಾಣಿಸುತ್ತವೆ. ಇತರ ಸಂದರ್ಭಗಳನ್ನು ಮುಂದೆ ನೋಡೋಣ.

ಯುಗದ, ಜಗದ ತಾರೆ ಡಾ.ರಾಜ್‌ಕುಮಾರ್



ಬನ್ನೂರು ಕೆ.ರಾಜು
ಸಾಹಿತಿ,
ಪತ್ರಕರ್ತ
ಮೊ: 94815 33167

ತಮಿಳುನಾಡಿನ ಮುಖ್ಯಮಂತ್ರಿಯಾಗಿಯೂ ಮೆರೆದ ತಮಿಳರ ಆರಾಧ್ಯದೈವ, ನಟ ಚಕ್ರವರ್ತಿ ಡಾ.ಎಂ.ಜಿ.ರಾಮಚಂದ್ರನ್ ಅವರು 'ರಿಕ್ಷಾ ಕಾರನ್' ಚಿತ್ರದಲ್ಲಿ ಅಭಿನಯಿಸಿದ್ದ ಕಾಲವದು. ಆ ಸಂದರ್ಭದಲ್ಲಿ ಅವರಿಗೆ ಅಲ್ಲಿನ ಪ್ರತಿಷ್ಠಿತ 'ಭರತ್ ಪ್ರಶಸ್ತಿ' ಬಂದಿತ್ತು. ಆ ಪ್ರಶಸ್ತಿಯನ್ನು ಕನ್ನಡಿಗರ ಆರಾಧ್ಯ ದೈವ ನಟಸಾರ್ವಭೌಮ ರಾಜ್‌ಕುಮಾರ್ ಅವರಿಂದಲೇ ಸ್ವೀಕರಿಸಬೇಕೆಂಬ ಮಹದಾಸೆ ಎಂ.ಜಿ.ಆರ್ ಅವರದು. ಹಾಗಾಗಿ ಯಾರು ಪ್ರಶಸ್ತಿ ನೀಡುತ್ತಾರೆಂಬುದನ್ನು ಆಹ್ವಾನ ಪತ್ರಿಕೆಯಲ್ಲಿ ಮುದ್ರಿಸದೆ, ಮಾಧ್ಯಮಕ್ಕೂ ಗುಟ್ಟು ಬಿಟ್ಟುಕೊಡದೆ ಎಂ.ಜಿ.ಆರ್ ಆಣತಿಯಂತೆ ಸಮಾರಂಭದ ವ್ಯವಸ್ಥೆಯಾಗಿತ್ತು. ಕನ್ನಡ ನಾಡಿನಲ್ಲಿ ರಾಜ್‌ಕುಮಾರ್ ಯುಗ ಇದ್ದಂತೆ ತಮಿಳುನಾಡಿನಲ್ಲಿ ಒಂದು ರೀತಿಯಲ್ಲಿ ಎಂ.ಜಿ.ಆರ್ ಯುಗವೇ ಇದ್ದಂಥ ಆ ಕಾಲದಲ್ಲಿ ಎಂ.ಜಿ.ಆರ್‌ಗೆ ಪ್ರಶಸ್ತಿ ನೀಡುವ ಸಮಾರಂಭವೆಂದರೆ ಕೇಳಬೇಕೆ? ಅಭಿಮಾನಿ ಜನಸಾಗರ ಭೋರ್ಗರೆದು ಬಂದಿತ್ತು. ಜೊತೆಗೆ ದಕ್ಷಿಣ ಭಾರತದ ಸೂಪರ್‌ಸ್ಟಾರ್‌ಗಳು ಸೇರಿದಂತೆ ಭಾರತೀಯ ಚಿತ್ರರಂಗದ ಅತಿರಥ ಮಹಾರಥರೆಲ್ಲರೂ ಬಂದಿದ್ದರು.

ಸಮಾರಂಭ ಆರಂಭವಾಗುವ ಹೊತ್ತಿಗೆ ಸ್ವತಃ ಎಂ.ಜಿ.ಆರ್. ಅವರೇ ರಾಜ್‌ಕುಮಾರ್ ಅವರಿಗೆ ಫೋನ್ ಮಾಡಿ "ತಂಬಿ ನೀನೇ ಬಂದು ನನಗೆ ಭರತ್ ಪ್ರಶಸ್ತಿ ಕೊಡಬೇಕು" ಎಂದು ಅಭಿಮಾನದಿಂದ ಕೇಳಿಕೊಂಡರಂತೆ. ಆದರೆ, ಆಗಷ್ಟೇ ಪೈಲ್ಸ್ ಆಪರೇಷನ್ ಆಗಿದ್ದ ರಾಜ್‌ಕುಮಾರ್ ಅವರಿಗೆ ಕುಳಿತುಕೊಳ್ಳಲು ಆಗುತ್ತಿರಲಿಲ್ಲ. ಹಾಗಾಗಿ ಎಂ.ಜಿ.ಆರ್ ಅವರಿಗೆ ತಮ್ಮ ಪರಿಸ್ಥಿತಿಯನ್ನು ರಾಜ್‌ಕುಮಾರ್ ಅವರು ಹೇಳಿದರಂತೆ. ಆದರೂ ಎಂ.ಜಿ.ಆರ್ ಒಷ್ಟದೆ ಒಂದೈದು ನಿಮಿಷ ಬಂದು ಹೋಗಿ, ನೀವು ಕೂರಲೇ ಬೇಡಿ, ಬರೋಕ್ಕಾಗಲ್ಲ ಅಂತ ಮಾತ್ರ ಹೇಳಬೇಡಿ. ಖಂಡಿತ ನೀವು ಬರಲೇಬೇಕು ತಂಬಿ ಎಂದರಂತೆ. ಆಗ ವಿಧಿಯಿಲ್ಲದೆ ಕುಳಿತುಕೊಳ್ಳಲು ಆಗದಂತಹ ನೋವಿನ ಪರಿಸ್ಥಿತಿಯಲ್ಲಿಯೂ ರಾಜ್‌ಕುಮಾರ್ ಅವರು ಸಮಾರಂಭಕ್ಕೆ ಹೋದಾಗ ಎಂ.ಜಿ.ಆರ್. ಅವರೇ ಬಂದು ರಾಜ್‌ಕುಮಾರ್ ಅವರ ಕಾರಿನ ಬಾಗಿಲನ್ನು ತೆಗೆದು ಅಲ್ಲಿಂದಲೇ ರಾಜ್‌



ಕುಮಾರ್ ನಡೆಯುವ ಹಾದಿಗೆ ಸ್ವತಃ ಡಾ.ಎಂ.ಜಿ.ಆರ್ ಅವರೇ ಹೂ ಹಾಸುತ್ತಾ ವೇದಿಕೆಗೆ ಕರೆದೊಯ್ದಿದ್ದರಂತೆ.

ಕನ್ನಡದ ಅಣ್ಣ ವೇದಿಕೆ ಏರುತ್ತಿದ್ದಂತೆಯೇ ಇಡೀ ತಮಿಳುನಾಡಿಗೆ ತಮಿಳುನಾಡೇ ಬಿದ್ದುಹೋಗುವಂತೆ ಕರತಾಡನದೊಡನೆ ಕಾರ್ಯಕ್ರಮವು ಶುರುವಾಯಿತಂತೆ. ಆಗ, ಭರತ್ ಅವಾರ್ಡನ್ನು ತಂಬಿಗೆ ನೀನೇ ಬಂದು ಕೊಡಬೇಕೆಂದಾಗ ಪೈಲ್ಸ್ ಆಪರೇಷನ್ ಆಗಿ ಕುಳಿತುಕೊಳ್ಳಲಾಗದಿದ್ದರೂ ನನಗೋಸ್ಕರ ಅವರು ಬಂದಿದ್ದಾರೆ. ಆದ್ದರಿಂದ ರಾಜ್‌ಕುಮಾರ್ ಅವರು ನನಗೆ ಅವಾರ್ಡ್ ಕೊಟ್ಟು ಹೊರಡುತ್ತಾರೆ. ನಂತರ ಉಳಿದ ಕಾರ್ಯಕ್ರಮ ನಡೆಯುತ್ತದೆ ಎಂದು ಸ್ವತಃ ಎಂ.ಜಿ.ಆರ್. ಅವರೇ ಮೈಕ್‌ನಲ್ಲಿ ಅನೌನ್ಸ್ ಮಾಡಿ ನಂತರ ರಾಜ್‌ಕುಮಾರ್ ಹಸ್ತದಿಂದ ಪ್ರಶಸ್ತಿ ಪಡೆದು ಮತ್ತೆ ಅವರನ್ನು ಕಾರಿನ ತನಕ ತಾವೇ ಬಿಟ್ಟು ಬಂದು ಆ ಮೇಲೆ ಕಾರ್ಯಕ್ರಮಕ್ಕೆ ವೇದಿಕೆ ಹತ್ತಿದ್ದರಂತೆ.

ನಮ್ಮ ಕನ್ನಡ ಕಂಠೀರವ ಡಾ.ರಾಜ್‌ಕುಮಾರ್ ಎಂಥಾ ಮೇರು ಕಲಾವಿದರೆಂಬುದಕ್ಕೆ ಮತ್ತು ಅವರ ಮೇರು ಸದೃಶ ವ್ಯಕ್ತಿತ್ವಕ್ಕೆ ಇದೊಂದು ಘಟನೆಯೇ ಸಾಕು. ಇಂಥ ಸಹಸ್ರಾರು ಘಟನೆಗಳು ಡಾ.ರಾಜ್ ಅವರ ಬದುಕಿನಲ್ಲಿ ತುಂಬಿವೆ. ಇಡೀ ತಮಿಳುನಾಡನ್ನು ತನ್ನ ತೋರು ಬೆರಳಿನಲ್ಲಿಟ್ಟುಕೊಂಡಂತೆ ಅಗಾಧವಾಗಿ ಬೆಳೆದು ನಿಂತು ತಮಿಳರಿಂದ ಪೂಜಿಸಲ್ಪಡುತ್ತಿದ್ದ ಡಾ.ಎಂ.ಜಿ.ರಾಮಚಂದ್ರನ್ ಅವರಂಥ ಮಹಾನ್ ಕಲಾವಿದರು ಡಾ.ರಾಜ್ ಅವರಿಗೆ ಶಿರಬಾಗಿ ಈ ಮಟ್ಟದ ಗೌರವ ಸಲ್ಲಿಸುತ್ತಿದ್ದರೆಂದರೆ ಅದು ಕನ್ನಡದ ಭಾಗ್ಯವೇ ಸರಿ. ಡಾ.ರಾಜ್ ಮೂಲಕ ವಿಶ್ವದಾದ್ಯಂತ ಇಂಥ ಅನೇಕ ಗೌರವಗಳು ಕನ್ನಡಕ್ಕೆ ದಕ್ಕಿವೆ. ತನ್ಮೂಲಕ ಕರ್ನಾಟಕದ ಘನತೆ ಹೆಚ್ಚಿಸಿವೆ. ಅಂತೆಯೇ ಡಾ.ರಾಜ್ ಅವರಿಂದಾಗಿ ಅವರು ಜನ್ಮತಾಳಿದ ಗಾಜನೂರು ಗ್ರಾಮ, ಅವರ ಜನ್ಮ ದಿನಾಂಕವಾದ ಸಾವಿರದ ಒಂಭೈನೂರ ಇಪ್ಪತೊಂಬತ್ತು ಏಪ್ರಿಲ್ ಇಪ್ಪತ್ತನಾಲ್ಕು, ಅವರಿಗೆ ಜನ್ಮ ನೀಡಿದ ಸಿಂಗನಲ್ಲೂರು ಪುಟ್ಟಸ್ವಾಮಯ್ಯ ಮತ್ತು ಲಕ್ಷ್ಮಮ್ಮ ದಂಪತಿಗಳು, ಅವರ ಕೈಹಿಡಿದ ಪಾರ್ವತಮ್ಮ ರಾಜ್‌ಕುಮಾರ್, ಒಡಹುಟ್ಟಿದ ಸಹೋದರ ವರದಪ್ಪ, ಸಹೋದರಿ ಶಾರದಮ್ಮ... ಹೀಗೆ ಡಾ.ರಾಜ್ ಹುಟ್ಟಿದ ಸ್ಥಳ, ದಿನಾಂಕ, ವರ್ಷ, ಹುಟ್ಟಿಗೆ ಕಾರಣಕರ್ತರಾದ ತಂದೆ–ತಾಯಿಗಳು ಮತ್ತು ಒಡಹುಟ್ಟಿದವರು ಹಾಗೂ ಹೆಂಡತಿ ಮಕ್ಕಳೆಲ್ಲರಿಗೂ ವಿಶೇಷ ಮಹತ್ವ ದೊರೆತಿದೆ. ಎಲ್ಲಕ್ಕಿಂತ ಮಿಗಿಲಾಗಿ ಡಾ.ರಾಜ್ ಅವರಿಂದ ಇಡೀ ಕನ್ನಡ ನಾಡಿನ ಹಿರಿಮೆ ಹೆಚ್ಚಿದೆ ಎಂದರೆ ಖಂಡಿತ ಉತ್ಪ್ರೇಕ್ಷೆಯಾಗಲಾರದು. ಡಾ.ರಾಜ್ ನಿಧನರಾದ 2006 ಏಪ್ರಿಲ್ 12 ಸಹ ಎಂದೂ ಮರೆಯದ ನೋವಿನ ದಿನವಾಗಿ ಕನ್ನಡಿಗರೆದೆಯಲ್ಲಿ ಉಳಿದಿದೆ.

ಇದು ಡಾ.ರಾಜ್‌ಕುಮಾರ್ ಬಗೆಗಿನ ಗೌರವದ ವಿಷಯವಾಯಿತು. ಇನ್ನು ಮಾನವೀಯತೆಯ ವಿಷಯಕ್ಕೆ ಬಂದರೆ ಒಮ್ಮೆ ಡಾ.ಎಂ.ಜಿ.ಆರ್ ಅವರು ಮರಣದಂಚಿನಲ್ಲಿ ಆಸ್ಪತ್ರೆಯಲ್ಲಿದ್ದಾಗ ಅವರ ಉಳಿವಿಗಾಗಿ ಡಾ.ರಾಜ್ ಅವರು ಪ್ರಾರ್ಥನೆಗೈದು ನಂಜನಗೂಡಿನ ನಂಜುಂಡೇಶ್ವರಸ್ವಾಮಿಯ ಸನ್ನಿಧಿಯಲ್ಲಿ ತೀರಾ ಸಾಮಾನ್ಯ ವ್ಯಕ್ತಿಯಂತೆ ಉರುಳುಸೇವೆ ಮಾಡಿದ್ದರಂತೆ. ಆಗ ಡಾ.ರಾಜ್ ಅವರ ಪ್ರಾರ್ಥನೆಯ ಫಲವೋ ಎಂಬಂತೆ ಎಂ.ಜಿ.ಆರ್. ಅವರು ಪೂರ್ಣ ಗುಣಮುಖರಾದರಂತೆ. ಆ ಸಂದರ್ಭದಲ್ಲಿ ತಮಿಳುನಾಡಿನಲ್ಲಿ ಜರುಗಿದ ಬೃಹತ್ ಜನಸ್ತೋಮದ ಸಮಾರಂಭದಲ್ಲಿ ಭಾಗವಹಿಸಿದ್ದ ಎಂ.ಜಿ.ಆರ್. ಅವರು ಡಾ. ರಾಜ್ ಅವರನ್ನು ಕುರಿತು ನಾನಿಂದು ನನ್ನ ತಂಬಿಯಿಂದ ಬದುಕಿ ಬಂದಿದ್ದೇನೆ ಎಂದು ಇಡೀ ತಮಿಳುನಾಡು ಮೊಳಗುವಂತೆ ಕೂಗಿ ಹೇಳಿದ್ದರಂತೆ. ತನಗಾಗಿ ಮಿಡಿದ ಡಾ.ರಾಜ್‌ರ ಮಾನವೀಯ ಹೃದಯಕ್ಕೆ ಸಾರ್ವತ್ರಿಕವಾಗಿ ಡಾ.ಎಂಜಿಆರ್ ಈ ರೀತಿ ಕೃತಜ್ಞತೆ ಸಲ್ಲಿಸಿದ್ದರಂತೆ.

ಡಾ.ರಾಜ್‌ಕುಮಾರ್ ಅವರು ಸ್ನೇಹ, ಪ್ರೀತಿ, ವಿಶ್ವಾಸದ ವಿಷಯದಲ್ಲಿ ಎಂದೂ ಕೂಡ ಭಾಷಾಂಧತೆ ಮತ್ತು ವೃತ್ತಿ ಮತ್ಸರತೆ ಸೇರಿದಂತೆ ಯಾವುದೇ ರೀತಿಯ ತಾರತಮ್ಯತೆ, ದ್ವೇಷಾಸೂಯತೆ ಬಾರದಂತೆ ಬದುಕಿದವರು. ಈ ಗುಣವೇ ಡಾ. ಎಂ.ಜಿ.ಆರ್. ಅವರಂತಹವರು ಡಾ.ರಾಜ್ ಅವರನ್ನು ಈ ರೀತಿ ತೀರಾ ಮನಸ್ಸಿಗೆ ಹಚ್ಚಿಕೊಳ್ಳಲು ಸಾಧ್ಯವಾದದ್ದು. ಹಾಗಾಗಿ ಆ ರಾಜ್ಯ–ಈ ರಾಜ್ಯ, ಆ ಪ್ರದೇಶ–ಈ ಪ್ರದೇಶ ಎಂಬ ಭೇದ–ಭಾವ ಇರದೆ ದೊಡ್ಡ ತಾರೆಗಳಿಂದ ಹಿಡಿದು ಸಣ್ಣಪುಟ್ಟ ಕಲಾವಿದರುಗಳ ತನಕ ಭಾರತೀಯ ಚಿತ್ರರಂಗದ ಬಹುಪಾಲು ಮಂದಿ ಡಾ.ರಾಜ್‌ರ ಮನಸ್ಸಿನ ಸಂಬಂಧಿಗಳಾಗಿದ್ದರು. ಅದು ಅಮಿತಾಬ್ ಬಚ್ಚನ್, ರಾಜ್‌ಕಪೂರ್ ಇರಬಹುದು, ಕಮಲಹಾಸನ್, ಶಿವಾಜಿ ಗಣೇಶನ್ ಆಗಿರಬಹುದು, ಮೋಹನ್‌ಲಾಲ್, ಮುಮ್ಮಟಿ, ಅಕ್ಕಿನೇನಿ ನಾಗೇಶ್ವರರಾವ್ ಇರಲಿ, ರಜನಿಕಾಂತ್, ಎನ್.ಟಿ.ಆರ್ ಆಗಿರಲಿ ಎಲ್ಲರಿಗೂ ಡಾ.ರಾಜ್ ಅಂದರೆ ಅಪರಿಮಿತ ಅಭಿಮಾನವಿತ್ತು. ಇದೆಲ್ಲ ಸಾಧ್ಯವಾದದ್ದು ಡಾ.ರಾಜ್ ಅವರ ಮಹದದ್ಭುತ ಅಭಿನಯ ಕಲೆಯಿಂದಲೇ. ಇವರ ಅಭಿನಯದ ಪ್ರತಿಯೊಂದು ಚಿತ್ರಗಳೂ ಅಮೂಲ್ಯ ರತ್ನಗಳೇ ಆಗಿ ಕನ್ನಡ ಚಿತ್ರರಂಗ ಪ್ರಜ್ವಲಿಸುವಂತೆ ಮಾಡಿವೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy News papers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೂರನೇ ಪುಟದಿಂದ

ಬಹಿರಂಗ ಪ್ರಚಾರಕ್ಕೆ ಇಂದು ತೆರೆ

ಬದಲಾದ ರಾಜಕೀಯ ಸ್ಥಿತಿಯಲ್ಲಿ ಜೆಡಿಎಸ್, ಬಿಜೆಪಿ ಜೊತೆ ಕೈಜೋಡಿಸಿ ಕಾಂಗ್ರೆಸ್ ವಿರುದ್ಧ ಕಣಕ್ಕಿಳಿದಿದೆ, ಎಲ್ಲಾ ಕ್ಷೇತ್ರಗಳನ್ನು ಎನ್‌ಡಿಎ ಒಕ್ಕೂಟ ತಮ್ಮದಾಗಿಸಿಕೊಳ್ಳಲು ಪ್ರಧಾನಿ ಮೋದಿ ಹಾಗೂ ಅಮಿತ್ ಷಾ ಈ ಕ್ಷೇತ್ರಗಳಲ್ಲಿ ಎರಡು ಬಾರಿ ಚುನಾವಣಾ ಪ್ರಚಾರ ಕೈಗೊಂಡಿದ್ದರು. ಕೊನೆಯ ಎರಡು ದಿನಗಳಲ್ಲಿ ಮತದಾರರಿಗೆ ಆಮಿಷಗಳ ಮಹಾಪೂರವೇ ಹರಿದು ಬರುವ ಸಾಧ್ಯತೆ ಹಿನ್ನೆಲೆಯಲ್ಲಿ ಚುನಾವಣಾ ಆಯೋಗದ ವೀಕ್ಷಕರು ತೀವ್ರ ನಿಗಾ ಇಟ್ಟಿದ್ದು, ಎಲ್ಲೆಡೆ ಕಟ್ಟೆಚ್ಚರ ವಹಿಸಲಾಗಿದೆ. ಪ್ರತಿಯೊಂದು ಕ್ಷೇತ್ರಗಳ ಗಡಿ ಭಾಗಗಳಲ್ಲಿ ಸಂಚರಿಸುವ ವಾಹನಗಳ ಮೇಲೆ ತೀವ್ರ ನಿಗಾ ಇಡಲಾಗಿದ್ದು, ಸೂಕ್ತ ದಾಖಲೆಗಳಿಲ್ಲದ ಹಣ, ಬೆಲೆ ಬಾಳುವ ವಸ್ತುಗಳ ಸಾಗಾಣಿಕೆ ತಡೆಗೆ ಅಲ್ಲಲ್ಲಿ ತಪಾಸಣೆ ನಡೆಸಲಾಗುತ್ತಿದೆ.

ಕ್ಷೇತ್ರಗಳಲ್ಲಿ ಮತದಾನಕ್ಕೆ ಸಿದ್ಧತೆ ಪೂರ್ಣ

ಅಧ್ಯಕ್ಷಾಧಿಕಾರಿ ಹಾಗೂ ಮತದಾರರ ಗುರುತಿಸಲು ಒಬ್ಬ ಡಿ ಗ್ರೂಪ್ ನೌಕರರನ್ನು ನಿಯೋಜಿಸಲಾಗಿದೆ.

ಅಂಚೆ ಮತದಾನ: ಮೈಸೂರು ಲೋಕಸಭಾ ಕ್ಷೇತ್ರದಲ್ಲಿ 85 ವರ್ಷ ಮೇಲ್ಪಟ್ಟ 2,360, 889 ವಿಶೇಷಚೇತನರು ಹಾಗೂ ಅತ್ಯವಶ್ಯ ಸೇವೆಯ 663 ಮಂದಿ ಅಂಚೆ ಮತದಾನ ಮತ್ತು ಮನೆ ಮನೆಗೆ ತೆರಳಿದಾಗ ಚುನಾವಣಾ ಪ್ರಮಾಣ ಪತ್ರದ ಮೂಲಕ ಮತ ಚಲಾಯಿಸಿದ್ದಾರೆ.

65 ವಿಶೇಷ ಮತಗಟ್ಟೆ: ಕ್ಷೇತ್ರದ ಚಾಮುಂಡೇಶ್ವರಿ, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಮಡಿಕೇರಿ ವಿಧಾನಸಭಾ ಕ್ಷೇತ್ರಗಳಲ್ಲಿ ತಲಾ 5 ಸಖಿ ಬೂತ್‌ಗಳು, 2 ಸಾಂಪ್ರದಾಯಿಕ, ದಿವ್ಯಾಂಗ, 8 ಯುವ ಹಾಗೂ ವಿಷಯಾಧಾರಿತ ಸೇರಿ ಒಟ್ಟು 65 ವಿಶೇಷ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಎಲ್ಲಾ ಮತಗಟ್ಟೆಗಳಿಗೂ ವ್ಹೀಲ್ ಚೇರ್, ಭೂತಗನ್ನಡಿ, ದೃಷ್ಟಿದೋಷವುಳ್ಳವರಿಗೆ ಬ್ರೈಲ್ ಬ್ಯಾಲೆಟ್ ಪೇಪರ್ ಅನ್ನು ಸರಬರಾಜು ಮಾಡಲಾಗಿದೆ.

ಅಭ್ಯರ್ಥಿಗಳ ಬೂತ್‌ಗಳು: ಮತಗಟ್ಟೆಯಿಂದ 200 ಮೀ. ದೂರದಲ್ಲಿ ಅಭ್ಯರ್ಥಿಗಳ ಬೂತ್ ಸ್ಥಾಪಿಸಲು ಅವಕಾಶ ಕಲ್ಪಿಸಲಾಗಿದೆ. ಅಭ್ಯರ್ಥಿಯ ಭಾವಚಿತ್ರ ಹೊರತುಪಡಿಸಿ ಮತದಾರರಿಗೆ ಮಾಹಿತಿ ಮಾತ್ರ ನೀಡುವಂತೆ ಸುಚಿಸಲಾಗಿದೆ. ಮತಗಟ್ಟೆಗೊಬ್ಬರಂತೆ ಪೋಲಿಂಗ್ ಏಜೆಂಟರನ್ನು ನೇಮಿಸಿಕೊಳ್ಳಲು ಅಭ್ಯರ್ಥಿಗಳಿಗೆ ಅವಕಾಶ ಕಲ್ಪಿಸಲಾಗಿದೆ.

ಮದ್ಯ ಮಾರಾಟ ನಿಷೇಧ: ಚುನಾವಣೆ ಹಿನ್ನೆಲೆಯಲ್ಲಿ ನಾಳೆ (ಏ. 24) ಸಂಜೆ 5 ಗಂಟೆಯಿಂದ ಏಪ್ರಿಲ್ 26ರ ಮಧ್ಯರಾತ್ರಿವರೆಗೆ ಜಿಲ್ಲೆಯಾದ್ಯಂತ ಮದ್ಯ ಮಾರಾಟ ನಿಷೇಧಿಸಲಾಗಿದೆ. ಏಪ್ರಿಲ್ 26 ರಂದು ನಡೆಯುವ ಎಲ್ಲಾ ಸಂತೆ, ಜಾತ್ರೆ, ಉತ್ಸವಗಳನ್ನೂ ಮುಂದೂಡುವಂತೆ ಆದೇಶಿಸಲಾಗಿದೆ.

ಮೊಬೈಲ್, ಕ್ಯಾಮರಾ ನಿಷೇಧ: ಏಪ್ರಿಲ್ 26 ರಂದು ನಡೆಯಲಿರುವ ಮತದಾನದಂದು ಮತಗಟ್ಟೆಗೆ ಮೊಬೈಲ್ ಫೋನ್, ಕ್ಯಾಮರಾಗಳನ್ನು ಕೊಂಡೊಯ್ಯುವಂತಿಲ್ಲ. ಮತಗಟ್ಟೆಗಳಿಗೆ ಸಿಸಿಟಿವಿ ಕ್ಯಾಮರಾ ಅಳವಡಿಸಲಾಗಿದ್ದು, ಸೂಕ್ಷ್ಮ ಮತ್ತು ಅತೀ ಸೂಕ್ಷ್ಮ ಮತಗಟ್ಟೆಗಳಿಗೆ ಶಸ್ತ್ರಸಜ್ಜಿತ ಅರೆಸೇನಾಪಡೆ ಸಿಬ್ಬಂದಿಗಳನ್ನು ನಿಯೋಜಿಸಿ ಕಟ್ಟೆಚ್ಚರ ವಹಿಸಲಾಗಿದೆ.

ಚಾಮರಾಜನಗರ: ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದಲ್ಲಿ ಏ.26ರಂದು ನಡೆಯುವ ಮತದಾನಕ್ಕೆ ಸಕಲ ಸಿದ್ಧತೆ ಕೈಗೊಳ್ಳಲಾಗಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಶಿಲ್ಪನಾಗ್ ತಿಳಿಸಿದರು. ನಗರದ ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತ ನಾಡಿದ ಅವರು, ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ 983 ಮತ್ತು ಮೈಸೂರು ಜಿಲ್ಲೆಯ ನಾಲ್ಕು ವಿಧಾನಸಭಾ ಕ್ಷೇತ್ರಗಳಲ್ಲಿ 1017 ಮತಗಟ್ಟೆಗಳು ಸೇರಿದಂತೆ ಒಟ್ಟು 2 ಸಾವಿರ ಮತಗಟ್ಟೆಗಳನ್ನು ಸ್ಥಾಪಿಸಲಾಗಿದೆ. ಮೈಸೂರು ಜಿಲ್ಲೆಯ ಹೆಚ್.ಡಿ.ಕೋಟೆ ವಿಧಾನಸಭಾ ಕ್ಷೇತ್ರದಲ್ಲಿ 282, ನಂಜನಗೂಡು 246, ವರುಣ 261 ಹಾಗೂ ತಿ.ನರಸೀಪುರ 228 ಹಾಗೂ ಚಾ.ನಗರ ಜಿಲ್ಲೆಯ ಹನೂರು 254, ಕೊಳ್ಳೇಗಾಲ 241, ಚಾಮರಾಜನಗರ 239 ಮತ್ತು ಗುಂಡ್ಲುಪೇಟೆ ಕ್ಷೇತ್ರದಲ್ಲಿ 249 ಮತಗಟ್ಟೆಗಳನ್ನು ತೆರೆಯಲಾಗುವುದು. ಒಟ್ಟಾರೆ ಮತಗಟ್ಟೆಗಳ ಪೈಕಿ 263 ಮತಗಟ್ಟೆಗಳು ನಗರ ಪ್ರದೇಶದಲ್ಲಿ ಹಾಗೂ 1737 ಮತಗಟ್ಟೆಗಳು ಗ್ರಾಮೀಣ ಪ್ರದೇಶದಲ್ಲಿವೆ ಎಂದು ಮಾಹಿತಿ ನೀಡಿದರು. ಶಾಂತಿಯುತ, ಪಾರದರ್ಶಕ ಹಾಗೂ ನ್ಯಾಯಸಮ್ಮತವಾಗಿ ಚುನಾವಣೆ ನಡೆಸಲು ಮತ್ತು ಕಾನೂನು ಸುವ್ಯವಸ್ಥೆ ಕಾಪಾಡುವ ಸಲುವಾಗಿ ಜಿಲ್ಲೆಯಾದ್ಯಂತ ಒಟ್ಟು 1667 ಪೊಲೀಸ್ ಅಧಿಕಾರಿಗಳು, ಸಿಬ್ಬಂದಿಯನ್ನು ನಿಯೋಜಿಸ ಲಾಗಿದೆ. ಜಿಲ್ಲೆಯ ಸಾಂಸ್ಕೃತಿಕ ಕಲೆಗಳ ಮಹತ್ವ ತಿಳಿಸಲು ಅನುಕೂಲವಾಗುವಂತೆ ಹನೂರು ಹಾಗೂ ಚಾಮರಾಜನಗರ ಕ್ಷೇತ್ರಗಳಲ್ಲಿ ತಲಾ ಒಂದೊಂದು ಸಾಂಪ್ರದಾಯಿಕ ಮತಗಟ್ಟೆಗಳನ್ನು ತೆರೆಯಲಾಗಿದೆ ಎಂದರು. ಲೋಕಸಭಾ ಕ್ಷೇತ್ರ ವ್ಯಾಪ್ತಿ ಯಲ್ಲಿ ಒಟ್ಟು 8,78,702 ಪುರುಷರು, 8,99,501 ಮಹಿಳೆಯರು, 107 ಇತರರು ಸೇರಿದಂತೆ ಒಟ್ಟು 17,78,310 ಮತದಾರರಿದ್ದಾರೆ. 2559 ಬ್ಯಾಲೆಟ್ ಯೂನಿಟ್ (ಬಿಯು), 2618 ಕಂಟ್ರೋಲ್ ಯೂನಿಟ್ (ಸಿಯು), 2792 ವಿವಿ ಪ್ಯಾಟ್ ಹಂಚಿಕೆ ಮಾಡಲಾಗಿದೆ. ಜಿಲ್ಲೆಯ ಒಟ್ಟು 983 ಮತಗಟ್ಟೆಗಳಿಗೆ 1196 ಪಿಆರ್‌ಒ, 1196 ಎಪಿಆರ್‌ಒ, 2392 ಪಿಒ ಸೇರಿದಂತೆ ಒಟ್ಟು 4784 ಅಧಿಕಾರಿಗಳು ಹಾಗೂ ಸಿಬ್ಬಂದಿ ನಿಯೋಜಿಸಲಾಗಿದೆ ಎಂದು ತಿಳಿಸಿದರು.

ಮತ ಎಣಿಕೆ ಕಾರ್ಯ ಚಾಮರಾಜನಗರದ ಬೇಡರ ಪುರದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ಜೂ.4ರಂದು ನಡೆಯಲಿದೆ. ಮತದಾನದ ಪ್ರಮಾಣ ವನ್ನು ಹೆಚ್ಚಿಸುವ ಸಲುವಾಗಿ ಜಿಲ್ಲೆಯಲ್ಲಿ ಚುನಾ ವಣಾ ಜಾಗೃತಿಗಾಗಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ ಹಾಗೂ ಜಿಲ್ಲಾ ಸ್ವೀಪ್ ಸಮಿತಿ ವತಿಯಿಂದ ಹಮ್ಮಿಕೊಳ್ಳಲಾಗಿರುವ ವಿವಿಧ ಮತದಾನ ಜಾಗೃತಿ ಕಾರ್ಯಕ್ರಮಗಳ ಕುರಿತು ಮಾಹಿತಿ ನೀಡಿದರು. ಜಿಲ್ಲಾ ಪಂಚಾಯಿತಿ ಮುಖ್ಯ ಕಾರ್ಯನಿರ್ವಾಹಕಾಧಿಕಾರಿ ಆನಂದ್ ಪ್ರಕಾಶ್ ಮೀನಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪದ್ಮಿನಿ ಸಾಹು, ಹೆಚ್ಚುವರಿ ಜಿಲ್ಲಾಧಿಕಾರಿ ಗೀತಾ ಹುಡೇದ ಸುದ್ದಿಗೋಷ್ಠಿಯಲ್ಲಿ ಇದ್ದರು.

ಇಂದು ಸಂಜೆ 6 ಗಂಟೆಗೆ ಬಹಿರಂಗ ಪ್ರಚಾರಕ್ಕೆ ತೆರೆ

ಮೈಸೂರು, ಏ. 23(ಆರ್‌ಕೆ)- ಏಪ್ರಿಲ್ 26ರಂದು ನಡೆಯಲಿರುವ ಲೋಕಸಭಾ ಚುನಾವಣಾ ಬಹಿರಂಗ ಪ್ರಚಾರ ನಾಳೆ (ಏ. 24) ಸಂಜೆ 6 ಗಂಟೆಗೆ ಅಂತ್ಯಗೊಳ್ಳಲಿದೆ ಎಂದು ಜಿಲ್ಲಾ ಚುನಾವಣಾಧಿಕಾರಿ ಡಾ. ಕೆ.ವಿ. ರಾಜೇಂದ್ರ ತಿಳಿಸಿದ್ದಾರೆ. ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾನ ಮುಕ್ತಾಯಗೊಳ್ಳುವ 48 ಗಂಟೆ ಮುಂಚಿತವಾಗಿ ಅಭ್ಯರ್ಥಿಗಳು, ಏಪ್ರಿಲ್ 24ರ ಸಂಜೆ 6 ಗಂಟೆಗೆ ತಮ್ಮ ಬಹಿರಂಗ ಪ್ರಚಾರವನ್ನು ಮುಕ್ತಾಯಗೊಳಿಸಬೇಕೆಂದೂ ಅವರು ತಿಳಿಸಿದ್ದಾರೆ.

ಈ 48 ಗಂಟೆ ಅವಧಿಯಲ್ಲಿ ಟೆಲಿವಿಷನ್, ರೇಡಿಯೋ, ಕೇಬಲ್ ನೆಟ್‌ವರ್ಕ್‌ನಂತಹ ಮಾಧ್ಯಮಗಳಲ್ಲಿ ಚುನಾವಣಾ ವಿಷಯ, ಚರ್ಚೆ, ಪ್ರಚಾರ, ಸಂದರ್ಶನ, ಜಾಹೀರಾತು ಹಾಗೂ ಅಭಿಪ್ರಾಯ ಪ್ರಸಾರ ಮಾಡದಂತೆ ನಿಷೇಧಿಸಲಾಗಿದೆ ಎಂದು ಅವರು ತಿಳಿಸಿದರು. ಕ್ಷೇತ್ರದ ಮತದಾರರಲ್ಲದ ಹೊರಗಿನ ರಾಜಕೀಯ ಪಕ್ಷಗಳ ಮುಖಂಡರು ಏಪ್ರಿಲ್ 24ರ ಸಂಜೆ 6 ಗಂಟೆ ನಂತರ ಮತದಾನ ಪ್ರಕ್ರಿಯೆ ಪೂರ್ಣಗೊಳ್ಳುವವರೆಗೆ ಕ್ಷೇತ್ರ ವ್ಯಾಪ್ತಿಯಲ್ಲಿರದಂತೆ ಸೂಚಿಸಲಾಗಿದೆ. ಕಲ್ಯಾಣ ಮಂಟಪ, ಸಮುದಾಯ ಭವನ, ವಸತಿ ಗೃಹಗಳು, ಅತಿಥಿ ಗೃಹಗಳು, ಕ್ಷೇತ್ರದ ಮತದಾರರಲ್ಲದವರು 48 ಗಂಟೆ ಮುಂಚಿತವಾಗಿ ಖಾಲಿ ಮಾಡಿ ಹೊರಗೆ ಹೋಗಬೇಕು ಎಂದು ಜಿಲ್ಲಾಧಿಕಾರಿಗಳು ತಿಳಿಸಿದ್ದಾರೆ.

ಇಂದು ಸಂಜೆ 6 ಗಂಟೆಯಿಂದ ಏ.26ರ ಮತದಾನ ಮುಕ್ತಾಯದವರೆಗೆ ನಿಷೇಧಾಜ್ಞೆ

ಮೈಸೂರು, ಏ. 23(ಆರ್‌ಕೆ)- ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ನಾಳೆ ಸಂಜೆ 6 ಗಂಟೆಯಿಂದ ಏಪ್ರಿಲ್ 26ರಂದು ಮತದಾನ ಮುಕ್ತಾಯವಾಗುವವರೆಗೆ ಮೈಸೂರು ನಗರ ಮತ್ತು ಜಿಲ್ಲೆಯಲ್ಲಿ ಸೆಕ್ಷನ್ 144 ರೀತ್ಯಾ ನಿಷೇಧಾಜ್ಞೆ ಜಾರಿ ಮಾಡಲಾಗಿದೆ.

ಆ ಅವಧಿಯಲ್ಲಿ 5ಕ್ಕಿಂತ ಹೆಚ್ಚು ಮಂದಿ ಗುಂಪು ಸೇರುವುದು, ಮೆರವಣಿಗೆ, ಸಭೆ-ಸಮಾರಂಭ ನಡೆಸುವಂತಿಲ್ಲ. ಶಸ್ತ್ರ, ಸ್ಫೋಟಕ ವಸ್ತು, ಮಾರಕಾಸ್ತ್ರ ಕೊಂಡೊಯ್ಯುವುದು, ಪ್ರತಿಮೆ ಪ್ರದರ್ಶನ, ಪ್ರತಿಕೃತಿ ದಹನ, ಘೋಷಣೆ ಕೂಗುವುದು, ಪ್ರಚೋದನಾಕಾರಿ ಹೇಳಿಕೆ, ಉದ್ರೇಕಕಾರಿ ಹಾಡು ಹಾಡುವುದು, ವ್ಯಕ್ತಿಗಳ ತೇಜೋವಧೆ ಮಾಡುವಂತಿಲ್ಲ. ಅಂತ್ಯ ಸಂಸ್ಕಾರ, ಮದುವೆ, ಧಾರ್ಮಿಕ ಮೆರವಣಿಗೆಗೆ ನಿರ್ಬಂಧವಿರುವುದಿಲ್ಲ. ಆದರೆ, ನೀತಿ ಸಂಹಿತೆ ಉಲ್ಲಂಘನೆಯಾಗದಂತೆ ಹಾಗೂ ಕಾನೂನು ಸುವ್ಯವಸ್ಥೆಗೆ ಧಕ್ಕೆಯಾಗದಂತೆ ನಿಗಾ ವಹಿಸಬೇಕು, ಮತಗಟ್ಟೆಗಳ ಸುತ್ತ 200 ಮೀ. ವ್ಯಾಪ್ತಿಯಲ್ಲಿ ಪ್ರಚಾರ ಸಂಬಂಧ ಪೋಸ್ಟರ್, ಬ್ಯಾನರ್ ಪ್ರಸಾರ ಮಾಡುವಂತಿಲ್ಲ.

ಸೆಕ್ಷನ್ 144 ರೀತ್ಯಾ ನಿಷೇಧಾಜ್ಞೆ ಉಲ್ಲಂಘಿಸಿದವರ ವಿರುದ್ಧ ಕಾನೂನು ರೀತಿಯ ಕ್ರಮ ವಹಿಸಲಾಗುವುದು ಎಂದು ನಗರ ಪೊಲೀಸ್ ಆಯುಕ್ತರ ಆದೇಶದಲ್ಲಿ ಎಚ್ಚರಿಕೆ ನೀಡಿದ್ದಾರೆ.

ಮತ ಚಲಾಯಿಸಲು ಕನಿಷ್ಠ ಈ ದಾಖಲೆ ತನ್ನಿ!

ಮೈಸೂರು, ಏ. 23(ಆರ್‌ಕೆ)- ಏಪ್ರಿಲ್ 26ರಂದು ಮತದಾನ ಮಾಡಲು ಭಾರತ ಚುನಾವಣಾ ಆಯೋಗ ನೀಡಿರುವ ಮತದಾರರ ಭಾವಚಿತ್ರವಿರುವ ಗುರುತಿನ ಚೀಟಿಯನ್ನು ಮತಗಟ್ಟೆಗೆ ತರಬೇಕು. ಮತದಾರರ ಗುರುತಿನ ಚೀಟಿ ಇಲ್ಲದಿದ್ದರೆ, ಈ ಕೆಳಕಂಡ 11 ದಾಖಲಾತಿಗಳ ಪೈಕಿ ಯಾವುದಾದರೂ ಒಂದನ್ನು ಕೊಂಡೊಯ್ದು ಮತ ಚಲಾಯಿಸಬಹುದು. ಆಧಾರ್ ಕಾರ್ಡ್, ನರೇಗಾ ಜಾಬ್ ಕಾರ್ಡ್, ಬ್ಯಾಂಕ್-ಅಂಚೆ ಕಚೇರಿ ಪಾಸ್‌ಬುಕ್, ಆರೋಗ್ಯ ವಿಮಾ ಯೋಜನಾ ಸ್ಮಾರ್ಟ್ ಕಾರ್ಡ್, ಡ್ರೈವಿಂಗ್ ಲೈಸೆನ್ಸ್, ಪಾನ್ ಕಾರ್ಡ್, ರಾಷ್ಟ್ರೀಯ ಜನಸಂಖ್ಯೆ ನೋಂದಣಿ ವಹಿ ಯೋಜನೆಯ ಸ್ಮಾರ್ಟ್ ಕಾರ್ಡ್, ಇಂಡಿಯನ್ ಪಾಸ್‌ಪೋರ್ಟ್, ಪಿಂಚಣಿ ಪಾವತಿ ಆದೇಶ, ರಾಜ್ಯ ಅಥವಾ ಕೇಂದ್ರ ಸರ್ಕಾರದ ಉದ್ದಿಮೆಗಳು ಅಥವಾ ಖಾಸಗಿ ಔದ್ಯಮಿಕ ಸಂಸ್ಥೆಗಳು ವಿತರಿಸಿರುವ ಸೇವಾ ಗುರುತಿನ ಚೀಟಿ, ಸಂಸದರು, ವಿಧಾನಸಭೆ ಮತ್ತು ವಿಧಾನಪರಿಷತ್ ಸದಸ್ಯರಿಗೆ ಸರ್ಕಾರ ನೀಡಿರುವ ಗುರುತಿನ ಚೀಟಿ ಹಾಗೂ ಕೇಂದ್ರದ ಸಾಮಾಜಿಕ ನ್ಯಾಯ ಹಾಗೂ ಸಬಲೀಕರಣ ಮಂತ್ರಾಲಯದಿಂದ ವಿತರಿಸಿರುವ ಅನನ್ಯ ಅಂಗವೈಕಲ್ಯ ಗುರುತಿನ ಚೀಟಿ ಇವುಗಳ ಪೈಕಿ ಯಾವುದಾದರೊಂದನ್ನು ತೋರಿಸಿ ಮತದಾನ ಮಾಡಬಹುದಾಗಿದೆ.



ಪಂಚ ನ್ಯಾಯಗಳು– ಕಾಂಗ್ರೆಸ್ ಗ್ಯಾರಂಟಿ
₹1 ಲಕ್ಷ ವೇತನ
ಪ್ರತಿಯೊಬ್ಬ ವಿದ್ಯಾವಂತ ಯುವಕನಿಗೆ ಮೊದಲ ಉದ್ಯೋಗದ ಗ್ಯಾರಂಟಿ
ಸಾಲಮನ್ನಾ
ಸ್ವಾಮಿನಾಥನ್ ಆಯೋಗದ ಪ್ರಕಾರ MSP ಗೆ ಕಾನೂನು ಸ್ಥಾನಮಾನ
ಜಾತಿಗಣತಿ
ಸಾಮಾಜಿಕ ಮತ್ತು ಆರ್ಥಿಕ ಸಮಾನತೆಯನ್ನು ಖಚಿತ ಪಡಿಸಿಕೊಳ್ಳಲು ರಾಷ್ಟ್ರವ್ಯಾಪಿ ಜನಗಣತಿಯಲ್ಲಿ ಪ್ರತಿಯೊಬ್ಬ ವ್ಯಕ್ತಿ ಮತ್ತು ಪ್ರತಿ ಸಮುದಾಯವನ್ನು ಪರಿಗಣಿಸಲಾಗುವುದು
ಪ್ರತಿವರ್ಷ ₹1 ಲಕ್ಷ
ಪ್ರತಿ ಬಡ ಕುಟುಂಬದ ಒಬ್ಬ ಮಹಿಳೆಗೆ
ದಿನಕ್ಕೆ ₹400
MGNREGA ಸೇರಿದಂತೆ ರಾಷ್ಟ್ರೀಯ ಕನಿಷ್ಠ ವೇತನ
ಕಾಂಗ್ರೆಸ್ ಗೆಲ್ಲಿಸಿ
26 ಏಪ್ರಿಲ್ 2024
ಮೊದಲ ಹಂತದ ಮತದಾನ
ನುಡಿದಂತೆ ನಡೆದಿದ್ದೇವೆ...
ಇಂದು ಸಂಜೆ 4 ಗಂಟೆಗೆ – ಬೃಹತ್ ಪ್ರಚಾರ ಸಭೆ
ಸನ್ಮಾನ್ಯ ಶ್ರೀ ಸಿದ್ದರಾಮಯ್ಯನವರು
ಮಾನ್ಯ ಮುಖ್ಯಮಂತ್ರಿಯವರು, ಕರ್ನಾಟಕ ಸರ್ಕಾರ
ಸ್ಥಳ; ಅಂತರಸನಹಳ್ಳಿ, ಮಧುಗಿರಿ ರಸ್ತೆ, ತುಮಕೂರು
ಶಕ್ತಿ
ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ
ಗೃಹ ಜ್ಯೋತಿ
ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ
ಅನ್ನಭಾಗ್ಯ
ಬಡವರಿಗೆ ಪ್ರತಿ ತಿಂಗಳು 10 kg
ಗೃಹಲಕ್ಷ್ಮಿ
₹2000
ಯುವನಿಧಿ
ಪ್ರತಿ ತಿಂಗಳು ನಿರುದ್ಯೋಗ ಭತ್ಯೆ
₹3000 | ₹1500
ಇಂಡಿಯಾ ಮೈತ್ರಿ ಕೂಟ
aap
CPI
CPI (ML)
SP Samajwadi Party
ಭಾರತ ರಾಷ್ಟ್ರೀಯ ಕಾಂಗ್ರೆಸ್
ಆಮ್ ಆದ್ಮಿ ಪಾರ್ಟಿ
ಸಿಪಿಐ
ಸಿಪಿಐ ಎಂಎಲ್
ದ್ರಾವಿಡ ಮುನ್ನೇತ್ರ ಕಳಗಂ
ಸಮಾಜವಾದಿ ಪಾರ್ಟಿ
ರಾಷ್ಟ್ರೀಯವಾದಿ ಕಾಂಗ್ರೆಸ್ ಪಕ್ಷ

ಚಾಮುಂಡೇಶ್ವರಿಯಲ್ಲಿ ಜಿಟಿಡಿ ನೇತೃತ್ವದಲ್ಲಿ ಯದುವೀರ್ ಬಿರುಸಿನ ಪ್ರಚಾರ

ನೆಚ್ಚಿನ ನಾಯಕರಿಗೆ ಅಭಿಮಾನಿಗಳಿಂದ ಬೃಹತ್ ಹಾರ ಸಮರ್ಪಣೆ

ಮೈಸೂರು,ಏ.23(ಪಿಎಂ)– ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ವಿವಿಧೆಡೆ ಕ್ಷೇತ್ರದ ಶಾಸಕರೂ ಆದ ಜೆಡಿಎಸ್ ಕೋರ್ ಕಮಿಟಿ ಅಧ್ಯಕ್ಷ ಜಿ.ಟಿ.ದೇವೇಗೌಡರ ನೇತೃತ್ವದಲ್ಲಿ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮಂಗಳವಾರ ರಾತ್ರಿ ಪ್ರಚಾರ ನಡೆಸಿದರು.

ಮೊದಲಿಗೆ ಬೋಗಾದಿಗೆ ಭೇಟಿ ನೀಡಿದ ಯದುವೀರ್ ಅವರನ್ನು ಬಿಜೆಪಿ–ಜೆಡಿಎಸ್ ಮುಖಂಡರು, ಕಾರ್ಯಕರ್ತರು ಹಾಗೂ ಗ್ರಾಮಸ್ಥರು ಆತ್ಮೀಯವಾಗಿ ಸ್ವಾಗತಿಸಿದರು. ಇದೇ ವೇಳೆ ಯದುವೀರ್, ಜಿ.ಟಿ.ದೇವೇಗೌಡರು ಇನ್ನಿತರ ಮುಖಂಡರೂ ಒಳಗೊಂಡಂತೆ ಬೃಹತ್ ಹಾರ ಹಾಕಿ ಅಭಿಮಾನ ವ್ಯಕ್ತಪಡಿಸಲಾಯಿತು.

ಸೇಬು, ಕಿತ್ತಳೆ ಹಣ್ಣು ಹಾಗೂ ಗುಲಾಬಿ ಹೂಗಳನ್ನು ಹೊಂದಿದ್ದ ಈ ಬೃಹತ್ ಹಾರವನ್ನು ಗ್ರಾಮದ ಮುಖಂಡರಾದ ಶೇಖರ್, ಜೈಕುಮಾರ್ ಹಾಗೂ ಗ್ರಾಮಸ್ಥರು ತಮ್ಮ ನೆಚ್ಚಿನ ನಾಯಕರಿಗೆ ಸಮರ್ಪಿಸಿ, ಅಭಿಮಾನ ವ್ಯಕ್ತಪಡಿಸಿದರು. ಬಳಿಕ ಪ್ರಮುಖ ಬೀದಿಗಳಲ್ಲಿ ರೋಡ್ ಶೋ ನಡೆಸಿದ ಯದುವೀರ್ ಮತ ಯಾಚಿಸಿದರು.

ಬಳಿಕ ದಾಸನಕೊಪ್ಪಲು ಗ್ರಾಮದ ಮುಖ್ಯ ದ್ವಾರದಿಂದ ಗ್ರಾಮದ ಮಾರಮ್ಮನ ದೇವಸ್ಥಾನದವರೆಗೆ ರೋಡ್ ಶೋ ನಡೆಸಿ ಮತ ಯಾಚಿಸಲಾಯಿತು. ನಂತರ ಮರಟಿಕ್ಯಾತನಹಳ್ಳಿ ಗೇಟ್‌ನಿಂದ ಗ್ರಾಮದ ಶ್ರೀ ರಾಮಮಂದಿರದವರೆಗೆ ಯದುವೀರ್ ಮತ್ತು ಜಿ.ಟಿ.ದೇವೇಗೌಡರು ವಾಹನದಲ್ಲಿ ರೋಡ್ ಶೋ ನಡೆಸಿದರೆ, ಇವರ ಮುಂದೆ ನೂರಾರು ಬಿಜೆಪಿ–ಜೆಡಿಎಸ್ ಕಾರ್ಯಕರ್ತರು ಬೈಕ್ ರ್‍ಯಾಲಿ ನಡೆಸಿದರು.

ನಂತರ ಇಲ್ಲಿನ ರಾಮ ಮಂದಿರ ಬಳಿಯ ವೃತ್ತದಲ್ಲಿ ಸಾರ್ವಜನಿಕರನ್ನು ಉದ್ದೇಶಿಸಿ ಮಾತನಾಡಿದ ಯದುವೀರ್, ದೇಶದ ಅಭಿವೃದ್ಧಿಗೆ ಶ್ರಮಿಸುತ್ತಿರುವ ಪ್ರಧಾನಿ ನರೇಂದ್ರ ಮೋದಿಯವರ ಕೈ ಬಲಪಡಿಸಲು ತಮ್ಮನ್ನು ಬೆಂಬಲಿಸಬೇಕೆಂದು ಕೋರಿದರು. ಬಳಿಕ ವಿಜಯನಗರ 4ನೇ ಹಂತಕ್ಕೆ ತೆರಳಿದ ಯದುವೀರ್ ಹಾಗೂ ಜಿ.ಟಿ.ದೇವೇಗೌಡರಿಗೆ ಬೃಹತ್ ಸೇಬಿನ ಹಾರ ಸಮರ್ಪಿಸುವ ಮೂಲಕ ಇಲ್ಲಿನ ನಿವಾಸಿಗಳು ಅದ್ದೂರಿ ಸ್ವಾಗತ ಕೋರಿದರು. ಇದೇ ವೇಳೆ ತಮಗೆ ಮತ ನೀಡುವಂತೆ ಇಲ್ಲಿನ ನಿವಾಸಿಗಳಲ್ಲಿ ಯದುವೀರ್ ಮನವಿ ಮಾಡಿದರು. ಬಿಜೆಪಿ ಮುಖಂಡರಾದ ಕವೀಶ್‌ಗೌಡ, ಅರುಣ್ ಕುಮಾರ್ ಗೌಡ ಸೇರಿದಂತೆ ಆಯಾಯ ಭಾಗಗಳ ನಿವಾಸಿಗಳು, ಬಿಜೆಪಿ–ಜೆಡಿಎಸ್ ಕಾರ್ಯಕರ್ತರು ಹಾಜರಿದ್ದರು.



ಮೈಸೂರಿನ ಬೋಗಾದಿಯಲ್ಲಿ ಮಂಗಳವಾರ ಪ್ರಚಾರದ ವೇಳೆ ಯದುವೀರ್, ಜಿ.ಟಿ.ದೇವೇಗೌಡರಿಗೆ ಕವೀಶ್ ಗೌಡ, ಅರುಣ್ ಕುಮಾರ್ ಗೌಡ, ಚಂದ್ರಶೇಖರ್ ಇತರರಿಗೆ ಭಾರೀ ಸೇಬು, ಕಿತ್ತಳೆ ಹಣ್ಣು ಹಾಗೂ ಗುಲಾಬಿ ಒಳಗೊಂಡ ಹಾರವನ್ನು ಹಾಕಿ ಅಭಿನಂದಿಸಿದರು.

ಹಸಿರು ನಮ್ಮ ಉಸಿರು

ಮೈಸೂರು ಮಿತ್ರ 45
ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು


ಮೈಟಾರ್ಪಲಿನ್ಸ್ ಮೈಸೂರು ಮಾಲೀಕರು ಹಾಗೂ ಖ್ಯಾತ ಉದ್ಯಮಿಗಳಾದ
ಕೆ.ಪ್ರದೀಪ್ ಸಿಂಗ್‌ರವರಿಗೆ ಜನುಮದಿನದ ಶುಭಾಶಯಗಳು


ಮೈಟಾರ್ಪಲಿನ್ಸ್ ಮೈಸೂರು ಮಾಲೀಕರು
ಹಾಗೂ ಖ್ಯಾತ ಉದ್ಯಮಿಗಳಾದ
ಕೆ.ಪ್ರದೀಪ್ ಸಿಂಗ್
ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು
ಫಿನ್ಲ ಎಂಟರ್‌ಪ್ರೈಸಸ್
ಎಫ್.ಪಿ.ಟಿ. ಟ್ರೇಡರ್ಸ್
ಮೈಸೂರು
93437 06416

ಮೈಸೂರು ಮಿತ್ರ

ಇಂದು ಡಾ.ರಾಜ್‌ಕುಮಾರ್ ಹುಟ್ಟುಹಬ್ಬ

ನಾಡಿನಾದ್ಯಂತ ವಿವಿಧ ಕಾರ್ಯಕ್ರಮಗಳು



ಬೆಂಗೂರು, ಏ. 23– ನಾಳೆ (ಏ.24) ಡಾ.ರಾಜ್‌ಕುಮಾರ್ ಅವರ ಹುಟ್ಟು ಹಬ್ಬ. ಅರ್ಥಪೂರ್ಣವಾಗಿಸಲು ನಾನಾ ರೀತಿಯ ಸಿದ್ಧತೆಯನ್ನು ಮಾಡಿಕೊಳ್ಳುತ್ತಿದ್ದಾರೆ ಅವರ ಅಭಿಮಾನಿಗಳು. ಚುನಾವಣೆ ನಡುವೆಯೂ ಕರ್ನಾಟಕ ಸರಕಾರ ಮತ್ತು ಡಾ.ರಾಜ್‌ಕುಮಾರ್ ಸ್ಮಾರಕ ಟ್ರಸ್ಟ್ ಪ್ರತಿ ವರ್ಷದಂತೆ ಈ ವರ್ಷವೂ ನಾನಾ ರೀತಿಯ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ.

ಪ್ರತಿ ವರ್ಷದಂತೆ ಈ ಸಲವೂ ಡಾ.ರಾಜ್ ಪುಣ್ಯಭೂಮಿ ಸ್ಥಳದಲ್ಲಿ ಅಭಿಮಾನಿಗಳು ರಕ್ತದಾನ ಶಿಬಿರ, ಕಣ್ಣುದಾನ ಶಿಬಿರ, ಅನ್ನ ಸಂತರ್ಪಣೆ ಸೇರಿದಂತೆ ಹಲವು ಕಾರ್ಯಕ್ರಮಗಳನ್ನು ಆಯೋಜನೆ ಮಾಡಿಕೊಳ್ಳುತ್ತಿದ್ದಾರೆ. ಬೆಳಗ್ಗೆಯಿಂದಲೇ ಈ ಎಲ್ಲ ಕೆಲಸಗಳು ಬೆಂಗಳೂರಿನ ಕಂಠೀರವ ಸ್ಟುಡಿಯೋದ ಆವರಣದಲ್ಲೇ ಶುರುವಾಗಲಿವೆ.

ಇವುಗಳ ಜೊತೆಗೆ ರಾಜ್ಯಾದ್ಯಂತ ಡಾ.ರಾಜ್ ಅಭಿಮಾನಿಗಳು ಅನಾಥಾಶ್ರಮ, ವೃದ್ಧಾಶ್ರಮಗಳಿಗೆ ಅನ್ನ ಸಂತರ್ಪಣೆ, ರಕ್ತದಾನ ಶಿಬಿರಗಳನ್ನು ಏರ್ಪಡಿಸಿದ್ದಾರೆ. ಡಾ.ರಾಜ್‌ಕುಮಾರ್ ಮತ್ತು ಪುನೀತ್ ರಾಜ್‌ಕುಮಾರ್ ಹೆಸರಿನಲ್ಲಿ ಸಂಗೀತ ಸಂಜೆ ಕಾರ್ಯಕ್ರಮಗಳು ಅಲ್ಲಲ್ಲಿ ನಡೆಯಲಿವೆ. ಬೆಳಗ್ಗೆ ಡಾ.ರಾಜ್ ಕುಟುಂಬಸ್ಥರು ಕಂಠೀರವ ಸ್ಟುಡಿಯೋದಲ್ಲಿರುವ ಸ್ಮಾರಕಕ್ಕೆ ಆಗಮಿಸಿ, ಅಣ್ಣಾವ್ರ ಸಮಾಧಿಗೆ ಪೂಜೆ ಸಲ್ಲಿಸಲಿದ್ದಾರೆ. ರಾಘವೇಂದ್ರ ರಾಜ್‌ಕುಮಾರ್ ಮತ್ತು ಡಾ.ರಾಜ್‌ಕುಮಾರ್ ಹೆಣ್ಣು ಮಕ್ಕಳು, ಮೊಮ್ಮಕ್ಕಳು ಸೇರಿದಂತೆ ಕುಟುಂಬಸ್ಥರು ಪೂಜೆಯಲ್ಲಿ ಭಾಗಿಯಾಗಲಿದ್ದಾರೆ.

ತೈವಾನ್‌ನಲ್ಲಿ ಒಂದೇ ದಿನ 80 ಭೂಕಂಪ

ತೈಪೆ: ತೈವಾನ್ ಒಂದೇ ದಿನ ಬರೋಬ್ಬರಿ 80 ಬಾರಿ ಭೂಮಿ ಕಂಪಿಸಿದ್ದು, ಗರಿಷ್ಟ ತೀವ್ರತೆ ರಿಕ್ಟರ್ ಮಾಪಕದಲ್ಲಿ 6.3 ದಾಖಲಾಗಿದೆ.

ತೈವಾನ್‌ನಲ್ಲಿ ಕಳೆದ 24 ಗಂಟೆಗಳಲ್ಲಿ ಭೂಮಿ ಪದೇ ಪದೆ ಕಂಪಿಸುತ್ತಿದ್ದು, 80ಕ್ಕೂ ಹೆಚ್ಚು ಪ್ರಬಲ ಮತ್ತು ಮಧ್ಯಮ ಭೂಕಂಪಗಳು ದಾಖಲಾಗಿವೆ ಎಂದು ತೈವಾನ್ ಭೂಕಂಪನ ಮಾಪನ ಕೇಂದ್ರ ಮಾಹಿತಿ ನೀಡಿದೆ.

ತೈವಾನ್‌ನ ಪೂರ್ವ ಕರಾವಳಿಯಲ್ಲಿ ಸೋಮವಾರ ರಾತ್ರಿ ಮತ್ತು ಮಂಗಳವಾರದ ಮಧ್ಯದಲ್ಲಿ 80 ಕ್ಕೂ ಹೆಚ್ಚು ಭೂಕಂಪಗಳು ಸಂಭವಿಸಿದ್ದು, ಪ್ರಬಲವಾದ ಭೂಕಂಪವು 6.3 ತೀವ್ರತೆಯನ್ನು ಹೊಂದಿದೆ.

ಪ್ರಬಲ ಕಂಪನದಿಂದಾಗಿ ರಾಜಧಾನಿ ತೈಪೆನಲ್ಲಿ ಬೃಹತ್ ಕಟ್ಟಡಗಳು ಜಖಂಗೊಂಡಿದ್ದು, ಹಲವು ಕಟ್ಟಡಗಳು ನೆಲಕ್ಕುರುಳಿವೆ. ರಾಜಧಾನಿ ತೈಪೆ ಸೇರಿದಂತೆ ಉತ್ತರ, ಪೂರ್ವ ಮತ್ತು ಪಶ್ಚಿಮ ತೈವಾನ್‌ನ ದೊಡ್ಡ ಭಾಗಗಳಲ್ಲಿ ಕಟ್ಟಡಗಳು ಕಳೆದ 24 ಗಂಟೆಗಳಲ್ಲಿ ಹತ್ತಾರು ಬಾರಿ ಅಲುಗಾಡಿದ್ದು, ಪ್ರಬಲವಾದ ಭೂಕಂಪವು 6.3 ರಷ್ಟಿದೆ.

ವಿಶ್ವದ ಅತಿದೊಡ್ಡ ಸಂಪರ್ಕ ಚಿಪ್‌ಮೇಕರ್, ತೈವಾನ್ ಸೆಮಿಕಂಡಕ್ಟರ್ ಮ್ಯಾನುಫ್ಯಾಕ್ಚರಿಂಗ್ ಕೋ, ಅವರ ಕಾರ್ಖಾನೆಗಳು ದ್ವೀಪದ ಪಶ್ಚಿಮ ಕರಾವಳಿಯಲ್ಲಿವೆ. ಇಲ್ಲೇ ಕಂಪನ ಸಂಭವಿಸಿದ್ದು ಪರಿಣಾಮ ಇಲ್ಲಿ ಉತ್ಪಾದನೆ ಮೇಲೆ ಪರಿಣಾಮ ಬೀರಿದೆ ಎಂದು ಸಂಸ್ಥೆ ಹೇಳಿಕೊಂಡಿದೆ.

ಏಪ್ರಿಲ್ 3 ರಂದು, ನಗರದಲ್ಲಿ 7.2 ತೀವ್ರತೆಯ ಭೂಕಂಪ ಸಂಭವಿಸಿತ್ತು, ಇದರಲ್ಲಿ ಕನಿಷ್ಠ 14 ಜನರು ಸಾವನ್ನಪ್ಪಿದ್ದರು ಮತ್ತು ಅಂದಿನಿಂದ 1,000 ಕ್ಕೂ ಹೆಚ್ಚು ಭೂಕಂಪಗಳು ತೈವಾನ್‌ನಲ್ಲಿ ಸಂಭವಿಸಿವೆ.

ತೈವಾನ್ ಕೇಂದ್ರೀಯ ಹವಾಮಾನ ಇಲಾಖೆ ಏಪ್ರಿಲ್ 3 ರ ದೊಡ್ಡ ಭೂಕಂಪದ ನಂತರ ಸೋಮವಾರ ಮಧ್ಯಾಹ್ನದಿಂದ ಭೂಕಂಪನಗಳು ಆರಂಭವಾಗಿದ್ದು, ಇಲ್ಲಿಯವರೆಗೂ 180 ಬಾರಿ ಭೂಮಿ ಕಂಪಿಸಿದೆ ಎಂದು ಹೇಳಿದೆ.

2016 ರಲ್ಲಿ ದಕ್ಷಿಣ ತೈವಾನ್‌ನಲ್ಲಿ ಸಂಭವಿಸಿದ ಭೂಕಂಪದಲ್ಲಿ 100 ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದರೆ, 1999 ರಲ್ಲಿ 7.3 ತೀವ್ರತೆಯ ಭೂಕಂಪದಲ್ಲಿ 2,000ಕ್ಕೂ ಹೆಚ್ಚು ಜನರು ಸಾವನ್ನಪ್ಪಿದ್ದರು.

ಮೇ 31ರೊಳಗೆ HSRP ನಂಬರ್ ಪ್ಲೇಟ್ ಅಳವಡಿಸಿ: ತಪ್ಪಿದರೆ ಬೀಳುತ್ತೆ ದಂಡ!

ಬೆಂಗಳೂರು: ಸಾರಿಗೆ ಇಲಾಖೆಯು ಹೈ ಸೆಕ್ಯುರಿಟಿ ನಂಬರ್ ಪ್ಲೇಟ್ (ಎಚ್‌ಎಸ್‌ಆರ್‌ಪಿ) ಅಳವಡಿಕೆಯ ಗಡುವನ್ನು ಕಳೆದ ವರ್ಷ ನವೆಂಬರ್ ಮತ್ತು ಫೆಬ್ರವರಿಯಲ್ಲಿ ವಿಸ್ತರಿಸಿತ್ತು. ಆದರೆ ಇನ್ನು ಮುಂದೆ ಯಾವುದೇ ಕಾರಣಕ್ಕೂ ಗಡುವು ವಿಸ್ತರಿಸುವುದಿಲ್ಲ, ಹೀಗಾಗಿ ಮೇ 31ರ ಮೊದಲು ಎಚ್‌ಎಸ್‌ಆರ್‌ಪಿ ಅಳವಡಿಸಲು ಇಲಾಖೆ ಆದೇಶ ನೀಡಿದೆ.

ಸಾರಿಗೆ ಇಲಾಖೆಯು ಕಳೆದ ವರ್ಷ ಆಗಸ್ಟ್‌ನಲ್ಲಿ ಅಧಿಸೂಚನೆ ಹೊರಡಿಸುವ ಮೂಲಕ ರಾಜ್ಯದಲ್ಲಿ ಏಪ್ರಿಲ್ 1, 2019ಕ್ಕಿಂತ ಮೊದಲು ನೋಂದಣಿಯಾಗಿರುವ ಎಲ್ಲಾ ವಾಹನಗಳಿಗೆ ಎಚ್‌ಎಸ್‌ಆರ್‌ಪಿ ಅಳವಡಿಸುವುದನ್ನು ಕಡ್ಡಾಯಗೊಳಿಸಿತ್ತು. ಸಾರಿಗೆ ಅಧಿಕಾರಿಗಳ ಪ್ರಕಾರ, ಸುಮಾರು ಎರಡು ಕೋಟಿ ವಾಹನಗಳು ಹೈ ಸೆಕ್ಯುರಿಟಿ ನಂಬರ್ ಪ್ಲೇಟ್ ಪಡೆಯಬೇಕಾಗಿದೆ.

ಎರಡು ಬಾರಿ ಗಡುವು ವಿಸ್ತರಿಸಿದ್ದರೂ ಸಹ ರಾಜ್ಯದಲ್ಲಿ ಕೇವಲ 34 ಲಕ್ಷ ಎಚ್‌ಎಸ್‌ಆರ್‌ಪಿ ನೋಂದಾಯಿಸಿದೆ. ಫೆಬ್ರವರಿಯಿಂದ ಸುಮಾರು 18 ಲಕ್ಷ ನೋಂದಣಿಯಾಗಿದ್ದು, ಇನ್ನೂ ಹೆಚ್ಚಿನ ಸಂಖ್ಯೆಯ ವಾಹನಗಳು ಎಚ್‌ಎಸ್‌ಆರ್‌ಪಿ ಆಯ್ಕೆ ಮಾಡಿಕೊಳ್ಳಬೇಕಾಗಿದೆ ಎಂದು ಸಾರಿಗೆ (ಜಾರಿ) ಹೆಚ್ಚುವರಿ ಆಯುಕ್ತ ಸಿ ಮಲ್ಲಿಕಾರ್ಜುನ ತಿಳಿಸಿದ್ದಾರೆ.

ಮೇ 31ರವರೆಗೆ ಎಚ್‌ಎಸ್‌ಆರ್‌ಪಿ ಅಳವಡಿಸಲು ಸಮಯ ನೀಡಿ ಕಾಯುತ್ತೇವೆ. 75 ಲಕ್ಷ ಸಂಖ್ಯೆ ಮುಟ್ಟುವ ನಿರೀಕ್ಷೆಯಿದೆ, ಅದರ ನಂತರ ನಾವು ಮತ್ತೆ ಗಡುವು ವಿಸ್ತರಿಸದಂತೆ ಸರ್ಕಾರಕ್ಕೆ ಮನವಿ ಮಾಡಿ, ದಂಡ ಜಾರಿಗೊಳಿಸಲು ಒತ್ತಾಯಿಸುತ್ತೇವೆ ಎಂದಿದ್ದಾರೆ.

ಮೊದಲ ಬಾರಿಗೆ 500 ರೂಪಾಯಿ ದಂಡ ವಿಧಿಸಲಾಗುವುದು, ವಾಹನ ಮಾಲೀಕರು ಎಚ್ಚೆತ್ತುಕೊಳ್ಳದಿದ್ದರೇ ಎಚ್‌ಎಸ್‌ಆರ್‌ಪಿ ಅಳವಡಿಸುವವರೆಗೆ 1,000 ರೂ. ದಂಡ ವಿಧಿಸುತ್ತೇವೆ. ಮಾದರಿ ನೀತಿ ಸಂಹಿತೆ ಮುಗಿಯುವವರೆಗೆ ನಾವು ಕಾಯುತ್ತೇವೆ. ಸರ್ಕಾರದ ಅಭಿಪ್ರಾಯವನ್ನು ತೆಗೆದುಕೊಳ್ಳುತ್ತೇವೆ ಎಚ್‌ಎಸ್‌ಆರ್‌ಪಿ ಅಳವಡಿಕೆ ತೃಪ್ತಿಕರವಾಗಿಲ್ಲದಿದ್ದರೆ ಕಟ್ಟುನಿಟ್ಟಾದ ನಿಯಮ ಜಾರಿಗಾಗಿ ನಾವು ಸರ್ಕಾರವನ್ನು ವಿನಂತಿಸಲಿದ್ದೇವೆ ಎಂದು ಅವರು ಹೇಳಿದರು.

ಕಾನೂನು ಪದವಿ 5 ವರ್ಷದಿಂದ 3 ವರ್ಷಕ್ಕೆ ಪರಿವರ್ತಿಸಲಾಗದು

ನವದೆಹಲಿ: ಐದು ವರ್ಷಗಳ ಕಾನೂನು ಪದವಿಯನ್ನು ಮೂರು ವರ್ಷಗಳಿಗೆ ಪರಿವರ್ತಿಸುವಂತೆ ಕೋರಿ ಸಲ್ಲಿಸಲಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಪರಿಗಣಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಮೂರು ವರ್ಷಗಳ ಕೋರ್ಸ್ ಏಕೆ. ವಿದ್ಯಾರ್ಥಿಗಳು ಪ್ರೌಢಶಾಲೆಯ ನಂತರವೇ ಕಾನೂನು ಅಭ್ಯಾಸವನ್ನು ಪ್ರಾರಂಭಿಸಬಹುದು ಎಂದು ವ್ಯಂಗ್ಯವಾಗಿ ಟೀಕಿಸಿದೆ.

ಮುಖ್ಯ ನ್ಯಾಯಮೂರ್ತಿ ಡಿವೈ ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಜೆಬಿ ಪರ್ದಿವಾಲಾ ಅವರ ಪೀಠವು ಐದು ವರ್ಷಗಳ (ಬ್ಯಾಚುಲರ್ ಆಫ್ ಲಾ) ಕೋರ್ಸ್ ಉತ್ತಮವಾಗಿ ಕಾರ್ಯನಿರ್ವಹಿಸುತ್ತಿದೆ ಮತ್ತು ಅದರೊಂದಿಗೆ ಗೊಂದಲಕ್ಕೊಳಗಾಗುವ ಅಗತ್ಯವಿಲ್ಲ ಎಂದು ಹೇಳಿದೆ.

ಪಿಐಎಲ್ ಹಿಂಪಡೆಯಲು ಅನುಮತಿ ನೀಡಿದ ದ್ವಿಸದಸ್ಯ ಪೀಠವು, ನಮಗೆ ಈ ವೃತ್ತಿಗೆ ಪ್ರಬುದ್ಧರು ಬರಬೇಕಾಗಿದೆ. ಈ 5 ವರ್ಷಗಳ ಕೋರ್ಸ್ ತುಂಬಾ ಪ್ರಯೋಜನಕಾರಿಯಾಗಿದೆ ಎಂದು ಹೇಳಿದೆ. ವಕೀಲೆ–ಅರ್ಜಿದಾರರಾದ ಅಶ್ವಿನಿ ಉಪಾಧ್ಯಾಯ ಪರವಾಗಿ ಹಿರಿಯ ವಕೀಲ ವಿಕಾಸ್ ಸಿಂಗ್ ವಾದ ಮಂಡಿಸಿದರು.

ಬ್ರಿಟನ್‌ನಲ್ಲೇ ಕಾನೂನು ಕೋರ್ಸ್ ಮೂರು ವರ್ಷಗಳದ್ದಾಗಿದೆ. ಇಲ್ಲಿ ಪ್ರಸ್ತುತ ಇರುವ ಐದು ವರ್ಷಗಳ LLB ಕೋರ್ಸ್ 'ಬಡವರಿಗೆ, ವಿಶೇಷವಾಗಿ ಹುಡುಗಿಯರಿಗೆ ನಿರಾಶಾದಾಯಕವಾಗಿದೆ ಎಂದು ಹಿರಿಯ ವಕೀಲರು ವಾದಿಸಿದರು. ಈ ವಾದವನ್ನು ಸಿಜೆಐ ಒಪ್ಪಲಿಲ್ಲ. ಈ ಬಾರಿ 70 ಪ್ರತಿಶತ ಮಹಿಳೆಯರು ಜಿಲ್ಲಾ ನ್ಯಾಯಾಂಗಕ್ಕೆ ಪ್ರವೇಶಿಸಿದ್ದಾರೆ. ಈಗ ಹೆಚ್ಚಿನ ಹುಡುಗಿಯರು ಕಾನೂನು ಪದವಿ ಅಧ್ಯಯನಕ್ಕೆ ಮುಂದಾಗುತ್ತಿದ್ದಾರೆ ಎಂದು ಹೇಳಿದರು.



ಮೈಸೂರು ಜಿಲ್ಲಾ ವಕೀಲರ ಸಂಘದ ನೂತನ ಅಧ್ಯಕ್ಷ ಎಸ್.ಲೋಕೇಶ್ ಅವರು ಮಂಗಳವಾರ ಹೆಬ್ಬಾಳ ಕೈಗಾರಿಕಾ ಪ್ರದೇಶದಲ್ಲಿರುವ ಆದಿಚುಂಚನಗಿರಿ ಶಾಖಾಮಠದಲ್ಲಿ ಶ್ರೀ ಸೋಮೇಶ್ವರನಾಥ ಸ್ವಾಮೀಜಿಯನ್ನು ಭೇಟಿಯಾಗಿ ಆಶೀರ್ವಾದ ಪಡೆದರು. ಈ ವೇಳೆ ಮೈಸೂರು ಗೃಹ ನಿರ್ಮಾಣ ಸಹಕಾರ ಸಂಘದ ಅಧ್ಯಕ್ಷ ಲೋಕೇಶ್ ಇತರರು ಸಾಥ್ ನೀಡಿದರು.



ಲಕ್ನೋ ರನ್ ಮಳೆಗೆ ಕೊಚ್ಚಿ ಹೋದ ಚೆನ್ನೈ



ಚೆನ್ನೈ, ಏ.23– ಮಾರ್ಕಸ್ ಸ್ಟೋಯ್ನಿಸ್ ಅವರ ಅಮೋಘ ಶತಕದ ನೆರವಿನಿಂದ ಲಕ್ನೋ ಸೂಪರ್ ಜೈಂಟ್ಸ್ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 6 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಆ ಮೂಲಕ ಪ್ಲೇ ಆಫ್ ಪ್ರವೇಶಕ್ಕೆ ಮತ್ತೊಂದು ಹೆಜ್ಜೆ ಇಟ್ಟಿದೆ. ಇಲ್ಲಿನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಚೆನ್ನೈ ನೀಡಿದ 211 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಲಕ್ನೋ 19.3 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 213 ರನ್ ಗಳಿಸಿ ಜಯದ ನಗೆ ಬೀರಿತು. ತಂಡದ ಪರ 63 ಎಸೆತಗಳಲ್ಲಿ 13 ಬೌಂಡರಿ, 6 ಸಿಕ್ಸರ್ ಒಳಗೊಂಡ 124 ರನ್ ಗಳಿಸಿ ಅಜೇಯರಾಗಿ ಉಳಿಯುವ ಮೂಲಕ ತಂಡಕ್ಕೆ ಜಯ ತಂದು ಕೊಟ್ಟರು. ಉಳಿದಂತೆ ಕೆ.ಎಲ್.ರಾಹುಲ್ 16, ದೇವದತ್ತ ಪಡಿಕ್ಕಲ್ 13, ನಿಕೋಲಸ್ ಪೂರನ್ 34, ದೀಪಕ್ ಹೂಡಾ 17 ರನ್ ಗಳಿಸಿದರು. ಸಿಎಸ್‌ಕೆ ಪರ ಮತೀಶ ಪತಿರಣ 2, ದೀಪಕ್ ಚಹರ್, ಮುಸ್ತಫಿಜಾರ್ ಒಂದೊಂದು ವಿಕೆಟ್ ಕಬಳಿಸಿದರು.

ಇದಕ್ಕೂ ಮುನ್ನಾ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ಸೂಪರ್ ಕಿಂಗ್ಸ್ 20 ಓವರ್‌ಗಳಲ್ಲಿ 4 ವಿಕೆಟ್ ನಷ್ಟಕ್ಕೆ 210 ರನ್ ಗಳಿಸಿತು. ತಂಡದ ಪರ ಅಬ್ಬರಿಸಿದ ನಾಯಕ ಋತುರಾಜ್ ಗಾಯಕ್ವಾಡ್ 60 ಎಸೆತಗಳಲ್ಲಿ 3 ಸಿಕ್ಸರ್, 12 ಬೌಂಡರಿ ಒಳಗೊಂಡ 108 ರನ್ ಗಳಿಸಿ ತಂಡದ ಬೃಹತ್ ಮೊತ್ತಕ್ಕೆ ಕಾರಣರಾದರು. ಉಳಿದಂತೆ ಡ್ಯಾರಿಯಲ್ ಮಿಚೆಲ್ 11, ರವಿಂದ್ರ ಜಡೇಜಾ 16, ಧೋನಿ 4 ರನ್ ಗಳಿಸಿದರೆ, ಶಿವಂ ದುಬೆ 27 ಎಸೆತಗಳಲ್ಲಿ 7 ಸಿಕ್ಸರ್, 3 ಬೌಂಡರಿ ಒಳಗೊಂಡ ಮಿಂಚಿನ 66 ರನ್ ಗಳಿಸಿ ರನೌಟಾದರು. ಲಕ್ನೋ ಪರ ಮ್ಯಾಟ್ ಹೆನ್ರಿ, ಹಾಗೂ ಮೊಹಸೀನ್ ಖಾನ್ ತಲಾ ಒಂದೊಂದು ವಿಕೆಟ್ ಪಡೆದರು. ಮಾರ್ಕಸ್ ಸ್ಟೋಯ್ನಿಸ್ ಪಂದ್ಯಶ್ರೇಷ್ಠ ಪ್ರಶಸ್ತಿ ಪಡೆದರು.

ಮೈಸೂರಿನ ಸೈಂಟ್ ಫಿಲೋಮಿನಾ ಕಾಲೇಜಿನಲ್ಲಿ ರಕ್ತದಾನ ಶಿಬಿರ



ಮೈಸೂರು, ಏ.23(ಬಿಎಲ್‌ಯು)– ಮೈಸೂರಿನ ಬನ್ನಿಮಂಟಪದ ಸೈಂಟ್ ಫಿಲೋಮಿನಾ ಕಾಲೇಜಿನಲ್ಲಿ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು.

ಸೈಂಟ್ ಫಿಲೋಮಿನಾ ಕಾಲೇಜು, ಯೂತ್ ರೆಡ್ ಕ್ರಾಸ್, ಎನ್‌ಎಸ್‌ಎಸ್ ಮತ್ತು ಜೀವಧಾರ ರಕ್ತನಿಧಿ ಕೇಂದ್ರ ಸಂಯುಕ್ತವಾಗಿ ರಕ್ತದಾನ ಶಿಬಿರ ಆಯೋಜನೆ ಮಾಡಿತ್ತು.

ರಕ್ತದಾನ ಶಿಬಿರ ಉದ್ಘಾಟಿಸಿ ಮಾತನಾಡಿದ ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಅಪಘಾತ ಸೇರಿದಂತೆ ಬಹಳಷ್ಟು ಸಂದರ್ಭದಲ್ಲಿ ರಕ್ತದ ಅವಶ್ಯಕತೆ ಇರುತ್ತದೆ. ಈ ಸಂದರ್ಭದಲ್ಲಿ ರೋಗಿ ಜೀವನ್ಮರಣ ಹೋರಾಟ ಮಾಡುತ್ತಿರುತ್ತಾನೆ. ಆ ಸಂದರ್ಭದಲ್ಲಿ ರಕ್ತ ಕೊಟ್ಟರೆ ರೋಗಿ ಬದುಕುಳಿಯುತ್ತಾನೆ. ಇದನ್ನು ಮನಗಂಡು ಯುವಕರು ಸ್ವಯಂ ಪ್ರೇರಣೆಯಿಂದ ರಕ್ತದಾನ ಮಾಡಬೇಕು ಎಂದು ಮನವಿ ಮಾಡಿದರು.

ಬೇಸಿಗೆಯಲ್ಲಿ ರಕ್ತದಾನ ಮಾಡಲು ಯಾರೂ ಮುಂದಾಗುತ್ತಿಲ್ಲ. ಇಂತಹ ಸಂದರ್ಭದಲ್ಲಿ ಸೈಂಟ್ ಫಿಲೋಮಿನಾ ಕಾಲೇಜಿನ ವಿದ್ಯಾರ್ಥಿಗಳು ಸ್ವಯಂ ಪ್ರೇರಿತರಾಗಿ ರಕ್ತದಾನ ಮಾಡುತ್ತಿರುವುದು ಪ್ರಶಂಸನೀಯ ಕಾರ್ಯ ಎಂದು ಗಿರೀಶ್ ಹೇಳಿದರು.

ವ್ಯವಸ್ಥಾಪಕ ಡಾ.ಬರ್ನಾಡ್ ಪ್ರಕಾಶ್, ಪ್ರಿನ್ಸಿಪಾಲ್ ಡಾ.ರವಿ ಜೆಡಿ ಸಲ್ಡಾನ್ಹಾ, ಫ್ರಾನ್ಸಿಸ್ ಡಿಸೋಜ, ದೀಪ್ತಿ, ಎನ್‌ಎಸ್‌ಎಸ್ ಆಡಳಿತ ಅಧಿಕಾರಿ ಜೋಯಲ್ ಈ ಸಂದರ್ಭದಲ್ಲಿ ಹಾಜರಿದ್ದರು.

ಹಾಸನದಲ್ಲಿ ಬೈಕ್‌ಗೆ ಬಸ್ ಡಿಕ್ಕಿ; ಇಬ್ಬರು ಸ್ಥಳದಲ್ಲೇ ಸಾವು

ಹೊತ್ತಿ ಉರಿದ ಕೆಎಸ್‌ಆರ್‌ಟಿಸಿ ಬಸ್

ಹಾಸನ: ಹಾಸನ ಜಿಲ್ಲೆಯ ಚನ್ನರಾಯ ಪಟ್ಟಣ ತಾಲೂಕಿನ ಬೇಡಿಗನಹಳ್ಳಿ ಸರ್ಕಲ್ ಬಳಿ ಮಂಗಳವಾರ ಕೆಎಸ್‌ಆರ್‌ಟಿಸಿ ಬಸ್ಸೊಂದು ಬೈಕ್‌ಗೆ ಡಿಕ್ಕಿ ಹೊಡೆದಿದ್ದು, ಭೀಕರ ಅಪಘಾತದಲ್ಲಿ ಸವಾರರಿಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ.


ಬೆಂಗಳೂರು ಕಡೆಯಿಂದ ಬರುತ್ತಿದ್ದ ಬೈಕ್‌ಗೆ ಹಿಂಬದಿಯಿಂದ ಬಂದ ಸಾರಿಗೆ ಬಸ್ ಡಿಕ್ಕಿ ಹೊಡೆದಿದೆ. ಅಪಘಾತ ರಭಸಕ್ಕೆ ರಸ್ತೆಯಲ್ಲಿಯೇ ಕೆಎಸ್‌ಆರ್‌ಟಿಸಿ ಬಸ್ ಹೊತ್ತಿ ಉರಿದಿದೆ. ಕೂಡಲೇ ಚಾಲಕ ರಸ್ತೆಯಲ್ಲೇ ಬಸ್ ನಿಲ್ಲಿಸಿದ್ದು, ಬಸ್‌ನಿಂದ ಕೆಳಗಿಳಿದು ಪ್ರಯಾಣಿಕರು ಓಡಿದ್ದಾರೆ. ನಂತರ ಸಂಪೂರ್ಣ ಬಸ್ ಹೊತ್ತಿ ಉರಿದಿದೆ. ಅದೃಷ್ಟವಶಾತ್ ಬಸ್‌ನಲ್ಲಿದ್ದ ಪ್ರಯಾಣಿಕರು ಪ್ರಾಣಾಪಾಯದಿಂದ ಪಾರಾಗಿದ್ದು, ಸ್ಥಳಕ್ಕೆ ಆಗಮಿಸಿದ ಅಗ್ನಿಶಾಮಕ ದಳದ ಸಿಬ್ಬಂದಿ ಬೆಂಕಿ ನಂದಿಸಿದ್ದಾರೆ.

ಸ್ಥಳಕ್ಕೆ ಪೊಲೀಸರು ಭೇಟಿ ನೀಡಿ, ಪರಿಶೀಲನೆ ನಡೆಸಿದ್ದು, ಚನ್ನರಾಯ ಪಟ್ಟಣ ನಗರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇನ್ನು ಮೃತ ದೇಹಗಳು ಚನ್ನರಾಯಪಟ್ಟಣ ತಾಲೂಕು ಆಸ್ಪತ್ರೆಗೆ ರವಾನೆ ಮಾಡಲಾಗಿದೆ.

ಯಾದಗಿರಿಯಲ್ಲಿ ಕೆರೆಯಲ್ಲಿ ಈಜಲು ಹೋಗಿದ್ದ ಮೂವರು ಬಾಲಕರು ನೀರುಪಾಲು

ಯಾದಗಿರಿ: ಕೆರೆಯಲ್ಲಿ ಈಜಲು ಹೋಗಿದ್ದ ಮೂವರು ಬಾಲಕರು ನೀರು ಪಾಲಾಗಿರುವ ದಾರುಣ ಘಟನೆ ಯಾದಗಿರಿ ಜಿಲ್ಲೆಯ ಸುರಪುರ ತಾಲೂಕಿನ ನಗನೂರು ಗ್ರಾಮದಲ್ಲಿ ಮಂಗಳವಾರ ನಡೆದಿದೆ. ಮೃತ ಬಾಲಕರನ್ನು ಹೈಯಾಳಪ್ಪ(11), ಶರಣಬಸವ(10) ಹಾಗೂ ಅನಿಲ(10) ಎಂದು ಗುರುತಿಸಲಾಗಿದ್ದು, ಇಬ್ಬರು ನಗನೂರು ಗ್ರಾಮದವರಾದರೆ, ಇನ್ನೋರ್ವ ಬಾಲಕ ಖಾನಾಪುರ ಗ್ರಾಮದ ನಿವಾಸಿಯಾಗಿದ್ದಾರೆ. ಮೃತ ಮೂವರು ಬಾಲಕರ ಶವವನ್ನು ಸ್ಥಳೀಯರು ಕೆರೆಯಿಂದ ಹೊರತೆಗೆದಿದ್ದಾರೆ. ಈ ಕುರಿತು ಕೆಂಭಾವಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ

ಕಾಂಗ್ರೆಸ್ ಬೆಂಬಲಿಸಿ, ಎಂ.ಲಕ್ಷ್ಮಣ್ ಗೆಲ್ಲಿಸಿ: ಕೆ.ಮರೀಗೌಡ



ಮೈಸೂರು, ಏ.23–ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಅವನ್ನು ಬೆಂಬಲಿಸುವ ಮೂಲಕ ಹೆಚ್ಚು ಮತಗಳ ಅಂತರದಿಂದ ಗೆಲ್ಲಿಸಬೇಕು ಎಂದು ಮುಡಾ ಅಧ್ಯಕ್ಷ ಕೆ. ಮರೀಗೌಡ ಮನವಿ ಮಾಡಿದರು.

ರಾಮಕೃಷ್ಣನಗರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಎಂ. ಲಕ್ಷ್ಮಣ್ ಪರವಾಗಿ ಮನೆಮನೆಗೆ ತೆರಳಿ ಮತಯಾಚಿಸಿ ಮಾತನಾಡಿದ ಅವರು, ಕಳೆದ 10 ವರ್ಷಗಳ ಅವಧಿಯಲ್ಲಿ ಬರೀ ಸುಳ್ಳು ಹೇಳಿಕೊಂಡು ಜನರನ್ನು ಮರುಳು ಮಾಡುತ್ತಿರುವ ಬಿಜೆಪಿಯನ್ನು ಜನರು ತಿರಸ್ಕರಿಸಬೇಕು. ಮೋದಿ ಸರ್ಕಾರ ದಲಿತರು, ಬಡವರು, ಶೋಷಿತರು, ಅಲ್ಪಸಂಖ್ಯಾತರ ಅಭಿವೃದ್ಧಿಗೆ ಯಾವುದೇ ಕಾರ್ಯಕ್ರಮ ರೂಪಿಸಲಿಲ್ಲ. 20 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಹೇಳಿದ್ದರು. ಆದರೆ, ಅವರ ಅಧಿಕಾರಾವಧಿಯಲ್ಲಿ ಶೇ.44ರಷ್ಟು ನಿರುದ್ಯೋಗ ದಾಖಲಾಗಿದೆ. ಇದಕ್ಕಾಗಿ ಅವರಿಗೆ ಮತ ನೀಡಬೇಕೆ ಎಂಬುದನ್ನು ಜನರು ಆಲೋಚಿಸಬೇಕು. ನಮ್ಮದು ಭ್ರಷ್ಟಾಚಾರ, ಕಳಂಕರಹಿತ ಸರ್ಕಾರ ಎಂದು ಹೇಳುತ್ತಾರೆ.

ಆದರೆ ಭ್ರಷ್ಟಾಚಾರವನ್ನೇ ಕಾನೂನುಬದ್ಧಗೊಳಿಸಲು ಹೊರಟಿದ್ದು ಇದೇ ಮೋದಿ. ಬಿಜೆಪಿಯ ಚುನಾವಣಾ ಬಾಂಡ್ ಹಗರಣ ಇದಕ್ಕೆ ಸಾಕ್ಷಿ ಬಾಂಡ್ ಪಡೆದವರಲ್ಲಿ ಅನೇಕರು ಇಡಿ ಹಾಗೂ ಐಟಿ ದಾಳಿಗೆ ಒಳಗಾದವರು. ಉದ್ಯಮಿಗಳು ಹಾಗೂ ಶ್ರೀಮಂತರನ್ನು ಹೆದರಿಸಿ ಅವರಿಂದ ಹಣ ಸುಲಿಗೆ ಮಾಡುತ್ತಿರುವ ಮೋದಿ ಸರ್ಕಾರ ಹಫ್ತಾ ವಸೂಲಿ ಸರ್ಕಾರ. ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರ್ಕಾರ ಜನರಿಗೆ ಸಾಕಷ್ಟು ಯೋಜನೆಗಳನ್ನು ನೀಡಿದೆ. ಶಕ್ತಿ ಗೃಹಲಕ್ಷ್ಮಿ, ಗೃಹಜ್ಯೋತಿ, ಯುವ ನಿಧಿ ಹೀಗೆ ಪಂಚ ಯೋಜನೆಗಳ ಮೂಲಕ ಜನರ ಮೆಚ್ಚುಗೆಗೆ ಪಾತ್ರವಾಗಿದೆ ಎಂದರು.

ನ್ಯಾಯಾಂಗ ಬಂಧನ ಅವಧಿ ಮತ್ತೆ ವಿಸ್ತರಣೆ; ಮೇ 7ರವರೆಗೂ ಕೇಜ್ರಿವಾಲ್, ಕವಿತಾಗೆ ಜೈಲು





ನವದೆಹಲಿ: ದೆಹಲಿ ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿದಂತೆ ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲ್ ಮತ್ತು ಕೆ. ಕವಿತಾ ಅವರ ನ್ಯಾಯಾಂಗದ ಬಂಧನ ಅವಧಿಯನ್ನು ದೆಹಲಿ ನ್ಯಾಯಾಲಯ ಮಂಗಳವಾರ ಮತ್ತೆ ವಿಸ್ತರಣೆ ಮಾಡಿದೆ.

ಅಬಕಾರಿ ಹಗರಣಕ್ಕೆ ಸಂಬಂಧಿಸಿದ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಮುಖ್ಯಮಂತ್ರಿ ಅರವಿಂದ್ ಕೇಜ್ರಿವಾಲ್ ಮತ್ತು BRS ನಾಯಕಿ ಕೆ. ಕವಿತಾ ಅವರ ನ್ಯಾಯಾಂಗ ಬಂಧನವನ್ನು ದೆಹಲಿ ನ್ಯಾಯಾಲಯ ಮೇ 7 ರವರೆಗೆ ವಿಸ್ತರಿಸಿದೆ.

ಉಭಯ ನಾಯಕರ ಬಂಧನದ ಅವಧಿ ಇಂದಿಗೆ ಮುಕ್ತಾಯವಾದ ಹಿನ್ನೆಲೆಯಲ್ಲಿ ಇಂದು ಅವರನ್ನು ವೀಡಿಯೊ ಕಾನ್ಫರೆನ್ಸ್ ಮೂಲಕ ಸಿಬಿಐ ಮತ್ತು ಇಡಿ ವಿಷಯಗಳ ವಿಶೇಷ ನ್ಯಾಯಾಧೀಶ ಕಾವೇರಿ ಬವೇಜಾ ಅವರ ಮುಂದೆ ಹಾಜರುಪಡಿಸಲಾಯಿತು. ಈ ವೇಳೆ ವಾದ ಆಲಿಸಿದ ನ್ಯಾಯಾಧೀಶರು ಮೇ 7ರವರೆಗೂ ನ್ಯಾಯಾಂಗ ಬಂಧನ ಅವಧಿ ವಿಸ್ತರಣೆ ಮಾಡಿದರು.

ಅಂದಹಾಗೆ ಸಿಬಿಐ ತನಿಖೆ ನಡೆಸುತ್ತಿರುವ ಅಬಕಾರಿ ನೀತಿ ಹಗರಣ ಸಂಬಂಧಿತ ಭ್ರಷ್ಟಾಚಾರ ಪ್ರಕರಣದಲ್ಲಿ ತೆಲಂಗಾಣ ಎಂಎಲ್‌ಸಿ ಮತ್ತು ಮಾಜಿ ಮುಖ್ಯಮಂತ್ರಿ ಕೆ. ಚಂದ್ರಶೇಖರ ರಾವ್ ಅವರ ಪುತ್ರಿ ಕವಿತಾ ಮತ್ತು ಅಬಕಾರಿ ನೀತಿ ಹಗರಣದಲ್ಲಿ ದೆಹಲಿ ಸಿಎಂ ಅರವಿಂದ್ ಕೇಜ್ರಿವಾಲರನ್ನು ಬಂಧಿಸಲಾಗಿದೆ.

ಕನ್ನಡಿಗರಿಗೆ ಬರೀ ಪರಿಚಾರಕ ಹುದ್ದೆಯೇ?

ಬೆಂಗಳೂರು: ಕನ್ನಡಿಗರ ನೆಲ–ಜಲವನ್ನು ಪಡೆದು ಅಲ್ಲಿ ಅಧಿಕಾರಿಗಳ ಹುದ್ದೆಗಳಿಗೆ ಕನ್ನಡಿಗರನ್ನು ನೇಮಿಸದೇ ಪರಿಚಾರಕ ಉದ್ಯೋಗಗಳಿಗೆ ಮಾತ್ರ ಕನ್ನಡಿಗರನ್ನು ನೇಮಕ ಮಾಡಿದರೆ ಉದ್ಯೋಗ ಕಲ್ಪಿಸಿದಂತಲ್ಲ. ಎಲ್ಲಾ ಹಂತದ ಹುದ್ದೆಗಳಿಗೂ ಕನ್ನಡಿಗರಿಗೆ ಅವಕಾಶ ಕಲ್ಪಿಸಬೇಕು ಎಂದು ಕನ್ನಡೇತರ ಕಂಪನಿ ಸ್ಥಾಪಕರ ನಿಲುವಿಗೆ ಗಟ್ಟಿ ಧ್ವನಿಯಲ್ಲಿ ಹೈಕೋರ್ಟ್ ಚಾಟಿ ಬೀಸಿದೆ.

ತನಗೆ ಮಂಜೂರಾಗಿದ್ದ ನಾಲ್ಕು ಎಕರೆ ಜಮೀನನ್ನು ರದ್ದುಪಡಿಸಿದ್ದ ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿ (ಕೆಐಎಡಿಬಿ) ಕ್ರಮವನ್ನು ಪ್ರಶ್ನಿಸಿ ಐಡಿಬಿಐ ಬ್ಯಾಂಕ್ ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ.ಅಂಜಾರಿಯಾ ಹಾಗೂ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ಬ್ಯಾಂಕ್, ಕನ್ನಡಿಗರಿಗೆ ಉದ್ಯೋಗ ನೀಡಲು ಹಿಂದೇಟು ಹಾಕಿರುವ ಅಂಶವನ್ನು ಗಂಭೀರವಾಗಿ ಪರಿಗಣಿಸಿದ ನ್ಯಾಯಪೀಠ, 'ಬರಿದೇ 'ಸಿ' ಹಾಗೂ 'ಡಿ' ವೃಂದದ ಉದ್ಯೋಗಗಳನ್ನು ಕನ್ನಡಿಗರಿಗೆ ನೀಡುವುದನ್ನು ಹೇಗೆ ತಾನೇ ಒಪ್ಪಲು ಸಾಧ್ಯ ಎಂದು ಖಾರವಾಗಿ ಪ್ರಶ್ನಿಸಿತಲ್ಲದೆ ಎಲ್ಲಾ ಹಂತದ ಹುದ್ದೆಗಳಲ್ಲೂ ಕನ್ನಡಿಗರಿಗೆ ಅವಕಾಶ ಕಲ್ಪಿಸಬೇಕು ಎಂದು ಎಚ್ಚರಿಸಿತು.

ಜಮೀನು ಹಂಚಿಕೆ ಮಾಡಿ ನೀಡಲಾಗಿದ್ದ ಮಂಜೂರಾತಿ ಪತ್ರವನ್ನು ರದ್ದುಪಡಿಸಿರುವ ವಿಚಾರಕ್ಕೆ ಸಂಬಂಧಿಸಿದಂತೆ ಯಥಾಸ್ಥಿತಿ ಕಾಯ್ದುಕೊಳ್ಳುವಂತೆ ಕೆಐಎಡಿಬಿ ಮತ್ತು ಐಡಿಬಿಐ ಬ್ಯಾಂಕಿಗೆ ಸೂಚಿಸಿದ ನ್ಯಾಯಪೀಠ ವಿಚಾರಣೆ ಮುಂದೂಡಿತು.

ಪ್ರಕರಣವೇನು: ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಸಮೀಪದಲ್ಲಿ ಕೆಐಎಡಿಬಿ ಅಭಿವೃದ್ಧಿಪಡಿಸಿರುವ ಬೆಂಗಳೂರು ಹಾರ್ಡ್‌ವೇರ್ ಪಾರ್ಕ್‌ನಲ್ಲಿ 4.5 ಎಕರೆಯನ್ನು ಐಡಿಬಿಐ ಬ್ಯಾಂಕಿಗೆ 2013ರ ಫೆಬ್ರುವರಿ 15ರಂದು ಹಂಚಿಕೆ ಮಾಡಲಾಗಿತ್ತು. ಬ್ಯಾಂಕಿನ ರೀಜನಲ್ ಪ್ರೊಸೆಸಿಂಗ್ ಯೂನಿಟ್, ಕಾಲ್ ಸೆಂಟರ್, ಸಿಬ್ಬಂದಿ ವಸತಿ ನಿಲಯ ಸೇರಿದಂತೆ ಇನ್ನಿತರ ಕಟ್ಟಡ ನಿರ್ಮಾಣಕ್ಕೆ ಈ ಜಮೀನು ಹಂಚಿಕೆ ಮಾಡಲಾಗಿತ್ತು. ಎರಡು ವರ್ಷಗಳಲ್ಲಿ ಯೋಜನೆ ಜಾರಿಗೊಳಿಸಬೇಕು. ಅಧಿಕಾರಿ ಹುದ್ದೆಗಳಿಗೆ ಕನ್ನಡಿಗರನ್ನು ನೇಮಿಸಬೇಕು ಎಂದು ಜಮೀನು ಹಂಚಿಕೆ ಸಮಯದಲ್ಲಿ ಕೆಐಎಡಿಬಿ ಷರತ್ತು ವಿಧಿಸಿತ್ತು. ಹತ್ತು ವರ್ಷಗಳಾದರೂ ಯೋಜನೆ ಜಾರಿ ಮಾಡದ ಹಿನ್ನೆಲೆಯಲ್ಲಿ ಜಮೀನು ಹಂಚಿಕೆ ಪತ್ರ ರದ್ದುಪಡಿಸಿ 2023ರ ಜುಲೈ 14ರಂದು ಕೆಐಎಡಿಬಿ ಆದೇಶಿಸಿತ್ತು.

ಜಮೀನು ಹಂಚಿಕೆ ಪತ್ರ ರದ್ದುಪಡಿಸಿದ ಕ್ರಮವನ್ನು ಪ್ರಶ್ನಿಸಿ ಬ್ಯಾಂಕ್ ಹೈಕೋರ್ಟ್‌ಗೆ ರಿಟ್ ಅರ್ಜಿ ಸಲ್ಲಿಸಿತ್ತು ಆ ಅರ್ಜಿಯನ್ನು ಏಕಸದಸ್ಯ ನ್ಯಾಯಪೀಠ 2024ರ ಮಾರ್ಚ್ 6ರಂದು ವಜಾಗೊಳಿಸಿತ್ತು. ಅಂತೆಯೇ, ಇಡೀ ಯೋಜನೆಯಲ್ಲಿ ವೈಯಕ್ತಿಕ ಅಧಿಕಾರಿ ಹುದ್ದೆಯೊಂದಕ್ಕೆ ಕನ್ನಡಿಗರನ್ನು ನೇಮಕ ಮಾಡಬೇಕೆಂಬ ಷರತ್ತು ಪಾಲಿಸದೇ ಹೋದದ್ದಕ್ಕೆ ಏಕಸದಸ್ಯ ನ್ಯಾಯಪೀಠ ಗಂಭೀರ ಆಕ್ಷೇಪ ವ್ಯಕ್ತಪಡಿಸಿತ್ತು ಏಕಸದಸ್ಯ ನ್ಯಾಯಪೀಠದ ಆದೇಶ ಪ್ರಶ್ನಿಸಿ ಬ್ಯಾಂಕ್ ಮೇಲ್ಮನವಿ ಸಲ್ಲಿಸಿದೆ.

ರೈಲ್ವೆ ನಿಲ್ದಾಣಗಳಲ್ಲಿ ಕೈಗೆಟುಕುವ ದರದಲ್ಲಿ ಊಟದ ವ್ಯವಸ್ಥೆ

ನವದೆಹಲಿ: ಜನರಲ್ ಕಂಪಾರ್ಟ್‌ಮೆಂಟ್‌ಗಳಲ್ಲಿ ಪ್ರಯಾಣಿಸುವ ರೈಲು ಪ್ರಯಾಣಿಕರು ಈಗ ನಿಲ್ದಾಣಗಳಲ್ಲಿ ಕೈಗೆಟುಕುವ ಬೆಲೆಯಲ್ಲಿ ಆರೋಗ್ಯಕರ ಊಟ ಮತ್ತು ತಿಂಡಿಗಳನ್ನು ಪಡೆಯುತ್ತಿದ್ದಾರೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

100ಕ್ಕೂ ಹೆಚ್ಚು ನಿಲ್ದಾಣಗಳು ಸೇರಿದಂತೆ ಭಾರತೀಯ ರೈಲ್ವೆಯಾದ್ಯಂತ ಸುಮಾರು 150 ಕೌಂಟರ್‌ಗಳು ಕಾರ್ಯನಿರ್ವಹಿಸುತ್ತಿದ್ದು, ಈ ಸೌಲಭ್ಯವನ್ನು ಮತ್ತಷ್ಟು ವಿಸ್ತರಿಸಲಾಗುವುದು ಅವರು ಮಾಹಿತಿ ನೀಡಿದ್ದಾರೆ. ಭಾರತೀಯ ರೈಲ್ವೇ ಕ್ಯಾಟರಿಂಗ್ ಮತ್ತು ಟೂರಿಸಂ ಕಾರ್ಪೊರೇಷನ್ ಜೊತೆಗೆ ಭಾರತೀಯ ರೈಲ್ವೇ ಪ್ರಯಾಣಿಕರಿಗೆ, ವಿಶೇಷವಾಗಿ ಸಾಮಾನ್ಯ ಬೋಗಿಗಳಲ್ಲಿ ತೆರಳುವ ಪ್ರಯಾಣಿಕರಿಗೆ ಕೈಗೆಟುಕುವ ಬೆಲೆಯಲ್ಲಿ ಆರೋಗ್ಯಕರ ಊಟ ಮತ್ತು ಒದಗಿಸಲಾಗುತ್ತಿದೆ ಎಂದು ಅವರು ತಿಳಿಸಿದರು. ಬೇಸಿಗೆಯ ತಿಂಗಳುಗಳಲ್ಲಿ ಪ್ರಯಾಣಿಕರ ಸಂಖ್ಯೆಯಲ್ಲಿ ಸಾಮಾನ್ಯವಾಗಿ ಹೆಚ್ಚಳವಿರುತ್ತದೆ. ಜನರಲ್ ಕಂಪಾರ್ಟ್‌ಮೆಂಟ್‌ಗಳಲ್ಲಿ ತೆರಳುವವರು ಅನೇಕ ಸಮಸ್ಯೆಗಳನ್ನು ಎದುರಿಸುತ್ತಾರೆ. ಇವೆಲ್ಲಾವನ್ನು ಮನಗೊಂಡು ಬಜೆಟ್ ಸ್ನೇಹಿ ಊಟದ ವ್ಯವಸ್ಥೆ ಕಲ್ಪಿಸಲಾಗಿದೆ ಎಂದರು.

ಮನೆಯಿಂದ ಹೊರಗೆಳೆದು ಮಹಿಳೆ ಮೇಲೆ ಗುಂಪು ದೌರ್ಜನ್ಯ

ಇಬ್ಬರ ಬಂಧನ; ಮತ್ತಿಬ್ಬರು ನಾಪತ್ತೆ

ಮೈಸೂರು, ಏ.23– ಗುಂಪೊಂದು ಮನೆಗೆ ನುಗ್ಗಿ ಮಹಿಳೆ ಮೇಲೆ ಹಲ್ಲೆ ನಡೆಸಿ, ಅವರನ್ನು ಬಲವಂತವಾಗಿ ಎಳೆದೊಯ್ದ ಘಟನೆ ಮೈಸೂರಿನ ಎನ್.ಆರ್. ಮೊಹಲ್ಲಾದಲ್ಲಿ ನಡೆದಿದ್ದು, ಈ ಸಂಬಂಧ ಪೊಲೀಸರು ಇಬ್ಬರನ್ನು ಬಂಧಿಸಿದ್ದಾರೆ.

ಇಲ್ಲಿನ ಎಜೆ ಬ್ಲಾಕ್ ನಿವಾಸಿ ರಾಮದಾಸ್ ಅವರ ಪತ್ನಿ ಸವಿತಾ(42) ಅವರಿಗೆ ಥಳಿಸಿ, ಬಲವಂತವಾಗಿ ಎಳೆದೊಯ್ದಿದ್ದ ನಾಲ್ವರಲ್ಲಿ ಚಂದನ್ ಹಾಗೂ ಕಾರ್ತಿಕ್‌ನನ್ನು ಪೊಲೀಸರು ಬಂಧಿಸಿದ್ದು, ಗುಂಪಿನಲ್ಲಿದ್ದ ವಿಜಯನಗರದ ಸೌಭಾಗ್ಯ ಹಾಗೂ ಆಕೆಯ ಮಗ ತಲೆಮರೆಸಿಕೊಂಡಿದ್ದಾರೆ.

ಏನಿದು ಘಟನೆ: ರಾಮದಾಸ್ ಫುಡ್ ಡೆಲಿವರಿ ಬಾಯ್ ಆಗಿದ್ದು, ಅವರ ಪತ್ನಿ ಸವಿತಾ ವಿಜಯನಗರದಲ್ಲಿ ಟೈಲರಿಂಗ್ ಕೆಲಸ ಮಾಡುತ್ತಾರೆಂದು ಹೇಳಲಾಗಿದೆ. ಇವರ ಪುತ್ರಿ ವಿದ್ಯಾಭ್ಯಾಸ ಪೂರ್ಣಗೊಳಿಸಿದ್ದು, ಪುತ್ರ ಇಂಜಿನಿಯರಿಂಗ್ ವ್ಯಾಸಂಗ ಮಾಡುತ್ತಿದ್ದಾರೆ. ಭಾನುವಾರ ರಾತ್ರಿ ಸುಮಾರು 8 ಗಂಟೆ ಸಮಯದಲ್ಲಿ ಸೌಭಾಗ್ಯ, ಆಕೆಯ ಇಬ್ಬರು ಮಕ್ಕಳು ಹಾಗೂ ಅವರ ಪೌಲ್ಟ್ರಿ ಕೆಲಸಗಾರ ಸೇರಿ ಒಟ್ಟು 4 ಮಂದಿ ಗುಂಪು ಏಕಾಏಕಿ ಮನೆಗೆ ನುಗ್ಗಿ, ಸವಿತಾ ಮೇಲೆ ಹಲ್ಲೆ ನಡೆಸಿದ್ದಾರೆ. ಮನೋಜ್ ಎಲ್ಲಿದ್ದಾನೆ? ಎಂದು ಥಳಿಸಿದ್ದಾರೆ. ರಕ್ಷಣೆಗೆ ಮುಂದಾದ ಇಬ್ಬರು ಮಕ್ಕಳನ್ನೂ ತಳ್ಳಿದ್ದಾರೆ. ಅಷ್ಟಕ್ಕೆ ಸುಮ್ಮನಾಗದೆ ಸವಿತಾ ಅವರನ್ನು ರಸ್ತೆಗೆ ಎಳೆದೊಯ್ದು ಕಾರಿನಲ್ಲಿ ಬಲವಂತವಾಗಿ ಕರೆದೊಯ್ದಿದ್ದಾರೆ. ಈ ವೇಳೆ ಸವಿತಾ ಪತಿ ರಾಮದಾಸ್ ಕೆಲಸಕ್ಕೆ ಹೋಗಿದ್ದರು. ಕೂಡಲೇ ಸವಿತಾ ಪುತ್ರ ಘಟನೆ ಬಗ್ಗೆ ಪೊಲೀಸರಿಗೆ ದೂರು ನೀಡಿದ್ದಾರೆ. ಆದರೆ ಕೆಲ ಗಂಟೆಯ ನಂತರ ಸವಿತಾ ಅವರನ್ನು ವಾಪಸ್ ಮನೆ ಬಳಿ ಬಿಟ್ಟು ಹೋಗಿದ್ದಾರೆ.ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಇಬ್ಬರನ್ನು ಬಂಧಿಸಲಾಗಿದ್ದು, ತಲೆಮರೆಸಿಕೊಂಡಿರುವ ಮತ್ತಿಬ್ಬರ ಪತ್ತೆಗೆ ಕ್ರಮ ವಹಿಸಲಾಗಿದೆ. ತನಿಖೆ ನಂತರ ಪೂರ್ಣ ಮಾಹಿತಿ ತಿಳಿಯಲಿದೆ ಎಂದು ನರಸಿಂಹ ರಾಜ ಠಾಣೆ ಪೊಲೀಸರು ತಿಳಿಸಿದ್ದಾರೆ.

ಮೈಸೂರು ಮಿತ್ರ


ಮೈಟಾರ್ಪಲಿನ್ಸ್ ಮೈಸೂರು ಮಾಲೀಕರು
ಹಾಗೂ ಖ್ಯಾತ ಉದ್ಯಮಿಗಳಾದ
ಕೆ.ಪ್ರದೀಪ್ ಸಿಂಗ್
ರವರಿಗೆ
ಹುಟ್ಟುಹಬ್ಬದ ಶುಭಾಶಯಗಳು
ಕರುಣೆಯ ಜೀವ
ಅಂತರ ರಂಗದ ಭಾವ
ಕಾಣದದೈವ ನೀ ನನ್ನ
ಗೆಳೆಯ ನಿನಗೆ ನಿನ್ನ
ಕುಟುಂಬಕ್ಕೆ ಆ ದೇವರು
ಸದಾ ಬೆಂಗಾವಲಾಗಿ
ರಕ್ಷಣೆ ಕೊಡಲಿ
ನಿನ್ನಂತ ಗೆಳೆಯನಿಗೆ
ಹುಟ್ಟುಹಬ್ಬದ
ಶುಭಾಶಯಗಳು
93437 06416
ಶುಭಕೋರುವವರು
ಎಸ್.ಕೆ.ಗ್ರೂಪ್ಸ್ ಮೈಸೂರು


ಮಹದೇವ್ KRM ಅವರಿಗೆ 49ನೇ ವರ್ಷದ ಹುಟ್ಟುಹಬ್ಬದ ಶುಭಾಶಯಗಳು
ವಾರ್ಡ್ ನಂ 52 53
ಟಿಕೆಟ್ ಆಕಾಂಕ್ಷಿ
ಪ್ರಕಟಣೆ: ಶಿವು ಸಜ್ಜೆಹುಂಡಿ


ಅಣ್ಣಾವರಿಗೆ ಹುಟ್ಟು ಹಬ್ಬ
ನಗು ಮುಖದ ಒಡೆಯ
ದಾನ ಧರ್ಮದಲ್ಲಿ ನೀನು ಕರ್ಣನಂತೆ, ಗೆಳತನದಲ್ಲಿ ನೀ ಶ್ರೀ ಕೃಷ್ಣಪರಮಾತ್ಮನಂತೆ,
ಕಷ್ಟ ಸುಖಗಳಿಗೆ ನೆರವಾಗುವ ನೀನೊಬ್ಬ ಕಣ್ಮಣಿ, ನಿನ್ನಂತ ಗೆಳಯನಿಗೆ
ಹುಟ್ಟು ಹಬ್ಬದ ಶುಭಾಶಯಗಳು
ಕೆ. ಪ್ರದೀಪ್ ಸಿಂಗ್ ರವರಿಗೆ
ಮೈ ಟಾರ್ಪಲಿನ್ಸ್ ಮೈಸೂರು, ಮಾಲೀಕರು ಹಾಗೂ ಖ್ಯಾತ ಉದ್ಯಮಿಗಳು
ಜನಪ್ರಿಯ ಶಾಸಕರು
ಕೆ. ಹರೀಶ್‌ಗೌಡ್ರು
ಚಾಮರಾಜ ವಿಧಾನಸಭಾ ಕ್ಷೇತ್ರ
ಹೆಚ್.ಎಸ್. ಸುಜಿತ್ ಕುಮಾರ್ (ಅಣ್ಣ)
ಕಾಂಗ್ರೆಸ್ ಮುಖಂಡರು
HAPPY BIRTHDAY
ಶುಭ ಕೋರುವವರು :
ಎಸ್.ಕೆ. ಗ್ರೂಪ್
MN CREATERS MYSORE 9886817683

ಎಕ್ಸ್ಟ್ರಾ ಇನ್ನಿಂಗ್ಸ್

ಮೈಸೂರು ಮಿತ್ರ


ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಏಪ್ರಿಲ್ 24
ಬುಧವಾರ 2024

Promotional Feature



ಕೃಷ್ಣಾ ಸಿಂಗ್



ಶ್ರೀಮತಿ ಸುಕನ್ಯಾಭಾಯಿ

ಯುವ ಯಶಸ್ವಿ ಉದ್ಯಮಿ ಕೆ.ಪ್ರದೀಪ್ ಸಿಂಗ್, ಹಲವು ಕ್ಷೇತ್ರಗಳಲ್ಲಿ ಸಕ್ರಿಯರಾಗುವ ಮೂಲಕ ಮೈಸೂರು ಜನರಿಗೆ ಚಿರಪರಿಚಿತರಾಗಿದ್ದಾರೆ. ಅದರಲ್ಲೂ ಮೈಸೂರಿನ ಹೃದಯ ಭಾಗದಲ್ಲಿ ಬಹಳ ಚಿರಪರಿಚಿತ ಹಾಗೂ ಉದ್ಯಮ ವಲಯದಲ್ಲಿ ಸರಾಗವಾಗಿ ಕೇಳಿ ಬರುವ ಹೆಸರು. ಇವರು ಉದ್ಯಮದ ಜೊತೆಗೆ ಸಾಮಾಜಿಕ ಕಾರ್ಯ, ರಾಜಕೀಯ, ಸಿನಿಮಾ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡಿರುವ ಬಹುಮುಖ ಪ್ರತಿಭೆ. ಹೆಂಗರುಳಿನ ಸ್ನೇಹಜೀವಿ ಪ್ರದೀಪ್ ಸಿಂಗ್ ಸ್ನೇಹ ವಲಯ 'ಸರ್ವ ಜನಾಂಗದ ಶಾಂತಿಯ ತೋಟ'ದಂತಿದೆ. ಕಷ್ಟದಲ್ಲಿರುವವರಿಗೆ ಕೈಲಾದಷ್ಟು ಸಹಾಯ ಮಾಡುವುದು ಇವರ ನಿತ್ಯ ಕಾಯಕವಾಗಿರುವುದು ಅನುಕರಣೀಯ. ಒಂದು ಕಾಲದಲ್ಲಿ ಬೇಕರಿ ಉದ್ಯಮಿಯಾಗಿ ದೇವರಾಜ ಮೊಹಲ್ಲಾದಲ್ಲಿ ಜನಾನುರಾಗಿಯಾಗಿದ್ದ ಕೃಷ್ಣ ಸಿಂಗ್ ಹಾಗೂ ಸುಕನ್ಯಾ ಬಾಯಿ ದಂಪತಿಯ ಪುತ್ರನಾದ ಪ್ರದೀಪ್ ಸಿಂಗ್, ಸದ್ವಿದ್ಯಾ ಶಾಲೆಯಲ್ಲಿ ಹತ್ತನೇ ತರಗತಿವರೆಗೆ ಓದಿದ್ದಾರೆ. ನಂತರ ವ್ಯಾಪಾರದ ಕಡೆಗೆ ಹೆಚ್ಚು ಆಸಕ್ತಿ ಮೂಡಿದ್ದರಿಂದಾಗಿ ಉನ್ನತ ವ್ಯಾಸಂಗ ಮಾಡಲಿಲ್ಲ. ಆದರೆ ಬದುಕಿನ ಶಿಕ್ಷಣವನ್ನು ಚೆನ್ನಾಗಿ ಕಲಿತು ಯಶಸ್ವಿಯಾಗುವ ಮೂಲಕ ಇತರರಿಗೆ ಮಾದರಿಯಾಗಿದ್ದಾರೆ. ಸುಂದರ ಬದುಕು ಕಟ್ಟಿಕೊಳ್ಳಲು ಕನಿಷ್ಠ ವಿದ್ಯಾಭ್ಯಾಸ ಮಾಡಿದರೆ ಸಾಕು ಎಂಬುದಕ್ಕೆ ಇವರು ಉತ್ತಮ ಸಾಕ್ಷಿಯಾಗಿದ್ದಾರೆ.



ಶ್ರೀಮತಿ ಪಾರ್ವತಿಭಾಯಿ



ಶ್ರೀ ನಂದಾರಾಮ್ ಸಿಂಗ್

ಮೈಸೂರು ಸಾಮಾಜಿಕ ಸೇವಾ ನೆಲೆಗಟ್ಟಿನ ಉದಯೋನ್ಮುಖ ಉದ್ಯಮಿ

ಕೆ.ಪ್ರದೀಪ್ ಸಿಂಗ್

"ಉದ್ಯಮ ಆರಂಭಕ್ಕೆ ನಮ್ಮ ತಂದೆ ಹಾಗೂ ತಾತ ಸ್ಫೂರ್ತಿ. ಬಡ ವಿದ್ಯಾರ್ಥಿಗಳಿಗೆ ಕಡಿಮೆ ದರದಲ್ಲಿ ಒಳ್ಳೆಯ ಬ್ಯಾಗ್ ಸಿಗುವಂತಾಗಬೇಕು ಎನ್ನುವ ಕಾರಣಕ್ಕೆ 'ಮೈ ಟಾರ್ಪಾಲಿನ್ಸ್' ಆರಂಭಿಸಿದೆವು. ಚಿಕ್ಕಂದಿನಿಂದಲೂ ಸಾಮಾಜಿಕ ಸೇವೆಯ ಬಗ್ಗೆ ಆಸಕ್ತಿ ಇತ್ತು. ನನ್ನ ರಾಜಕೀಯ ಗುರುಗಳಾದ ಜಿ.ಟಿ.ದೇವೇಗೌಡರ ಮಾರ್ಗದರ್ಶನದಲ್ಲಿ ಸಾಕಷ್ಟು ಕಲಿತಿದ್ದೇವೆ. ಅವರು ಜಿಲ್ಲಾ ಉಸ್ತುವಾರಿ ಸಚಿವರಾಗಿದ್ದಾಗ ನನಗೆ ಪಕ್ಷದಲ್ಲಿ ಜವಾಬ್ದಾರಿ ನೀಡಿದ್ದರು. ಸಿನಿಮಾ ಕ್ಷೇತ್ರದಲ್ಲೂ ಮುಂದುವರೆಯುವ ಆಸೆ ಇದೆ. ಅನಾಥಾಶ್ರಮಗಳಿಗೆ ದೊಡ್ಡ ಮಟ್ಟದಲ್ಲಿ ಸಹಾಯ ಮಾಡಬೇಕು. ಸಾಧ್ಯವಾದಷ್ಟು ಸಾಮಾಜಿಕ ಸೇವೆ ಮಾಡಬೇಕೆಂಬ ಆಶಯವಿದೆ. ದೇವರ ಕೃಪೆ, ಕುಟುಂಬ, ಸ್ನೇಹಿತರ ಸಹಕಾರದಿಂದ ಎಲ್ಲವೂ ಸಾಕಾರವಾಗುವ ವಿಶ್ವಾಸವಿದೆ. –ಕೆ.ಪ್ರದೀಪ್ ಸಿಂಗ್

ಉದ್ಯಮದಲ್ಲಿ ಯಶಸ್ವಿ ದಾಪುಗಾಲು...


ಕೆ.ಪ್ರದೀಪ್ ಸಿಂಗ್ ಅವರು ತಮ್ಮ ಸೋದರ ಅಮರ್ ಸಿಂಗ್ ಜೊತೆಗೂಡಿ ಮೈಸೂರಿನ ಪ್ರತಿಷ್ಠಿತ ಡಿ.ದೇವ ರಾಜ ಅರಸು ರಸ್ತೆಯಲ್ಲಿ 2009ರಲ್ಲಿ 'ಮೈ ಟಾರ್ಪಾಲಿನ್ಸ್' ಮಳಿಗೆ(ಸಂಖ್ಯೆ 87) ಆರಂಭಿಸುವ ಮೂಲಕ ಉದ್ಯಮಕ್ಕೆ ಪಾದಾರ್ಪಣೆ ಮಾಡಿದರು. ಅಂದು ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರು ಮಳಿಗೆಯನ್ನು ಉದ್ಘಾಟಿಸುವ ಮೂಲಕ ಶುಭ ಕೋರಿದ್ದರು. ಗುಣಮಟ್ಟದ ವಸ್ತುಗಳನ್ನು ಗ್ರಾಹಕರಿಗೆ ಒದಗಿಸುವ ಮೂಲಕ 'ಮೈ ಟಾರ್ಪಾಲಿನ್ಸ್' ಕೆಲವೇ ವರ್ಷಗಳಲ್ಲಿ ಜನಮನ್ನಣೆ ಗಳಿಸುವಲ್ಲಿ ಯಶಸ್ವಿಯಾಯಿತು. ಹೋಲ್‌ಸೇಲ್ ದರದಲ್ಲಿ ಬ್ಯಾಗ್‌ಗಳ ಸಗಟು ವ್ಯಾಪಾರಕ್ಕೆ ಅಡಿಯಿಟ್ಟು 'ಕೃಷ್ಣ ಎಂಟರ್‌ಪ್ರೈಸಸ್' ಸಂಸ್ಥೆ ಆರಂಭಿಸಿದರು. ಅಂದಿನ ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ಕಚೇರಿ ಉದ್ಘಾಟಿಸಿದರು. ಬಳಿಕ ದೇವರಾಜ ಅರಸು ರಸ್ತೆಯಲ್ಲಿ 'ಮೈ ಟಾರ್ಪಾಲಿನ್ಸ್' ಎದುರಿಗೇ ಇದರ ಎರಡನೇ ಶಾಖೆ ತೆರೆದರು. ಅದು ಮಹಿಳೆಯರಿಗೆ ಅವಶ್ಯವಾದ ಉತ್ಕೃಷ್ಟ ಗುಣಮಟ್ಟದ ವ್ಯಾನಿಟಿ ಬ್ಯಾಗ್, ಹ್ಯಾಂಡ್ ಬ್ಯಾಂಗ್‌ಗಳ ಆಗರವಾಗಿರುವುದು ವಿಶೇಷ.

ಉದ್ಯಮಕ್ಕೆ ಭಾವನಾತ್ಮಕ ಸ್ಫೂರ್ತಿ

ಯಾವುದೇ ಉದ್ಯಮ ಆರಂಭಿಸುವ ಮುನ್ನ ಹೂಡಿಕೆ, ಬೇಡಿಕೆ, ಲಾಭ–ನಷ್ಟ ಹೀಗೆ ಎಲ್ಲಾ ರೀತಿಯ ಲೆಕ್ಕಾಚಾರ ಮಾಡುವುದು ಸಹಜ. ಕಡಿಮೆ ಶ್ರಮ, ಕಡಿಮೆ ಬಂಡವಾಳ, ಕಡಿಮೆ ಅವಧಿಯಲ್ಲಿ ಹೆಚ್ಚು ಲಾಭ ಗಳಿಸಬಹುದಾದ ಉದ್ಯಮದತ್ತ ಹೆಚ್ಚು ಜನ ಒಲವು ತೋರುತ್ತಾರೆ. ಆದರೆ 'ಮೈ ಟಾರ್ಪಲಿನ್ಸ್' ಸ್ಥಾಪನೆ ಹಿಂದೆ ಒಂದು ಭಾವನಾತ್ಮಕ ಪ್ರಭಾವವಿದೆ. ಜ್ಯೂನಿಯರ್ ಮಹಾರಾಣಿ ಕಾಲೇಜು ಬಳಿ ಪ್ರದೀಪ್ ಸಿಂಗ್ ಅವರ ಮನೆ ಇದೆ. ಇವರು ಶಾಲೆ–ಕಾಲೇಜಿಗೆ ಬರುವ ಗ್ರಾಮೀಣ ಭಾಗದ ಮಕ್ಕಳನ್ನು ನಿತ್ಯ ಗಮನಿಸುತ್ತಿದ್ದರು. ಹಲವು ಮಕ್ಕಳು ಕಿತ್ತಿರುವ ಹಳೆಯ ಬ್ಯಾಗ್ ತರುವುದನ್ನು ನೋಡಿ ನೊಂದಿದ್ದರು. ಇದೇ 'ಮೈ ಟಾರ್ಪಾಲಿನ್ಸ್' ಸ್ಥಾಪನೆಗೆ ಕಾರಣವಾಯಿತು. ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ಕಡಿಮೆ ದರದಲ್ಲಿ ಉತ್ಕೃಷ್ಟ ಗುಣಮಟ್ಟದ ಬ್ಯಾಗ್‌ಗಳನ್ನು ಒದಗಿಸಬೇಕೆಂಬ ಉದ್ದೇಶದಿಂದ ಈ ಉದ್ಯಮವನ್ನು ಆಯ್ಕೆ ಮಾಡಿಕೊಂಡೆವು ಎಂದು ಪ್ರದೀಪ್ ಸಿಂಗ್ ಹೇಳಿದ್ದಾರೆ.







ಸಾಮಾಜಿಕ ಸೇವೆಗೆ ಸದಾ ಸಿದ್ಧ

ಪ್ರದೀಪ್ ಸಿಂಗ್ ಅವರಿಗೆ ಸಮಾಜ ಸೇವೆ ನಿತ್ಯ ಕಾಯಕ. ವಿಶೇಷ ದಿನಗಳು ಹಾಗೂ ಸಂದರ್ಭಕ್ಕೆ ಸೀಮಿತಗೊಳಿಸದೆ ಕಷ್ಟ ಎಂದವರಿಗೆ ಸಾಧ್ಯವಾದಷ್ಟು ಸಹಾಯ ಮಾಡುತ್ತಾ ಬಂದಿದ್ದಾರೆ. ಹಲವು ಅನಾಥಾಶ್ರಮಗಳಿಗೆ ಸಹಾಯ ಮಾಡುತ್ತಿದ್ದಾರೆ. ವಿಶೇಷ ಚೇತನರಿಗೆ ತ್ರಿಚಕ್ರ ಬೈಸಿಕಲ್ ಕೊಡಿಸಿದ್ದಾರೆ. ಸ್ವಾತಂತ್ರ್ಯ ದಿನಾಚರಣೆಯಂದು ಬಡ ಹಿರಿಯರಿಗೆ ಬಟ್ಟೆ, ವಿದ್ಯಾರ್ಥಿಗಳಿಗೆ ಬ್ಯಾಗ್, ಪುಸ್ತಕ ಇನ್ನಿತರ ಕಲಿಕಾ ಸಾಮಗ್ರಿಗಳನ್ನು ನೀಡುವ ಸಂಪ್ರದಾಯ ರೂಢಿಸಿಕೊಂಡಿದ್ದಾರೆ.

ಚಿಕ್ಕಂದಿನಿಂದಲೂ ವ್ಯಾಪಾರ ನಂಟು

ಪ್ರದೀಪ್ ಸಿಂಗ್ ಅವರು ಚಿಕ್ಕಂದಿನಿಂದಲೂ ವ್ಯಾಪಾರದ ಪಾಠ ಕಲಿತಿದ್ದಾರೆ. ಇವರ ತಾತ ನಂದಾರಾಮ್ ಸಿಂಗ್ ಅವರು ಶಿವರಾಂಪೇಟೆಯಲ್ಲಿ 'ಚಾಲೆಂಜ್ ಬೇಕರಿ' ನಡೆಸುತ್ತಿದ್ದರು. ನಂದಾರಾಮ್ ಸಿಂಗ್ ನಂತರ ಅವರ ಮಕ್ಕಳಾದ ಗೋಪಾಲ್ ಸಿಂಗ್, ಪೈಲ್ವಾನ್ ಕೃಷ್ಣ ಸಿಂಗ್(ಪ್ರದೀಪ್ ಸಿಂಗ್ ತಂದೆ) ಹಾಗೂ ಬೀರಬಲ್ ಸಿಂಗ್ ಬೇಕರಿ ನಿರ್ವಹಣೆ ಮಾಡುತ್ತಿದ್ದರು. ಇವರೊಂದಿಗೆ ಪ್ರದೀಪ್ ಸಿಂಗ್ ಹಾಗೂ ಸಹೋದರರು ಬೇಕರಿ ವ್ಯಾಪಾರದಲ್ಲಿ ಭಾಗಿಯಾಗುತ್ತಿದ್ದರು. ಅವಿಭಕ್ತ ಕುಟುಂಬವಾಗಿದ್ದರಿಂದ ಎಲ್ಲರೂ ವ್ಯಾಪಾರದಲ್ಲಿ ಪಾಲ್ಗೊಳ್ಳುತ್ತಿದ್ದರು. ನಂತರದಲ್ಲಿ ಕುಟುಂಬಗಳು ಪ್ರತ್ಯೇಕವಾದ ನಂತರ ಬೇಕರಿ ಉದ್ಯಮ ನಿಲ್ಲಿಸಿ, ಬೇರೆ ಬೇರೆ ಉದ್ಯಮಗಳತ್ತ ಮುಖ ಮಾಡಿದರು.

ತಾತ ಮೈಸೂರು ಅರಮನೆಯಲ್ಲಿ ಸೇವೆ

ಪ್ರದೀಪ್ ಸಿಂಗ್ ಅವರ ತಾತ ನಂದಾರಾಮ್ ಸಿಂಗ್ ಅವರು ಬೇಕರಿ ಉದ್ಯಮದಲ್ಲಿ ಯಶಸ್ವಿಯಾಗಿದ್ದರು. ಸರ್ಕಾರಿ ಆಸ್ಪತ್ರೆಗಳಿಗೆ ಹಾಲು–ಬ್ರೆಡ್ ಸರಬರಾಜು ಮಾಡುತ್ತಿದ್ದರು. ರುಚಿ ಹಾಗೂ ಗುಣಮಟ್ಟ ಉತ್ತಮವಾಗಿದ್ದ ಕಾರಣ ಇವರ ಬೇಕರಿಯಲ್ಲಿ ದೊರೆಯುತ್ತಿದ್ದ ಬ್ರೆಡ್‌ಗೆ ಭಾರೀ ಬೇಡಿಕೆ ಇತ್ತು. ಆಗಿನ ಕಾಲಕ್ಕೆ ಅದೆಷ್ಟೋ ಜನರಿಗೆ ಬ್ರೆಡ್ ಆಹಾರವಾಗಿತ್ತು. ಹಾಗಾಗಿ ಉದ್ಯಮವೂ ಚೆನ್ನಾಗಿ ಬೆಳೆದಿತ್ತು ಎಂದು ನಂದಾರಾಮ್ ಸಿಂಗ್ ಅವರ ಪುತ್ರ ಬೀರಬಲ್ ಸಿಂಗ್ ಸ್ಮರಿಸಿಕೊಂಡಿದ್ದಾರೆ. ಅಲ್ಲದೆ ನಂದಾರಾಮ್ ಸಿಂಗ್ ವಂಶಪಾರಂಪರಿಕವಾಗಿ ಬಂದಿದ್ದ ಕುದುರೆ ಪಳಗಿಸುವ ವಿದ್ಯೆಯನ್ನು ಕರಗತ ಮಾಡಿಕೊಂಡಿದ್ದರು. ಈ ಹಿನ್ನೆಲೆಯಲ್ಲಿ ಮೈಸೂರು ಅರಮನೆಯಲ್ಲಿ ಸೇವೆ ಸಲ್ಲಿಸುವ ಅವಕಾಶವೂ ದಕ್ಕಿತ್ತು. ಅವರು ಕುದುರೆಗಳನ್ನು ಪಳಗಿಸಿ, ಉತ್ತಮ ರೀತಿಯಲ್ಲಿ ತರಬೇತಿ ನೀಡಿ ಮಹಾರಾಜರ ಸವಾರಿಗೆ ಸಜ್ಜುಗೊಳಿಸುವ ಕಾರ್ಯವನ್ನು ಅತ್ಯಂತ ಸಮರ್ಥವಾಗಿ ನಿರ್ವಹಿಸುತ್ತಿದ್ದರು ಎಂದು ತಿಳಿಸಿದರು.

ಸ್ತ್ರೀ ಸ್ವಾವಲಂಬನೆಗೆ ಪ್ರೋತ್ಸಾಹ

ಬಡ ಹಾಗೂ ಮಧ್ಯಮ ವರ್ಗದ ಜೀವನ ನಿರ್ವಹಣೆ ಒಬ್ಬರ ಸಂಪಾದನೆಯಿಂದ ಕಷ್ಟಸಾಧ್ಯ. ಹಾಗಾಗಿ ಅನೇಕ ಮಹಿಳೆಯರು ಗಾರ್ಮೆಂಟ್ಸ್, ಅಂಗಡಿಗಳಿಗೆ ಕೆಲಸಕ್ಕೆ ಹೋಗುತ್ತಾರೆ. ಕೆಲವರು ಮನೆಯಲ್ಲೇ ಮಾಡಬಹುದಾದ ಕೆಲಸಗಳ ಮೂಲಕ ಒಂದಷ್ಟು ಹಣ ದುಡಿಯುತ್ತಾರೆ. ಇಂತಹ ಎರಡೂ ವರ್ಗದ ಮಹಿಳೆಯರಿಗೆ ಸಹೋದರನಾಗಿ ಪ್ರದೀಪ್ ಸಿಂಗ್ ಸಾಧ್ಯವಾದಷ್ಟು ಸಹಾಯ ಮಾಡಿದ್ದಾರೆ. ತಮ್ಮ ಅಂಗಡಿಗಳಲ್ಲಿ ಮಹಿಳೆಯರಿಗೆ ಉದ್ಯೋಗಾವಕಾಶ ನೀಡಿದ್ದಾರೆ. ಅಲ್ಲದೆ ಅನೇಕ ಮಹಿಳೆಯರಿಗೆ ಜೆಎಸ್‌ಎಸ್ ತರಬೇತಿ ಸಂಸ್ಥೆ ಮೂಲಕ ಟೈಲರಿಂಗ್ ಇನ್ನಿತರ ಕುಶಲ ತರಬೇತಿ ಕೊಡಿಸಿ, ನಂತರ ಅವರಿಗೆ ಟೈಲರಿಂಗ್ ಮಿಷನ್‌ಗಳನ್ನೂ ಒದಗಿಸುವ ಮೂಲಕ ಬಡ ಕುಟುಂಬಗಳಿಗೆ ನೆರವಾಗಿದ್ದಾರೆ. ಸ್ವಾವಲಂಬನೆಯ ಜೀವನ ಕಟ್ಟಿಕೊಳ್ಳಲು ಮಹಿಳೆಯರಿಗೆ ಸಹಾಯ ಮಾಡುವಂತಹ ಹಲವು ಸಂಘ ಸಂಸ್ಥೆಗಳಿಗೆ ಸಹಕಾರ ನೀಡುತ್ತಿದ್ದಾರೆ.

ಕುಟುಂಬದ ಸಹಕಾರ

ಪ್ರದೀಪ್ ಸಿಂಗ್ ಅವರ ಪತ್ನಿ ನಿರ್ಮಲಾ ಗೃಹಿಣಿ. ಪುತ್ರ ಅಮೃತ್ ಸಿಂಗ್ ದ್ವಿತೀಯ ವರ್ಷದ ಬಿ.ಕಾಂ ವಿದ್ಯಾರ್ಥಿ. ಪುತ್ರಿ ಶೀತಲ್ ಸಿಂಗ್ ಮೊದಲನೇ ವರ್ಷದ ಬಿಬಿಎ, ಎಲ್‌ಎಲ್‌ಬಿ ವ್ಯಾಸಂಗ ಮಾಡುತ್ತಿದ್ದಾರೆ. ಕುಟುಂಬದ ಜೊತೆಗೆ ಸೋದರ ಸಂಬಂಧಿಗಳು ಪ್ರದೀಪ್‌ಸಿಂಗ್ ಅವರ ಸೇವಾ ಕಾರ್ಯಗಳಿಗೆ ಒತ್ತಾಸೆಯಾಗಿದ್ದಾರೆ.

ರಾಜಕೀಯ ಕ್ಷೇತ್ರದಲ್ಲಿ ಪ್ರದೀಪ್ ಸಿಂಗ್

ಚಿಕ್ಕ ವಯಸ್ಸಿನಿಂದಲೇ ವ್ಯಾಪಾರ–ಉದ್ಯಮದಲ್ಲಿ ತೊಡಗಿದ್ದ ಪ್ರದೀಪ್ ಸಿಂಗ್ ಅವರಿಗೆ ರಾಜಕೀಯ ರಂಗದ ಬಗ್ಗೆಯೂ ಅತೀವ ಆಸಕ್ತಿ. ತೆರೆಮರೆಯಲ್ಲಿ ರಾಜಕೀಯ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿದ್ದ ಇವರು ಜೆಡಿಎಸ್ ಪಕ್ಷದಲ್ಲಿ ಸಂಘಟನಾತ್ಮಕ ಜವಾಬ್ದಾರಿಗಳ ಮೂಲಕ ಮುಂಚೂಣಿಯಲ್ಲಿ ಗುರುತಿಸಿಕೊಂಡರು. ಟಿ.ದೇವರಾಜು ಅವರು ಜೆಡಿಎಸ್ ನಗರಾಧ್ಯಕ್ಷರಾಗಿದ್ದ ವೇಳೆ ಪ್ರದೀಪ್ ಸಿಂಗ್ ಸಕ್ರಿಯರಾದರು. ಮುಖಂಡರಾದ ಶರಾವತಿ ವೆಂಕಟೇಶ್ ಅವರು ಕಟ್ಟಿದ್ದ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಜಿ.ಟಿ.ದೇವೇಗೌಡರ ಅಭಿಮಾನಿ ಬಳಗದ ಸಂಚಾಲಕರಾಗಿ ಕೆಲಸ ಮಾಡಿದರು. ಜೆಡಿಎಸ್ ನಗರ ಘಟಕದ ಕಾರ್ಯದರ್ಶಿಯಾಗಿಯೂ ಸಮರ್ಥವಾಗಿ ಕಾರ್ಯ ನಿರ್ವಹಿಸಿದರು. ಸದ್ಯ ರಾಜಕಾರಣದಿಂದ ತಾತ್ಕಾಲಿಕವಾಗಿ ದೂರವಿದ್ದರೂ ಎಲ್ಲಾ ಪಕ್ಷದ ಹಲವು ಮುಖಂಡರು ಪ್ರದೀಪ್ ಸಿಂಗ್ ಸ್ನೇಹ ವಲಯದಲ್ಲಿದ್ದಾರೆ. ಮುಂದಿನ ದಿನಗಳಲ್ಲಿ ರಾಜಕೀಯದಲ್ಲಿ ಹೆಚ್ಚು ಸಕ್ರಿಯವಾಗುವ ಮೂಲಕ ಜನಸೇವೆಯ ಪರಿಧಿಯನ್ನು ವಿಸ್ತರಿಸಿಕೊಳ್ಳುವಂತೆ ಅವರಿಗೆ ಸಲಹೆ ನೀಡುತ್ತಿದ್ದಾರೆ ಎಂದು ಸ್ನೇಹಿತರೊಬ್ಬರು ತಿಳಿಸಿದ್ದಾರೆ.

ಮಂಡ್ಯ, ಬೆಂಗಳೂರಿಗೆ ಉದ್ಯಮ ವಿಸ್ತಾರ

ದೇವರಾಜ ಅರಸು ರಸ್ತೆಯಲ್ಲಿರುವ 'ಮೈ ಟಾರ್ಪಲಿನ್ಸ್'ಗೆ ಮೈಸೂರು ಮಾತ್ರವಲ್ಲದೆ ನೆರೆಹೊರೆಯ ಜಿಲ್ಲೆಗಳಿಂದಲೂ ಗ್ರಾಹಕರು ಬರುತ್ತಾರೆ. ಪ್ರವಾಸ ಇನ್ನಿತರ ಕಾರ್ಯಕ್ರಮ ನಿಮಿತ್ತ ಬೆಂಗಳೂರಿನಿಂದ ಮೈಸೂರಿಗೆ ಬರುವವರೂ ಕೂಡ ಈ ಮಳಿಗೆಗೆ ಭೇಟಿ ನೀಡುತ್ತಾರೆ. ಗ್ರಾಹಕರಿಂದ ಉತ್ತಮ ಪ್ರತಿಕ್ರಿಯೆ ವ್ಯಕ್ತವಾಗುತ್ತಿರುವ ಹಿನ್ನೆಲೆಯಲ್ಲಿ ಎಲ್ಲಾ ಕಡೆ ಉತ್ಕೃಷ್ಟ ಉತ್ಪನ್ನಗಳನ್ನು ಒದಗಿಸುವ ಉದ್ದೇಶದಿಂದ ಪ್ರದೀಪ್ ಸಿಂಗ್ ಮುಂದಾಗಿದ್ದಾರೆ. ಈಗಾಗಲೇ ಮಂಡ್ಯದ ನೂರಡಿ ರಸ್ತೆಯಲ್ಲಿ 'ಮೈ ಟಾರ್ಪಲಿನ್ಸ್' ಶಾಖೆ ಕಾರ್ಯ ನಿರ್ವಹಿಸುತ್ತಿದ್ದು, ಅಲ್ಲಿಯೂ ಜನಪ್ರಿಯತೆ ಗಳಿಸಿದೆ. ಇನ್ನು ರಾಜ್ಯ ರಾಜಧಾನಿ ಬೆಂಗಳೂರಿನ ಆರ್.ಟಿ.ನಗರ ಹಾಗೂ ಬನ್ನೇರುಘಟ್ಟದಲ್ಲಿ ಶೀಘ್ರದಲ್ಲೇ ಶಾಖೆಗಳು ಆರಂಭವಾಗಲಿವೆ.

ಸಿನಿಮಾ ಮೂಲಕ ನಗಿಸುವ ಪ್ರಯತ್ನ

ಸಾಧ್ಯವಾದಷ್ಟು ಒಳ್ಳೆಯ ಕೆಲಸ ಮಾಡಿಕೊಂಡು ಎಲ್ಲರೂ ನಗು ನಗುತ್ತಾ ಬಾಳಬೇಕು ಎನ್ನುವುದು ಪ್ರದೀಪ್ ಸಿಂಗ್ ಅವರ ಆಶಯ. ಇದಕ್ಕೆ ಪೂರಕ ಎನ್ನುವಂತೆ ಸಿನಿಮಾಗಳಲ್ಲೂ ಅದೇ ರೀತಿಯ ಅವಕಾಶಗಳು ಸಿಕ್ಕಿವೆ. ಆತ್ಮೀಯರಾದ ಖ್ಯಾತ ನಿರ್ದೇಶಕ ಓಂಪ್ರಕಾಶ್ ರಾವ್ ಸಹಕಾರದಿಂದ ಸಿನಿಮಾ ರಂಗಕ್ಕೆ ಪ್ರವೇಶಿಸಿ, ದರ್ಶನ್ ಅಭಿನಯದ 'ಪ್ರಿನ್ಸ್' ಚಿತ್ರದಲ್ಲಿ ಕಾಮಿಡಿಯನ್ ಆಗಿ ನಟಿಸಿ ಭರವಸೆಯ ಕಲಾವಿದನಾಗಿ ಗುರುತಿಸಿ ಕೊಳ್ಳುತ್ತಿದ್ದಾರೆ. ಚಿರಂಜೀವಿ ಸರ್ಜಾ ನಟನೆಯ 'ರಾಜಮಾರ್ತಾಂಡ', ಎಸ್.ಮಹೇಂದರ್ ನಿರ್ದೇಶನದ 'ಅಕ್ಕ–ತಂಗಿ', 'ಒನ್ಸ್ ಮೋರ್ ಕೌರವ' ಚಿತ್ರಗಳಲ್ಲೂ ಹಾಸ್ಯನಟನಾಗಿ ಕಾಣಿಸಿಕೊಂಡಿದ್ದಾರೆ. ಕಿಶೋರ್ ಅಭಿನಯದ 'ಹುಲಿ' ಚಿತ್ರದಲ್ಲೂ ಸಣ್ಣ ಪಾತ್ರ ನಿರ್ವಹಿಸಿದ್ದಾರೆ. ಇದೀಗ ಆದಿತ್ಯ ಅಭಿನಯದ 'ಇಲಾಖೆ' ಚಿತ್ರದಲ್ಲಿ ಪ್ರಮುಖ ಹಾಸ್ಯ ಕಲಾವಿದರಾಗಿ ಪಾತ್ರ ನಿಭಾಯಿಸುತ್ತಿದ್ದಾರೆ. ನಟನೆ ಜೊತೆಗೆ ಸಹ ನಿರ್ಮಾಪಕರಾಗಿ ಇವರು ಹಲವು ಚಿತ್ರಗಳನ್ನೂ ನಿರ್ಮಾಣ ಮಾಡಿದ್ದಾರೆ. ಇವರ ತಂದೆ ಕೃಷ್ಣ ಸಿಂಗ್ 'ಕೀರ್ತಿ ತಂದ ಪುಟಾಣಿಗಳು' ಸಿನಿಮಾ ನಿರ್ಮಾಣ ಮಾಡಿದ್ದರು.

ವಿದ್ಯಾರ್ಜನೆಗೆ ಪ್ರೋತ್ಸಾಹ

ತಾವು ವಿದ್ಯಾಭ್ಯಾಸ ಮೊಟಕುಗೊಳಿಸಿದ್ದರೂ ತಮ್ಮದೇ ಆದ ರೀತಿಯಲ್ಲಿ ಶೈಕ್ಷಣಿಕ ಸೇವೆ ಸಲ್ಲಿಸುತ್ತಿರುವುದು ಪ್ರದೀಪ್ ಸಿಂಗ್ ಅವರ ವಿಶೇಷ. ಬೇಸಿಗೆ ರಜೆ ಬಳಿಕ ಶಾಲೆ ಪುನಾರಂಭವಾಗುವ ಸಂದರ್ಭದಲ್ಲಿ ಪ್ರತಿವರ್ಷ ನೂರಾರು ಮಕ್ಕಳಿಗೆ ಬ್ಯಾಗ್ ಜೊತೆಗೆ ಕಲಿಕಾ ಸಾಮಗ್ರಿಗಳನ್ನು ನೀಡುತ್ತಾರೆ. ಸ್ವಲ್ಪ ಪ್ರಮಾಣದ ಶಾಲಾ ಶುಲ್ಕವನ್ನೂ ಭರಿಸಲಾಗದ ಸ್ಥಿತಿಯಲ್ಲಿರುವವರನ್ನು ಗುರುತಿಸಿ, ಅಂತಹವರ ಶುಲ್ಕವನ್ನು ತಾವೇ ಭರಿಸುತ್ತಾರೆ. ಆರ್ಥಿಕ ತೊಂದರೆ ಇರುವ ಮಕ್ಕಳ ಬಗ್ಗೆ ಪರಿಚಿತರ ಮೂಲಕ ತಿಳಿದರೂ ಸಹಾಯ ಮಾಡುತ್ತಾರೆ.

ನನ್ನ ಸೋಲಿಸಲು 10 ಸಾವಿರ ಗಿಫ್ಟ್ ಕಾರ್ಡ್ ಹಂಚಲು 'ಕೈ' ಸಿದ್ಧತೆ

ಮಂಡ್ಯ ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಆರೋಪ



ಕೆ.ಆರ್.ನಗರ, ಏ.23– ಕಳೆದ ಲೋಕಸಭಾ ಚುನಾವಣೆಯಲ್ಲಿ ನನ್ನ ಪುತ್ರ ನಿಖಿಲ್‌ನನ್ನು 5 ಸಾವಿರ ರೂ. ಗಿಫ್ಟ್ ಕಾರ್ಡ್ ಹಂಚಿ ಸೋಲಿಸಿದಂತೆ ನನ್ನನ್ನು ಸೋಲಿಸಲು 10 ಸಾವಿರ ಗಿಫ್ಟ್ ಕಾರ್ಡ್ ಹಂಚಲು ಕಾಂಗ್ರೆಸ್ ಸಿದ್ಧತೆ ಮಾಡಿಕೊಂಡಿದೆ ಎಂದು ಮಂಡ್ಯ ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿ, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಗಂಭೀರ ಆರೋಪ ಮಾಡಿದರು.

ಸಾಲಿಗ್ರಾಮ ತಾಲೂಕಿನ ಹೊಸೂರು ಗ್ರಾಮದಲ್ಲಿ ರೋಡ್ ಶೋ ನಡೆಸಿ ಮತಯಾಚಿಸಿ, ನಂತರ ನಡೆದ ಸಭೆಯಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ನನ್ನನ್ನು ಸೋಲಿಸಲು ಇನ್ನಿಲ್ಲದ ಷಡ್ಯಂತರ ಮಾಡುತ್ತಿದ್ದು, ಮತದಾರರು ಆಮಿಷಗಳಿಗೆ ಬಲಿಯಾಗಬೇಡಿ ಎಂದು ತಿಳಿಸಿದರು.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ಉತ್ತಮ ಆಡಳಿತ ಕೊಟ್ಟವರು. ಅದೇ ರೀತಿ ಪ್ರಧಾನಿ ಮೋದಿ ನಾಯಕತ್ವವನ್ನು ಮೆಚ್ಚಿ ಬಿಜೆಪಿ ಜೊತೆ ಕೈ ಜೋಡಿಸಿದ್ದು ರಾಜ್ಯದ 28 ಕ್ಷೇತ್ರಗಳನ್ನು ಗೆಲ್ಲುವ ಮೂಲಕ ಮತ್ತೊಮ್ಮೆ ಮೋದಿ ಪ್ರಧಾನಿಯಾಗಲು ಅವಕಾಶ ಮಾಡಿಕೊಡಿ ಎಂದರು.

ಗ್ಯಾರಂಟಿ ಕೊಡುವ ಸಲುವಾಗಿ ರಾಜ್ಯ ಸರ್ಕಾರ ಪ್ರತಿಯೊಬ್ಬರ ಮೇಲೂ ಲಕ್ಷಾಂತರ ರೂ. ಸಾಲ ಹೇರಿ ಅಭಿವೃದ್ಧಿ ಕೆಲಸ ಮಾಡದೇ ರಾಜ್ಯವನ್ನು ದಿವಾಳಿ ಅಂಚಿಗೆ ತಂದು ನಿಲ್ಲಿಸಿದ್ದು ಇಂತಹ ಸರ್ಕಾರವನ್ನು ಕಿತ್ತೊಗೆಯಲು ತಮಗೆ ಮತ ನೀಡಿ ಎಂದು ಮನವಿ ಮಾಡಿದರು.

ಸಕ್ಕರೆ ಕಾರ್ಖಾನೆ ಮಾರಾಟಕ್ಕೆ ಹುನ್ನಾರ: ಮಾಜಿ ಸಚಿವ ಸಾ.ರಾ.ಮಹೇಶ್ ಮಾತನಾಡಿ, ಸಾಲಿಗ್ರಾಮ ತಾಲೂಕಿನ ಚುಂಚನಕಟ್ಟೆ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆ ಮಾರಾಟ ಮಾಡಲು ಕಾಂಗ್ರೆಸ್ ಹುನ್ನಾರ ನಡೆಸುತ್ತಿದೆ ಎಂದು ಆರೋಪಿಸಿದರು.

ಪ್ರಸಕ್ತ ಹಂಗಾಮಿನಲ್ಲಿ ಕಾರ್ಖಾನೆ ಕಬ್ಬು ಅರೆಯುವ ಕಾರ್ಯ ಸ್ಥಗಿತಗೊಳಿಸಿದ್ದು, ಇದರಿಂದ ರೈತರಿಗೆ ತೊಂದರೆಯಾಗಿದೆ. ಇದನ್ನು ಕೇಳುವವರು ಯಾರೂ ಇಲ್ಲದಂತಾಗಿದೆ. 15 ವರ್ಷಗಳ ಹಿಂದೆ ಸ್ಥಗಿತಗೊಂಡಿದ್ದ ಶ್ರೀರಾಮ ಸಹಕಾರ ಸಕ್ಕರೆ ಕಾರ್ಖಾನೆಯನ್ನು ಹೆಚ್.ಡಿ.ಕುಮಾರಸ್ವಾಮಿ ಮುಖ್ಯಮಂತ್ರಿಯಾಗಿದ್ದಾಗ ಪುನರಾರಂಭ ಮಾಡಲಾಗಿತ್ತು. ಆನಂತರ ಕೆಲವು ತಾಂತ್ರಿಕ ಕಾರಣಗಳಿಂದ ಅದು ಮತ್ತೆ ಕಬ್ಬು ಅರೆಯುವ ಕಾರ್ಯ ಸ್ಥಗಿತಗೊಳಿಸಿದಾಗ 2 ವರ್ಷಗಳ ಹಿಂದೆ ನಾನು ಮತ್ತೆ ಆರಂಭ ಮಾಡಿಸಿದ್ದೆ. ಆದರೆ ಈಗ ಮತ್ತೆ ಕಾರ್ಖಾನೆ ನಿಂತು ಹೋಗಿದ್ದು, ಈಗಿನವರು ಏನು ಮಾಡುತ್ತಿದ್ದಾರೆಂದು ಪ್ರಶ್ನಿಸಿದರು.

ಕುಮಾರಸ್ವಾಮಿ ಮುಖ್ಯಮಂತ್ರಿ ಆಗಿದ್ದ ವೇಳೆ ಸಾಲಮನ್ನಾ ಮಾಡಿದಲ್ಲದೆ, ಸಾರಾಯಿ, ಲಾಟರಿ ನಿಷೇಧ ಮಾಡಿದರು. ಆದರೆ ಈಗಿನ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ ಹೆಣ್ಣು ಮಗಳಿಗೆ ಕೊಡಬೇಕಾದ ಹಣ ಕೊಡದೇ ಆಕೆ ಕುಟುಂಬವನ್ನು ಕಣ್ಣೀರಿನಲ್ಲಿ ಕೈ ತೊಳೆಯುವಂತೆ ಮಾಡಿದ್ದು ಇಂತಹವರು ಗೆಲ್ಲಬೇಕಾ ಎಂದು ಪ್ರಶ್ನಿಸಿದರು.

ಛಾಪಾ ಕಾಗದ ದರ ಹೆಚ್ಚಿಸಿರುವುದಲ್ಲದೆ, ರೈತರಿಗೆ ಸಕಾಲದಲ್ಲಿ ಸಾಲ, ಹೈನುಗಾರಿಕೆ ಪ್ರೋತ್ಸಾಹಧನ ನೀಡದೇ ರೈತರನ್ನು ಶೋಷಣೆ ಮಾಡುತ್ತಿದೆ. ಜನರ ಮೇಲೆ ಸಾಲ ಹೊರೆಸಿ ಅಭಿವೃದ್ಧಿ ಕಡೆಗಣಿಸಿರುವ ರಾಜ್ಯ ಸರ್ಕಾರಕ್ಕೆ ತಕ್ಕ ಪಾಠ ಕಲಿಸಬೇಕಾದರೇ ಈ ಚುನಾವಣೆಯಲ್ಲಿ ನಮ್ಮ ನಾಯಕರಾದ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರನ್ನು ಬೆಂಬಲಿಸಿ ಎಂದು ಮನವಿ ಮಾಡಿದರು.

ಕೆ.ಆರ್.ನಗರ ಪುರಸಭೆಯ 72 ವಾಣಿಜ್ಯ ಮಳಿಗೆಗಳ ಬಾಡಿಗೆ ಮಾಲೀಕರಿಂದ 2.5 ಕೋಟಿ ಹಣವನ್ನು ಅಕ್ರಮವಾಗಿ ವಸೂಲಿ ಮಾಡಿದ್ದು, ಆ ಬಗ್ಗೆ ತನಿಖೆ ನಡೆಸಿ ತಪ್ಪು ಮಾಡಿರುವವರನ್ನು ಜೈಲಿಗೆ ಕಳಿಸಬೇಕೆಂದು ಪರೋಕ್ಷವಾಗಿ ಶಾಸಕ ಡಿ.ರವಿಶಂಕರ್ ಅವರನ್ನು ಆಗ್ರಹಿಸಿದರು.

ಇದಕ್ಕೂ ಮೊದಲು ಹೊಸೂರಿಗೆ ಆಗಮಿಸಿದ ಕುಮಾರಸ್ವಾಮಿ ಅವರನ್ನು ನೂರಾರು ಮಹಿಳೆಯರು ಕಳಸ ಹೊತ್ತು ಮೆರವಣಿಗೆ ನಡೆಸಿ ಸ್ವಾಗತಿಸಿದಲ್ಲದೇ ಜೆಡಿಎಸ್ ಕಾರ್ಯಕರ್ತರು ಪಟಾಕಿ ಸಿಡಿಸಿ, ಕ್ರೇನ್ ಮೂಲಕ ಕಿತ್ತಳೆ, ಮೊಸಂಬಿ ಹಾರ ಹಾಕಿ ಅಭಿನಂದಿಸಿದರು.

ಕಾರ್ಯಕ್ರಮದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಜೆಡಿಎಸ್ ಮುಖಂಡ ಮಧುಚಂದ್ರ, ಜಿಪಂ ಮಾಜಿ ಅಧ್ಯಕ್ಷ ಸಿ.ಜೆ.ದ್ವಾರಕೀಶ್, ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ಹುಣಸೂರು ತಾಲೂಕು ಜೆಡಿಎಸ್ ಅಧ್ಯಕ್ಷ ದೇವರಾಜ ಒಡೆಯರ್, ಎಂಡಿಸಿಸಿ ಬ್ಯಾಂಕ್ ನಿರ್ದೇಶಕ ಅಮಿತ್ ದೇವರಹಟ್ಟಿ, ವಸ್ತು ಪ್ರಾಧಿಕಾರದ ಮಾಜಿ ಅಧ್ಯಕ್ಷ ಮಿರ್ಲೆ ಶ್ರೀನಿವಾಸ್‌ಗೌಡ, ಬಿಜೆಪಿ ಮುಖಂಡ ಹೊಸಳ್ಳಿ ವೆಂಕಟೇಶ್, ಹೊಸೂರು ಸಹಕಾರ ಸಂಘದ ಮಾಜಿ ಅಧ್ಯಕ್ಷರಾದ ಎಸ್.ಟಿ.ಕೀರ್ತಿ, ಮಹೇಶ್, ಎಚ್.ಆರ್.ಮಧುಚಂದ್ರ, ಎಚ್.ಆರ್.ದಿನೇಶ್ ಜೆಡಿಎಸ್ ಮುಖಂಡರಾದ ಸಿ.ಬಿ.ಲೋಕೇಶ್, ಕುಚೇಲ್, ಹನಸೋಗೆ ರಾಜೇಶ್, ಬಿ.ರಮೇಶ್, ಎಚ್.ಕೆ.ಕೀರ್ತಿ, ಹೆಚ್.ಆರ್.ರಾಘವೇಂದ್ರ, ಎಚ್.ಡಿ.ಕೆ.ಭಾಸ್ಕರ್, ಕೋಳಿಕಟ್ಟಿ, ಹಳಿಯೂರು ಜಗದೀಶ್, ವಿಕ್ರಮ್ ಗೌಡ, ಅವಿ ರಾಜಣ್ಣ, ಎಚ್.ಟಿ.ಪ್ರಮೋದ್, ಹಳಿಯೂರು ಶ್ರೀಧರ್, ಶ್ರೀರಾಮಪುರ ಪ್ರಶನ್ನ, ದೊಡ್ಡಕೊಪ್ಪಲು ನವೀನ, ಪ್ರವೀಣ, ಕಾಂತ, ಬೆಣಗನಹಳ್ಳಿ ಪ್ರಶನ್ನ, ನಾಡಪ್ಪನಹಳ್ಳಿ ಮಹದೇವ, ಮಟನ್ ಜಮೀಲ್, ಹನಸೋಗೆ ನಾಗರಾಜು, ಬಿಜೆಪಿ ಅಧ್ಯಕ್ಷ ಧರ್ಮ, ಮುಖಂಡ ಹೆಚ್.ವಿ.ಅನಿಲ್ ಕುಮಾರ್ ಸೇರಿದಂತೆ ಮತ್ತಿತರರಿದ್ದರು.

ಸುಳ್ಳು ಭರವಸೆಗಳಿಗೆ ಮರುಳಾಗದೇ ಬಾಲರಾಜ್‌ಗೆ ಮತ ನೀಡಿ

ಜಂಗಲ್ ರೆಸಾರ್ಟ್ ಮಂಡಳಿ ಮಾಜಿ ಅಧ್ಯಕ್ಷ ಅಪ್ಪಣ್ಣ ಮನವಿ



ನಂಜನಗೂಡು, ಏ.23– ನಾಯಕ ಸಮುದಾಯಕ್ಕೆ ಬಿಜೆಪಿ ಪಕ್ಷ ವಾಲ್ಮೀಕಿ ಜಯಂತಿ ಜಾರಿಗೊಳಿಸಿದ್ದಲ್ಲದೆ ಜಿಪಂ, ತಾಪಂ ಮೀಸಲಾತಿ ಹೆಚ್ಚಿಸಿ ಸಮುದಾಯಕ್ಕೆ ಹೆಚ್ಚಿನ ರಾಜಕೀಯ ಶಕ್ತಿ ನೀಡುವ ಮೂಲಕ ಸಮುದಾಯದ ಅಭಿವೃದ್ಧಿಗೆ ಶ್ರಮಿಸಿದೆ. ಹೀಗಾಗಿ ಸಮುದಾಯದವರು ಬಿಜೆಪಿ ಅಭ್ಯರ್ಥಿ ಬಾಲರಾಜು ಅವರನ್ನು ಗೆಲ್ಲಿಸಿ ಎಂದು ಜಂಗಲ್ ರೆಸಾರ್ಟ್ ಮಂಡಳಿ ಮಾಜಿ ಅಧ್ಯಕ್ಷ ಅಪ್ಪಣ್ಣ ಮನವಿ ಮಾಡಿದರು.

ತಾಲೂಕಿನ ಸಿಂಧುವಳ್ಳಿ ಗ್ರಾಮದ ಸಂತಾನ ಗಣಪತಿ ಕಲ್ಯಾಣ ಮಂಟಪದಲ್ಲಿ ಆಯೋಜಿಸಿದ್ದ ಎಸ್ಟಿ ಸಮಾವೇಶದಲ್ಲಿ ಮಾತನಾಡಿದ ಅವರು, ಪ್ರಧಾನಿ ಮೋದಿ ಸಣ್ಣ ಭ್ರಷ್ಟಾಚಾರದ ಆರೋಪಗಳಿಲ್ಲದೆ ದೇಶವನ್ನು ಅಭಿವೃದ್ಧಿ ಪಥದತ್ತ ಕೊಂಡೊಯ್ದಿದ್ದಾರೆ. ಕಾಂಗ್ರೆಸ್ ಸುಳ್ಳು ಭರವಸೆಗಳಿಗೆ ಮರುಳಾಗಬೇಡಿ. ಬಾಲರಾಜು ಸರಳ ಸಜ್ಜನ ವ್ಯಕ್ತಿ ಅವರಿಗೆ ಒಂದು ಅವಕಾಶ ಕಲ್ಪಿಸಬೇಕು ಎಂದರು.

ತಾಲೂಕು ನಾಯಕರ ಸಂಘದ ಗೌರವಾಧ್ಯಕ್ಷ ಸಿ.ಚಿಕ್ಕರಂಗನಾಯಕ ಮಾತನಾಡಿ, ಪ್ರಧಾನಿ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಈ ಭಾಗದ ತಳವಾರ, ಪರಿವಾರ ಸಮಸ್ಯೆಯನ್ನು ಬಗೆಹರಿಸಿದೆ. ಅಲ್ಲದೆ ಶೇ.3ರಷ್ಟಿದ್ದ ಮೀಸಲಾತಿಯನ್ನು ಶೇ.7ಕ್ಕೆ ಹೆಚ್ಚಳ ಮಾಡಿ ನಾಯಕ ಸಮುದಾಯಕ್ಕೆ ನೆರವು ನೀಡಿದೆ. ಅಲ್ಲದೇ ಬಿಜೆಪಿ ಸರ್ಕಾರದಲ್ಲಿ ಎಸ್ಸಿ, ಎಸ್ಟಿ ಸಮುದಾಯಕ್ಕೆ 28375 ಸಾವಿರ ಕೋಟಿಗಳನ್ನು ಅನುದಾನ ನೀಡಿತ್ತು. ಕಾಂಗ್ರೆಸ್ ಸರ್ಕಾರ ಗ್ಯಾರಂಟಿ ಯೋಜನೆಗಳಿಗೆ ಅನುದಾನ ಬಳಸಿಕೊಳ್ಳುವ ಮೂಲಕ ದ್ರೋಹ ಬಗೆದಿದೆ. ಆದ್ದರಿಂದ ಎಸ್ಟಿ ಸಮುದಾಯದ ಏಳಿಗೆ ಬಿಜೆಪಿ ಸರ್ಕಾರದಿಂದ ಮಾತ್ರ ಸಾಧ್ಯ. ಕಾಂಗ್ರೆಸ್‌ನವರು ಬಿಜೆಪಿ ಅಧಿಕಾರಕ್ಕೆ ಬಂದಲ್ಲಿ ಸಂವಿಧಾನ ಬದಲಾವಣೆ ಮಾಡುತ್ತದೆ ಎಂದು ಸುಳ್ಳು ವದಂತಿ ಹಬ್ಬಿಸುತ್ತಿದ್ದಾರೆ. ಆದ್ದರಿಂದ ಸಮುದಾಯದವರು ಹೆಚ್ಚಿನ ಸಂಖ್ಯೆಯಲ್ಲಿ ಬಿಜೆಪಿ ಬೆಂಬಲಿಸಿ ಬಾಲರಾಜು ಅವರನ್ನು ಗೆಲ್ಲಿಸಬೇಕು ಎಂದರು.

ಚಾಮರಾಜನಗರ–ಮೈಸೂರು ಜಿಲ್ಲಾ ನಾಯಕ ಸಂಘದ ಉಪಾಧ್ಯಕ್ಷ ಕುಂಬ್ರಳ್ಳಿ ಸುಬ್ಬಣ್ಣ ಮಾತನಾಡಿದರು. ವಿಧಾನಪರಿಷತ್ ಸದಸ್ಯ ಸಿದ್ದರಾಜು, ಜಿಲ್ಲಾ ಎಸ್ಟಿ ಮೋರ್ಚಾ ಅಧ್ಯಕ್ಷ ಮುದ್ದುಕೃಷ್ಣ, ಕಾರ್ಯದರ್ಶಿ ಸಿದ್ದರಾಜು, ಮಾಜಿ ಮೇಯರ್ ಶಿವಕುಮಾರ್, ಮಾಜಿ ಜಿಪಂ ಅಧ್ಯಕ್ಷ ರಾಮಚಂದ್ರ, ನಾಗೇಂದ್ರ, ತಾಪಂ ಮಾಜಿ ಸದಸ್ಯರಾದ ಮಹದೇವನಾಯಕ, ಶಿವಣ್ಣ ರವೀಂದ್ರ ಪ್ರಶಾಂತ್, ಸೋಮೇಶ್, ಚಂದ್ರು ಸೇರಿದಂತೆ ಇತರರಿದ್ದರು.

ಸುನೀಲ್ ಬೋಸ್, ಲಕ್ಷ್ಮಣಗೆ ಕುರುಬ ಸಮುದಾಯ ಬೆಂಬಲ

ಮೈಸೂರು ಜಿಲ್ಲಾ ಕುರುಬ ಸಮಾಜದ ಅಧ್ಯಕ್ಷ ಶಿವಪ್ಪ ಕೋಟೆ ಮಾಹಿತಿ



ಸುದ್ದಿಗೋಷ್ಠಿಯಲ್ಲಿ ಮೈಸೂರು ಜಿಲ್ಲಾ ಕುರುಬ ಸಮಾಜದ ಅಧ್ಯಕ್ಷ ಶಿವಪ್ಪ ಕೋಟೆ ಮಾತನಾಡಿದರು.

ಹೆಚ್.ಡಿ.ಕೋಟೆ, ಏ.23– ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕೈ ಬಲಪಡಿಸಲು ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಹಾಗೂ ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರಿಗೆ ಕುರುಬ ಸಮಾಜ ಸಂಪೂರ್ಣ ಬೆಂಬಲ ನೀಡಲಿದೆ ಎಂದು ಮೈಸೂರು ಜಿಲ್ಲಾ ಕುರುಬ ಸಮಾಜದ ಅಧ್ಯಕ್ಷ ಶಿವಪ್ಪ ಕೋಟೆ ತಿಳಿಸಿದರು.

ಪಟ್ಟಣದಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಹಿಂದುಳಿದ ವರ್ಗದ 108 ಜಾತಿಗಳ ಬೆಂಬಲವಿದೆ. ಏಕೆಂದರೆ ಕಾಂಗ್ರೆಸ್ ಸರ್ಕಾರ ರಾಜ್ಯದಲ್ಲಿ ಅಧಿಕಾರಕ್ಕೆ ಬಂದ ಬಳಿಕ ಚುನಾವಣೆ ಪೂರ್ವ ತಿಳಿಸಿದ್ದಂತೆ 5 ಗ್ಯಾರಂಟಿಗಳನ್ನು ಜಾರಿಗೊಳಿಸಿ ನುಡಿದಂತೆ ನಡೆದಿದೆ. ಹೀಗಾಗಿ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸುವುದಾಗಿ ತಿಳಿಸಿದರು.

ಜಾತ್ಯತೀತತೆ ಮತ್ತು ಕೋಮುವಾದದ ನಡುವೆ ನಡೆಯುತ್ತಿರುವ ಚುನಾವಣೆ ಇದಾಗಿದೆ ಮೋದಿ ಪ್ರತಿಯೊಬ್ಬರ ಖಾತೆಗೂ 15 ಲಕ್ಷ ಹಣ, ವರ್ಷಕ್ಕೆ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ನೀಡಿದ್ದ ಭರವಸೆಗಳು ಭರವಸೆಗಳಾಗಿಯೇ ಉಳಿದಿದ್ದು, ಮೋದಿ ಕೇವಲ ಭಾಷಣಗಳಿಗಾಗಿಯೇ ಸೀಮಿತಗೊಂಡಿದ್ದಾರೆ ಎಂದು ಆರೋಪಿಸಿದರು.

ಸಿದ್ದರಾಮಯ್ಯ ಈ ಹಿಂದೆ ಮುಖ್ಯಮಂತ್ರಿಯಾಗಿದ್ದ ವೇಳೆ 158 ಭರವಸೆಗಳನ್ನು ಈಡೇರಿಸಿದ್ದು, ಇದೀಗ ಐದು ಗ್ಯಾರಂಟಿಗಳನ್ನು ಜಾರಿಗೊಳಿಸಿದ್ದಾರೆ. ಆದ್ದರಿಂದ ನಮ್ಮ ಸಮಾಜ ಕಾಂಗ್ರೆಸ್ ಬೆಂಬಲಿಸಿದೆ. ರಾಜ್ಯದ ಮಹಿಳೆಯರು ಕಾಂಗ್ರೆಸ್‌ನತ್ತ ಒಲವು ತೋರಿದ್ದು, ಪಕ್ಷದ ಹೆಚ್ಚಿನ ಅಭ್ಯರ್ಥಿಗಳು ಜಯ ಗಳಿಸಲಿದ್ದಾರೆ ಎಂದರು.

ಈ ವೇಳೆ ರಾಜ್ಯ ಕಾಂಗ್ರೆಸ್ ಹಿಂದುಳಿದ ವರ್ಗಗಳ ಉಪಾಧ್ಯಕ್ಷ ಕೆ.ಎಸ್. ಮಾದೇಗೌಡ, ತಾಲೂಕು ಅಧ್ಯಕ್ಷ ಚಿಕ್ಕಣ್ಣ, ಮುಖಂಡರಾದ ಚಿಕ್ಕಣ್ಣ, ಭೈರೇಗೌಡ, ಆರ್.ಎಂ. ವೀರೇಗೌಡ, ಪುಟ್ಟೇಗೌಡ, ಮುದ್ದರಾಮೇ ಗೌಡ, ತಮ್ಮಣ್ಣ, ಮುದ್ದೇಗೌಡ, ಎಂ.ರವಿ, ಹೆಚ್.ಎಸ್.ಬೈತೇಗೌಡ, ಆರ್.ಸಿ. ಸುರೇಶ್, ಬಸವೇಗೌಡ, ಎಂ.ಸಿ.ಬೀರೇಗೌಡ, ರಾಜಪ್ಪ, ಕುಮಾರ, ಗಣೇಶ್, ಮಂಜು, ರಮೇಶ ಇದ್ದರು.

ಕಾಡಂಚಿನ ಗ್ರಾಮಗಳ ಸಮಸ್ಯೆಗೆ ಶೀಘ್ರ ಪರಿಹಾರ




ಮಲ್ಕುಂಡಿ, ಏ.23– ಕಾಡಂಚಿನ ಗ್ರಾಮಗಳ ಸಮಸ್ಯೆಯನ್ನು ಶೀಘ್ರ ಪರಿಹರಿಸಲಾಗುವುದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ಇಲ್ಲಿಗೆ ಸಮೀಪದ ಹುರ, ಹೆಡಿಯಾಲದಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ಮತಯಾಚಿಸಿ ಮಾತನಾಡಿದ ಅವರು, ಹೆಡಿಯಾಲ ಭಾಗದ ಕಾಡಂಚಿನ ಗ್ರಾಮಗಳ ಸಮಸ್ಯೆಯನ್ನು ಬಗೆಹರಿಸಲು ಮುಂದಿನ ದಿನಗಳಲ್ಲಿ ಅರಣ್ಯ ಸಚಿವರ ಜೊತೆ ಚರ್ಚಿಸಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು. ನನಗೆ ಚುನಾವಣೆಯಲ್ಲಿ ಮತ ಮುಖ್ಯವಲ್ಲ. ನನಗೆ ಜನರ ಬದುಕು ಮುಖ್ಯ. ಮೋದಿಯವರು ಸುಳ್ಳು ಭರವಸೆ ನೀಡಿ ಅಧಿಕಾರಕ್ಕೆ ಬಂದು ಯಾವುದೇ ಭರವಸೆ ಈಡೇರಿಸಿಲ್ಲ. ಬಿಜೆಪಿ ಶ್ರೀಮಂತರ ಪಕ್ಷವಾಗಿದ್ದು, ಕಾಂಗ್ರೆಸ್ ಬಡವರ, ದಲಿತರ ಹಾಗೂ ರೈತರ ಪಕ್ಷವಾಗಿದೆ ಎಂದರು.

ಈ ವೇಳೆ ಮಾಜಿ ಶಾಸಕ ಕೇಶವಮೂರ್ತಿ, ಮಾಜಿ ಸಂಸದ ಎಂ.ಶಿವಣ್ಣ, ತಾಪಂ ಮಾಜಿ ಅಧ್ಯಕ್ಷ ನಾಗೇಶ್‌ರಾಜ್, ಹಿಂದುಳಿದ ವರ್ಗದ ಜಿಲ್ಲಾಧ್ಯಕ್ಷ ಕೆ.ಮಾರುತಿ, ತಾಪಂ ಮಾಜಿ ಸದಸ್ಯ ಮೂಗಶೆಟ್ಟಿ, ಜಿಪಂ ಮಾಜಿ ಅಧ್ಯಕ್ಷೆ ಲತಾ ಸಿದ್ದಶೆಟ್ಟಿ, ಗ್ರಾಪಂ ಅಧ್ಯಕ್ಷೆ ತಾಯಮ್ಮ, ಸದಸ್ಯ ಗೋವಿಂದರಾಜು, ಪಟೇಲ್ ಮಹದೇವಪ್ಪ, ನಾಗರಾಜೇಗೌಡ, ಸುಬ್ರಹ್ಮಣ್ಯ, ಸೇರಿದಂತೆ ಇತರರಿದ್ದರು.

ಸುನೀಲ್ ಬೋಸ್‌ಗೆ ಲಕ್ಷಕ್ಕೂ ಹೆಚ್ಚು ಮತ ಅಂತರದ ಗೆಲುವು

ಒಕ್ಕಲಿಗ ಸಮಾಜದ ಹಿರಿಯ ಮುಖಂಡ ಕೆ.ವಜ್ರೇಗೌಡ ವಿಶ್ವಾಸ



ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ಕೆ.ವಜ್ರೇಗೌಡ ಮತಯಾಚಿಸಿದರು.

ತಿ.ನರಸೀಪುರ, ಏ.23– ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದ ಸರ್ಕಾರದ ಗ್ಯಾರಂಟಿ ಯೋಜನೆಗಳು ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಗಳ ಗೆಲುವಿಗೆ ಸಹಕಾರಿಯಾಗಲಿದ್ದು, ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಲಕ್ಷಕ್ಕೂ ಹೆಚ್ಚಿನ ಮತಗಳ ಅಂತರದಲ್ಲಿ ಗೆಲುವು ಸಾಧಿಸಲಿದ್ದಾರೆ ಎಂದು ಪಿಕಾರ್ಡ್ ಬ್ಯಾಂಕ್ ಅಧ್ಯಕ್ಷ, ಒಕ್ಕಲಿಗ ಸಮಾಜದ ಹಿರಿಯ ಮುಖಂಡ ಕೆ.ವಜ್ರೇಗೌಡ ವಿಶ್ವಾಸ ವ್ಯಕ್ತಪಡಿಸಿದರು.

ಚಾಮರಾಜನಗರ ಮೀಸಲು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ಕಗ್ಗಲೀಪುರ ಗ್ರಾಮದ ಮನೆ ಮನೆಗೆ ತೆರಳಿ ಕೇಂದ್ರದ ಗ್ಯಾರಂಟಿ ಕಾರ್ಡ್ ವಿತರಿಸಿ, ಮತ ಯಾಚಿಸಿ ಅವರು ಮಾತನಾಡಿದರು.

ರಾಜ್ಯ ಕಾಂಗ್ರೆಸ್ ಸರ್ಕಾರ ಕಳೆದ ವಿಧಾನಸಭೆ ಚುನಾವಣೆ ವೇಳೆ ನೀಡಿದ್ದ ಭರವಸೆಗಳನ್ನು ಈಡೇರಿಸುವ ಮೂಲಕ ನುಡಿದಂತೆ ನಡೆದುಕೊಂಡಿದೆ. ಗ್ಯಾರಂಟಿ ಯೋಜನೆಗಳಿಂದ ರಾಜ್ಯದ ಕೋಟ್ಯಾಂತರ ಮಹಿಳೆಯರ ಬದುಕು ಹಸನುಗೊಂಡಿದೆ. ಗ್ಯಾರಂಟಿಯಿಂದ ಎಷ್ಟೋ ಬಡ ಕುಟುಂಬಗಳು ಸ್ವಾವಲಂಬಿ ಜೀವನ ನಡೆಸುತ್ತಿದ್ದರೆ, ಅದೆಷ್ಟೋ ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಯೋಜನೆ ಹಣ ಸಹಕಾರಿಯಾಗಿದೆ. ಹಾಗಾಗಿ ಗ್ಯಾರಂಟಿ ಯೋಜನೆಗಳಿಂದ ಸಂತುಷ್ಟರಾಗಿರುವ ಕ್ಷೇತ್ರದ ಜನತೆ ಈ ಬಾರಿ ಕಾಂಗ್ರೆಸ್ ಅಭ್ಯರ್ಥಿಗೆ ಮತ ನೀಡಲು ನಿರ್ಧರಿಸಿದ್ದಾರೆ ಎಂದರು.

ಕೇಂದ್ರದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿದ್ದಂತೆ ಯುವ ನ್ಯಾಯ ಯೋಜನೆಯಡಿ ಪ್ರತಿಯೊಬ್ಬ ವಿದ್ಯಾವಂತ ಯುವಕನಿಗೆ ಮೊದಲ ಉದ್ಯೋಗದ ಗ್ಯಾರಂಟಿ 1 ಲಕ್ಷ ರೂ. ನೀಡುವುದು, ಪ್ರತಿ ಕುಟುಂಬದ ಮಹಿಳೆಗೆ ಪ್ರತಿ ವರ್ಷ 1 ಲಕ್ಷ ನೀಡುವ ಮಹಿಳಾ ನ್ಯಾಯ, ರೈತ ನ್ಯಾಯ, ಶ್ರಮಿಕ ನ್ಯಾಯ ಹಾಗೂ ಪಾಲುದಾರಿಕೆ ನ್ಯಾಯವನ್ನು ಜಾರಿಗೆ ತರಲಿದೆ ಎಂದರು.

ಬಿಜೆಪಿ ಗೆದ್ದರೆ ಗ್ಯಾರಂಟಿ ಯೋಜನೆ ಸ್ಥಗಿತ: ಸಿದ್ದರಾಮಯ್ಯರ ಗ್ಯಾರಂಟಿ ಯೋಜನೆ ರಾಜ್ಯದ ಬಡ ಜನತೆಗೆ ಸಹಕಾರಿಯಾಗಿದ್ದು, ಒಂದು ವೇಳೆ ಬಿಜೆಪಿ ಅಧಿಕಾರಕ್ಕೆ ಬಂದರೆ ಉಚಿತ ಯೋಜನೆಗಳನ್ನು ಸ್ಥಗಿತಗೊಳಿಸಲಿದ್ದಾರೆ. ಬಿಜೆಪಿಯವರಿಗೆ ಜನತೆಯ ಆರ್ಥಿಕ ಪರಿಸ್ಥಿತಿ ಉತ್ತಮವಾಗುವುದು ಬೇಕಿಲ್ಲ. ಹಾಗಾಗಿ ಜನಪ್ರಿಯ ಉಚಿತ ಯೋಜನೆಗಳು ಮುಂದುವರೆಯಬೇಕಾದರೆ ಸಿದ್ದರಾಮಯ್ಯ ಕೈ ಬಲಪಡಿಸಲು ಕ್ಷೇತ್ರದಲ್ಲಿ ಸುನೀಲ್ ಬೋಸ್ ಅವರನ್ನು ಹೆಚ್ಚಿನ ಮತಗಳಿಂದ ಗೆಲ್ಲಿಸುವಂತೆ ಮನವಿ ಮಾಡಿದರು.

ಗ್ರಾಪಂ ಸದಸ್ಯ ರಾಜಣ್ಣ ಮಾತನಾಡಿದರು. ನ್ಯಾಯಬೆಲೆ ಅಂಗಡಿ ನಾಗೇಂದ್ರ, ಗುತ್ತಿಗೆದಾರ ಕೆ.ಎಂ. ಮಧುಕುಮಾರ್, ಬಾಲರಾಜು, ನಾಗಣ್ಣ, ರಂಗಸ್ವಾಮಿ, ನಾಗೇಂದ್ರ, ಮಹದೇವಸ್ವಾಮಿ, ಸಂದೀಪ್, ವೆಂಕಟೇಶ್, ದಿನೇಶ್, ಡೈರಿ ಅಧ್ಯಕ್ಷ ರಾಜೇಶ್, ಕಪಾಲಿ ಮಂಜು, ರಮೇಶ್, ವೆಂಕಟೇಶ್, ವರದರಾಜು, ಬೋರೇಗೌಡ, ಮಂಜುನಾಥ್, ಚಿಕ್ಕಸ್ವಾಮಿ, ಮರಿಗೌಡ, ದ್ವಾರಕೀಶ್, ಶ್ರೀನಿವಾಸ್ ಮತ್ತಿತರರಿದ್ದರು.

ನಿಧನ

ಡಾ. ವಿ.ಲಕ್ಷ್ಮೀನಾರಾಯಣ



ಮೈಸೂರು, ಏ. 23–ಕಳೆದ ಐದು ದಶಕಗಳಿಂದ ಕರ್ನಾಟಕದ ಎಡಪಂಥೀಯ, ಮಾನವ ಹಕ್ಕುಗಳು, ದಲಿತ ಚಳುವಳಿ, ಮಹಿಳಾ ಚಳುವಳಿ ಹಾಗೂ ಇತರ ಸಾಮಾಜಿಕ ಚಳುವಳಿಗಳ ಸಕ್ರಿಯ ಕಾರ್ಯಕರ್ತರಾಗಿದ್ದ, ಸಿಪಿಐ (ಎಂಎಲ್) ಲಿಬರೇಷನ್ ಪಕ್ಷದ ರಾಜ್ಯ ಸಮಿತಿ ಸದಸ್ಯ, ಮಾರ್ಕ್ಸ್‌ವಾದಿ ಚಿಂತಕ, ಪಿಯುಸಿಎಲ್‌ನ ಸಕ್ರಿಯ ಸದಸ್ಯ ಹಾಗೂ ಜನಪರ ಹೋರಾಟಗಾರ ಕಾಮ್ರೇಡ್. ಡಾ.ವಿ.ಲಕ್ಷ್ಮೀನಾರಾಯಣ್ ನಿನ್ನೆ (ಏ.22) ರಾತ್ರಿ ನಿಧನರಾದರು. ಮೃತರು ಪತ್ನಿ ಸಮತಾ ವೇದಿಕೆಯ ಇ.ರತಿರಾವ್, ಪುತ್ರ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಕಾಮ್ರೇಡ್ ವಿ.ಲಕ್ಷ್ಮೀನಾರಾಯಣ್ ಅವರ ಪಾರ್ಥಿವ ಶರೀರವನ್ನು ವಿಜಯನಗರ 2ನೇ ಹಂತದಲ್ಲಿರುವ ಅವರ ಸ್ವಗೃಹದಲ್ಲಿ ನಾಳೆ (ಏ.24) ಬೆಳಗ್ಗೆ 8ರಿಂದ ಸಾರ್ವಜನಿಕ ದರ್ಶನಕ್ಕಾಗಿರಿಸಲಾಗುವುದು. ನಂತರ ಪಾರ್ಥಿವ ಶರೀರವನ್ನು ಚಾಮರಾಜನಗರ ಜಿಲ್ಲಾಸ್ಪತ್ರೆಗೆ ದಾನ ಮಾಡಲಾಗುವುದು ಎಂದು ಅವರ ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಪ್ರಭುಸ್ವಾಮಿ



ಮೈಸೂರಿನ ಕ್ಯಾತಮಾರನಹಳ್ಳಿ ನಿವಾಸಿ ದಿವಂಗತ ಸಂಗಪ್ಪ ಅವರ ಪುತ್ರ ಪ್ರಭುಸ್ವಾಮಿ (ಕುಂತೂರು) ಮಂಗಳವಾರ ನಿಧನರಾದರು. ಅವರಿಗೆ 65 ವರ್ಷ ವಯಸ್ಸಾಗಿತ್ತು. ಮೃತರು ಪತ್ನಿ, ಮೂವರು ಪುತ್ರಿಯರು, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕ್ಯಾತಮಾರನಹಳ್ಳಿ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಕೌಶಲ್ಯಾದೇವಿ



ಮೈಸೂರಿನ ಸರಸ್ವತಿಪುರಂ (ಕಾಮಾಕ್ಷಿ ಆಸ್ಪತ್ರೆ ಸಮೀಪ) ನಿವಾಸಿ ದಿವಂಗತ ಸಿ.ಕೃಷ್ಣಮೂರ್ತಿ ಅವರ ಪತ್ನಿ ಕೌಶಲ್ಯಾದೇವಿ (83) ಏ.21ರಂದು ನಿಧನರಾದರು. ಮೃತರು ಪುತ್ರರಾದ ಸಿ ಮೈಸೂರು ಚಾನೆಲ್ ಮತ್ತು ಎಸ್‌ಕೆಪಿಸಿ ಬ್ಯಾಂಕ್ ಮಾಜಿ ಅಧ್ಯಕ್ಷ ಜನಾರ್ಧನ ಶೆಟ್ಟಿ, ಕೆ.ನರೇಂದ್ರ, ಪುತ್ರಿಯರಾದ ಉಷಾ ವಿ.ಮೋಹನ್ ಸೇರಿದಂತೆ ಅಪಾರ ಬಂಧು ವರ್ಗ ಅಗಲಿದ್ದಾರೆ. ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ಮಂಗಳವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಲ್ಲಿಕಾ ಜಾಹನ್




ಮೈಸೂರಿನ ಎನ್.ಆರ್.ಮೊಹಲ್ಲಾ ನಿವಾಸಿ ದಿವಂಗತ ಸತ್ತಾರ್ ಬೇಗ್ ಅವರ ಪತ್ನಿ ಮಲ್ಲಿಕಾ ಜಾಹನ್ (81) ಏ.21ರಂದು ನಿಧನರಾದರು. ಮೃತರು ಇಬ್ಬರು ಪುತ್ರರು, ಇಬ್ಬರು ಪುತ್ರಿಯರು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಟಿಪ್ಪು ಸರ್ಕಲ್‌ನಲ್ಲಿರುವ ಮುಸ್ಲಿಂ ರುದ್ರಭೂಮಿಯಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಶಶಿಕುಮಾರ್



ಹುಣಸೂರು, ಏ.23– ನಗರದ ಕಲ್ಕುಣಿಕೆ ನಿವಾಸಿ, ಜೆಡಿಎಸ್ ಮುಖಂಡ ಶಶಿಕುಮಾರ್(ಶಶಿ 37) ಸೋಮವಾರ ನಿಧನರಾದರು. ಮೃತರು ತಾಯಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಕೆ.ಆರ್.ನಗರ ಬೈಪಾಸ್ ರಸ್ತೆಯ ಮೃತರ ಜಮಿನಿನಲ್ಲಿ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

24.04.2024 ಬುಧವಾರ, ಮಳೆ ನಕ್ಷತ್ರ: ಅಶ್ವಿನಿ 13.04.2024 ರಿಂದ 26.04.2024
ಕ್ರೋಧಿ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ಚೈತ್ರ ಮಾಸ, ಕೃಷ್ಣ ಪಕ್ಷ,
ತಿಥಿ: ಪಾಡ್ಯ, ನಕ್ಷತ್ರ: ಸ್ವಾತಿ, ರಾಹುಕಾಲ: ಮಧ್ಯಾಹ್ನ 12 ರಿಂದ 1.30ರವರೆಗೆ

■ **ರಾಮ್‌ಸನ್ಸ್ ಬೊಂಬೆ ಮನೆ:** ದಸರೆ ಬೊಂಬೆ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ ಸಂಜೆ 7ರವರೆಗೆ

■ **ಕನ್ನಡ ಸಾಹಿತ್ಯ ಕಲಾಕೂಟ, ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ತು :** ವಿಶ್ವ ಪುಸ್ತಕ ದಿನಾಚರಣೆ ಅಂಗವಾಗಿ ವಿವಿಧ ಶಾಲೆಗಳಿಗೆ ಪುಸ್ತಕಗಳ ವಿತರಣೆ ಹಾಗೂ ಅಭಿನಂದನಾ ಸಮಾರಂಭ, ಉದ್ಘಾಟನೆ : ವಿಧಾನ ಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಅಭಿನಂದಿತರು: ಕನ್ನಡ ಪುಸ್ತಕ ಪ್ರಾಧಿಕಾರ ಅಧ್ಯಕ್ಷ ಮಾನಸ, ಅಭಿನಂದಿಸುವವರು: ಪ್ರಮತಿ ಶಿಕ್ಷಣ ಸಂಸ್ಥೆ ಅಧ್ಯಕ್ಷ ಹೆಚ್.ವಿ.ರಾಜೀವ್, ಪುಸ್ತಕ ದಿನಾಚರಣೆ ಕುರಿತು: ಕುವೆಂಪು ಭಾಷಾ ಭಾರತಿ ಮಾಜಿ ಅಧ್ಯಕ್ಷ ಡಾ.ಪ್ರಧಾನ್ ಗುರುದತ್, ಪುಸ್ತಕಗಳ ವಿತರಣೆ: ಡಾ. ಎಂ.ಜಿ.ಆರ್. ಅರಸ್, ಅಧ್ಯಕ್ಷತೆ : ಜಿಲ್ಲಾ ಪತ್ರಕರ್ತರ ಸಂಘದ ಮಾಜಿ ಅಧ್ಯಕ್ಷ ಎಸ್.ಟಿ.ರವಿಕುಮಾರ್, ಆಶಯ ನುಡಿ: ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ.ಚಂದ್ರಶೇಖರ್, ಉಪಸ್ಥಿತರು: ಜಿಲ್ಲಾ ಚುಟುಕು ಸಾಹಿತ್ಯ ಪರಿಷತ್ ಅಧ್ಯಕ್ಷೆ ಚುಟುಕು ಸಿರಿ ಡಾ.ರತ್ನ ಹಾಲಪ್ಪಗೌಡ, ಸ್ಥಳ: ಜಿಲ್ಲಾ ಪತ್ರಕರ್ತರ ಭವನ, ಮಧ್ಯಾಹ್ನ 12ಕ್ಕೆ

■ **ಕಾದಂಬರಿ ಏಜೆನ್ಸೀಸ್ ಮತ್ತು ವಿಕಲ ವಿಕಾಸ ಟ್ರಸ್ಟ್ :** ಮಕ್ಕಳ ಪುಸ್ತಕಗಳ ಪ್ರದರ್ಶನ ಮತ್ತು ಮಾರಾಟ, ಸ್ಥಳ: ನಂ.45, ಕೆ.ಆರ್. ಸರ್ಕಲ್, ದೇವರಾಜ ಅರಸು ರಸ್ತೆ, ಸಂಜೆ 5.30ಕ್ಕೆ

■ **ಶ್ರೀ ರಾಮಸೇವಾ ಮಂಡಲಿ :** 71ನೇ ವರ್ಷದ ಶ್ರೀ ರಾಮೋತ್ಸವ, ವಿದುಷಿ ಕು. ದಿವ್ಯಶ್ರೀ ರಂಗನಾಥ್ ಅವರಿಂದ ಸ್ಯಾಕ್ಸೋಫೋನ್ ವಾದನ, ವಿದ್ವಾನ್ ರೂಪನಗುಡಿ ರತ್ನತೇಜ್–ಪಿಟೀಲು, ವಿದ್ವಾನ್ ಕಾರ್ತಿಕ್ ಪ್ರಣವ್–ಮೃದಂಗ, ವಿದ್ವಾನ್ ಕೆ. ಅಜಯ್–ತವಿಲ್, ಸ್ಥಳ: ಶ್ರೀರಾಮ ಸೇವಾ ಮಂಡಲಿ, 9ನೇ ಅಡ್ಡ ರಸ್ತೆ, ವಿದ್ಯಾರಣ್ಯಪುರಂ, ಸಂಜೆ 6.30ಕ್ಕೆ.

■ **ಶ್ರೀ ರಾಮಾಭ್ಯುದಯ ಸಭಾ, ಪಬ್ಲಿಕ್ ಚಾರಿಟಬಲ್ ಟ್ರಸ್ಟ್:** 134ನೇ ವರ್ಷದ ಶ್ರೀ ರಾಮೋತ್ಸವ, ವಿದ್ವಾನ್ ರಾಮಕೃಷ್ಣಮೂರ್ತಿ ಅವರಿಂದ ಶಾಸ್ತ್ರೀಯ ಸಂಗೀತ, ವಿದುಷಿ ಚಾರುಮತಿ ರಘುರಾಮ್–ಪಿಟೀಲು, ವಿದ್ವಾನ್ ಅನಂತ ಆರ್. ಕೃಷ್ಣ–ಮೃದಂಗ, ವಿದ್ವಾನ್ ಗಿರಿಧರ್ ಉಡುಪ–ಘಟಂ, ಸ್ಥಳ: ಶ್ರೀರಾಮಮಂದಿರ, ವಿನೋಬ ರಸ್ತೆ, ಶ್ರೀರಾಮಪೇಟೆ ಸಂಜೆ 6.30 ರಿಂದ.


■ **ಶ್ರೀರಾಮಮಂದಿರ:** 58ನೇ ವರ್ಷದ ರಾಮೋತ್ಸವ, ಬೆಳಗ್ಗೆ 7ಕ್ಕೆ ಶ್ರೀ ರಾಮತಾರಕ ಹೋಮ, ಸಂಜೆ 6.30ಕ್ಕೆ ಬ್ರಹ್ಮ ವಿದ್ಯಾ ಸಂಸ್ಥೆಯಿಂದ ಡಾ. ರಾ.ಸ. ನಂದಕುಮಾರ್ ಮತ್ತು ಶಿಷ್ಯ ವೃಂದದವರಿಂದ ಸಂಗೀತ, ಸ್ಥಳ: ರಾಮಮಂದಿರ ಆವರಣ, ಜಯನಗರ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10ಕ್ಕೆ ಬದುಕು ಬದಲಿಸಿದ ಶೋಧ–ಬಾನುಲಿ ಸರಣಿ, ಪ್ರಸ್ತುತಿ– ಎನ್.ಎನ್.ಸುರೇಂದ್ರನಾಥ್ ಸಾತ್ವಿಕ್, 6.40 ಪದ ಸಂಸ್ಕೃತಿ –ಕೊರ್ಗಿ ಶಂಕರನಾರಾಯಣ ಉಪಾಧ್ಯಾಯ, 6.50 ರೈತರಿಗೆ ಸಲಹೆ, 7.15 ಭಾವಗೀತೆಗಳು, 9.00 ವೃತ್ತಿಮಾರ್ಗದರ್ಶನ 'ಪಾಲಿಮರ್ ಸೈನ್ಸ್' ಅಂಡ್ ಟೆಕ್ನಾಲಜಿ ವಿಷಯದಲ್ಲಿ ಇರುವ ಅಧ್ಯಯನ ಮತ್ತು ವೃತ್ತಿಪರ ಅವಕಾಶಗಳು ಕುರಿತು ಮೈಸೂರಿನ ಶ್ರೀ ಜಯ ಚಾಮರಾಜೇಂದ್ರ ಇಂಜಿನಿಯರಿಂಗ್ ಕಾಲೇಜಿನ ಪಾಲಿಮರ್ ಸೈನ್ಸ್ ಅಂಡ್ ಟೆಕ್ನಾಲಜಿ ವಿಭಾಗದ ಮುಖ್ಯಸ್ಥರಾದ ಅಸೋಸಿಯೇಟ್ ಪ್ರೊಫೆಸರ್ ಡಾ. ಎಸ್. ರೂಪಾ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ: ಬೇದ್ರೆ ಮಂಜುನಾಥ್, 10.00 ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತ, ಹರಿಪ್ರಸಾದ್ ಚೌರಾಸಿಯಾ–ಬಾನ್ಸುರಿ ವಾದನ, 11.00 ಮಿಶ್ರಮಾಧುರ್ಯ

ಮಧ್ಯಾಹ್ನ: 12.30 ದೇವರನಾಮ, 12.45 ಜನಪದ ಸಂಗೀತ, 1.00 ಮತ ಹಾಕೋಣ ಬನ್ನಿ: ಮತದಾನ ಜಾಗೃತಿ ಸರಣಿ, 1.20 ಭಾವಗೀತೆಗಳು, 3.00 ಶಾಸ್ತ್ರೀಯ ಸಂಗೀತ, 4.00 ಮಹಿಳಾ ರಂಗ–ಸ್ತ್ರೀ ಚೇತನ, ಸಹಾಯಕ ಪ್ರಾಧ್ಯಾಪಕರು ಹಾಗೂ ರಂಗಭೂಮಿ ಕಲಾವಿದೆ ಶಾಲೋಂ ಸನ್ನುತ, ಪ್ರಸ್ತುತಿ ಅಬ್ದುಲ್ ರಶೀದ್, 4.45 ಹಿಂದಿ ಪಾಠ, ಪ್ರಸ್ತುತಿ– ಎಸ್. ಈಶ್ವರ ಭಟ್, 6.50 ಕೃಷಿರಂಗ –ಸಾವಯವ ಸಂಪದ, ಸಾವಯವ ಕೃಷಿಬದುಕಿನ ಸಮಗ್ರ ಚಿತ್ರಣ ಕುರಿತ ಬಾನುಲಿ ಸರಣಿ–ಹವಾಮಾನ ವೈಪರಿತ್ಯಕ್ಕೆ ಸೂಕ್ತವಾದ ಖುಷ್ಕಿ ಬೇಸಾಯ ಪದ್ಧತಿಗಳು ಈ ಕುರಿತು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯದ ಪ್ರಾಧ್ಯಾಪಕರಾದ ಡಾ.ಎಂ.ಎನ್. ತಿಮ್ಮೇಗೌಡ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 8.00 ಕ್ಷಿತಿಜ–ಸಾಹಿತ್ಯ ಸಾಧಕರೊಂದಿಗೆ ಸಂವಾದ, 9.30 ಲೋಕ್ ಪ್ರಸಾರಕ್ ಕೇ ಸಾಥ್ ಲೋಕ್ ನಿರ್ಣಯ್–2024, 10.00 ಹಳ್ಳಿ–ಹಾಡು, 10.30 ಸವಿನೆನಪು



ಅಂಚೆ ಪತ್ರ ವಿತರಣೆಯಲ್ಲಿ ಗೊಂದಲ; ಸಾವಿರಾರು ಸರ್ಕಾರಿ ನೌಕರರು ಮತದಾನದಿಂದ ವಂಚಿತ

ಮೈಸೂರು ನಗರ ಬಿಜೆಪಿ ಆರೋಪ



ಸುದ್ದಿಗೋಷ್ಠಿಯಲ್ಲಿ ನಗರ ಬಿಜೆಪಿ ಮಾಧ್ಯಮ ಸಹ ವಕ್ತಾರ ಮೋಹನ್ ಮಾತನಾಡಿದರು.

ಮೈಸೂರು, ಏ.23(ಎಸ್‌ಪಿಎನ್)– ಅಂಚೆ ಮತಪತ್ರ ವಿತರಣೆಯಲ್ಲಿ ಗೊಂದಲ ಸೃಷ್ಟಿಸಿರುವ ಪರಿಣಾಮ ಲೋಕಸಭಾ ಚುನಾವಣಾ ಕರ್ತವ್ಯಕ್ಕೆ ನಿಯೋಜನೆಗೊಂಡಿರುವ ಸಾವಿರಾರು ಸರ್ಕಾರಿ ನೌಕರರು ಮತದಾನದಿಂದ ವಂಚಿತರಾಗಿದ್ದಾರೆ ಎಂದು ಮೈಸೂರು ನಗರ ಬಿಜೆಪಿ ಮಾಧ್ಯಮ ಸಹ ವಕ್ತಾರ ಎಂ.ಎ.ಮೋಹನ್ ಆರೋಪಿಸಿದರು.

ಮೈಸೂರು ಚಾಮರಾಜಪುರಂನ ಬಿಜೆಪಿ ಕಚೇರಿಯಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಗೊಂದಲದಿಂದಾಗಿ ರಾಜ್ಯದ ಎಲ್ಲಾ ಲೋಕಸಭಾ ಕ್ಷೇತ್ರಗಳಲ್ಲೂ ಸುಮಾರು 5ರಿಂದ 6 ಸಾವಿರ ಸರ್ಕಾರಿ ನೌಕರರು ಮತದಾನದಿಂದ ವಂಚಿತರಾಗುವ ಸಂಭವವಿದೆ. ಶೇ.60ರಿಂದ 70ರಷ್ಟು ಸರ್ಕಾರಿ ನೌಕರರು ಬಿಜೆಪಿಗೆ ಮತ ಚಲಾಯಿಸುತ್ತಾರೆ ಎಂಬ ಕಾರಣದಿಂದ ರಾಜ್ಯ ಸರ್ಕಾರವು ಹಿರಿಯ ಅಧಿಕಾರಿಗಳ ಮೂಲಕ ಈ ಗೊಂದಲ ಸೃಷ್ಟಿಸಿ, ಚುನಾವಣಾ ಕರ್ತವ್ಯದಲ್ಲಿರುವ ಬಹುತೇಕ ಸರ್ಕಾರಿ ನೌಕರರು ಮತದಾನದಿಂದ ವಂಚಿತರಾಗುವಂತೆ ಮಾಡಿದೆ ಎಂಬ ಅನುಮಾನ ಮೂಡುತ್ತಿದೆ ಎಂದು ಹೇಳಿದರು.

ಈ ಬಾರಿಯ ಚುನಾವಣೆಯಲ್ಲಿ ಹೆಚ್ಚಿನ ಪ್ರಮಾಣದ ಮತ ಚಲಾವಣೆ ನಿಟ್ಟಿನಲ್ಲಿ ಚುನಾವಣಾ ಆಯೋಗ ಹಲವಾರು ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆಯಾದರೂ ಅದ್ಯಾವುದು ಫಲಪ್ರದವಾಗಿಲ್ಲ. ಮತದಾನ ಜಾಗೃತಿಗಾಗಿ ಕೇಂದ್ರ ಚುನಾವಣಾ ಆಯೋಗ ಕೋಟ್ಯಾಂತರ ರೂ ವೆಚ್ಚ ಮಾಡುತ್ತಿದೆ. ಆದರೆ, ಮತದಾನ ಜಾಗೃತಿಗೆ ನಿಯೋಜನೆಗೊಂಡಿರುವ ಸ್ವೀಪ್ ಸಮಿತಿ ಸಮರ್ಪಕವಾಗಿ ಕಾರ್ಯ ನಿರ್ವಹಿಸಿಲ್ಲ. ಈ ಸಮಿತಿ ಆಯೋಜಿಸಿರುವ ಬೀದಿ ನಾಟಕಗಳಿಂದ ಯಾವುದೇ ರೀತಿಯ ಮತದಾನ ಜಾಗೃತಿ ಮೂಡಿಲ್ಲ. ಈ ಲೋಪದ ಬಗ್ಗೆಯೂ ಚುನಾವಣಾ ಆಯೋಗ ತನಿಖೆ ನಡೆಸಬೇಕು ಎಂದು ಒತ್ತಾಯಿಸಿದರು. ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಗ್ರಾಮಾಂತರ ಘಟಕದ ಮುಖಂಡರಾದ ವಸಂತ್‌ಕುಮಾರ್, ಮಹೇಶ್ ರಾಜೇ ಅರಸ್ ಮತ್ತಿತರರು ಉಪಸ್ಥಿತರಿದ್ದರು.

ನರಸಿಂಹರಾಜ ಕ್ಷೇತ್ರದಲ್ಲಿ ಯದುವೀರ್ ಭರ್ಜರಿ ರೋಡ್ ಶೋ

ಭಾರತ ಅಭಿವೃದ್ಧಿ ಪಥದಲ್ಲಿ ಸಾಗಲು ಬಿಜೆಪಿ ಬೆಂಬಲಿಸುವಂತೆ ಮನವಿ

ಮೈಸೂರು, ಏ.23(ಬಿಎಲ್‌ಯು)– ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲಿ ಇಂದು ರೋಡ್ ಶೋ ನಡೆಸಿ ಮತಯಾಚಿಸಿದರು.



ಮೈಸೂರಿನ ನರಸಿಂಹರಾಜ ಕ್ಷೇತ್ರದಲ್ಲಿ ಮಂಗಳವಾರ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ್ ರೋಡ್ ಶೋ ನಡೆಸಿ ಮತಯಾಚಿಸಿದರು. ಮಾಜಿ ಮೇಯರ್ ಸಂದೇಶ್ ಸ್ವಾಮಿ ಹಾಗೂ ಇತರರನ್ನು ಚಿತ್ರದಲ್ಲಿ ಕಾಣಬಹುದು.

ಬಹಿರಂಗ ಪ್ರಚಾರಕ್ಕೆ ಇನ್ನು ಕೇವಲ ಒಂದು ದಿನ ಬಾಕಿ ಇರುವಂತೆ ಯದುವೀರ್ ಭರ್ಜರಿ ಪ್ರಚಾರ ನಡೆಸಿ ಮತದಾರರನ್ನು ಓಲೈಸಿಕೊಳ್ಳುವ ಅಂತಿಮ ಕಸರತ್ತು ನಡೆಸಿದರು. ಮೈಸೂರು-ಕೊಡಗು ಲೋಕಸಭಾ ಚುನಾವಣೆಗೆ ಏ.26ರಂದು ಮತದಾನ ನಡೆಯಲಿದ್ದು, ಬಹಿರಂಗ ಪ್ರಚಾರ ನಾಳೆ(ಬುಧವಾರ) ಸಂಜೆ 6 ಗಂಟೆಗೆ ಮುಕ್ತಾಯವಾಗಲಿದೆ. ಇದರಿಂದ ಯದುವೀರ್ ಮತದಾರರನ್ನು ಮನವೊಲಿಸಿಕೊಳ್ಳುವ ಪ್ರಯತ್ನಕ್ಕೆ ಮುಂದಾಗಿದ್ದಾರೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ನರಸಿಂಹರಾಜ ಕ್ಷೇತ್ರದಲ್ಲಿ ಕಾಂಗ್ರೆಸ್‌ಗೆ ಲೀಡ್ ಬಂದಿತ್ತು. ಬಿಜೆಪಿ ಕಾಂಗ್ರೆಸ್‌ಗಿಂತ ಕಡಿಮೆ ಮತ ಪಡೆದಿತ್ತು. ಆದರೆ ಈ ಬಾರಿ ಶತಾಯ ಗತಾಯ ಹೆಚ್ಚು ಮತಗಳನ್ನು ಬಿಜೆಪಿ ತನ್ನ ಬುಟ್ಟಿಗಿಳಿಸಿಕೊಳ್ಳುವುದನ್ನು ಸವಾಲಾಗಿ ಸ್ವೀಕರಿಸಿದೆ. ಇದರಿಂದ ಬಿಜೆಪಿ ಅಭ್ಯರ್ಥಿ ಯದುವೀರ್ ಇಂದು ನರಸಿಂಹರಾಜ ಕ್ಷೇತ್ರದಲ್ಲಿ ಬೆಳಗ್ಗೆಯಿಂದ ರಾತ್ರಿ ತನಕ ನಿರಂತರ ಪ್ರಚಾರ ಕಾರ್ಯ ಕೈಗೊಂಡರು.

ಗಾಯತ್ರಿಪುರಂನ ಚಾಮುಂಡೇಶ್ವರಿ ದೇವಸ್ಥಾನದಲ್ಲಿ ಇಂದು ಬೆಳಗ್ಗೆ 8 ಗಂಟೆಗೆ ಪೂಜೆ ಸಲ್ಲಿಸುವ ಮೂಲಕ ಯದುವೀರ್ ಪ್ರಚಾರ ಆರಂಭಿಸಿದರು. ಈ ಸಂದರ್ಭದಲ್ಲಿ ಮಾಜಿ ಶಾಸಕ ಎಸ್.ಎ.ರಾಮದಾಸ್, ಮಾಜಿ ಮೇಯರ್ ಸಂದೇಶ್ ಸ್ವಾಮಿ, ಬಿಜೆಪಿ ಮುಖಂಡ ಗಿರಿಧರ್ ಸೇರಿದಂತೆ ಹಲವು ಯದುವೀರ್‌ಗೆ ಸಾಥ್ ನೀಡಿದರು.

ರೋಡ್ ಶೋ ನಡೆಸಿದ ಯದುವೀರ್‌ಗೆ ಅಭೂತಪೂರ್ವ ಸ್ವಾಗತ ದೊರೆಯಿತು. ಬಹಳಷ್ಟು ಸ್ಥಳಗಳಲ್ಲಿ ಮಹಿಳೆಯರು ಯದುವೀರ್‌ಗೆ ಆರತಿ ಬೆಳಗಿ ಜಯಶಾಲಿಯಾಗುವಂತೆ ಶುಭ ಹಾರೈಸಿದರು.

ಕೆಲವು ಬಡಾವಣೆಗಳಲ್ಲಿರುವ ಗುಡಿಸಲು ವಾಸಿಗಳನ್ನು ಭೇಟಿ ಮಾಡಿದ ಯದುವೀರ್ ಅವರ ಸಮಸ್ಯೆ ಆಲಿಸಿದರು. ಈ ವೇಳೆ ಯದುವೀರ್ ಮಕ್ಕಳನ್ನು ಪ್ರೀತಿಯಿಂದ ಮಾತನಾಡಿಸಿದರು.

ನರಸಿಂಹರಾಜ ಕ್ಷೇತ್ರದ ಸೋಲಿಗರ ಬೀದಿ, ಅಂಬೇಡ್ಕರ್ ಕಾಲೋನಿ, ಕ್ಯಾತಮಾರನಹಳ್ಳಿ, ರಾಘವೇಂದ್ರ ನಗರ, ಗಿರಿಯಾಬೋವಿ ಪಾಳ್ಯ, ಸಿದ್ಧಾರ್ಥ ನಗರ, ವಿದ್ಯಾನಗರ, ತ್ರಿವೇಣಿ ಸರ್ಕಲ್, ಆರ್.ಎಂ.ಎಸ್.ಲೇಔಟ್, ಶಕ್ತಿನಗರ, ಟೀಚರ್ಸ್ ಕಾಲೋನಿ, ಪಾಪಣ್ಣ ಲೇಔಟ್, ಯರಗನಹಳ್ಳಿ, ಟೇರಿಷಿಯನ್ ಕಾಲೇಜ್ ಸರ್ಕಲ್ ಸೇರಿದಂತೆ ಇತರೆಡೆ ಬಿರುಸಿನ ಪ್ರಚಾರ ನಡೆಸಿ, ಯದುವೀರ್ ಒಡೆಯರ್ ಅವರಿಗೆ ಮತಯಾಚಿಸಿದರು.

ಈ ವೇಳೆ ಮಾತನಾಡಿದ ಯದುವೀರ್, ಕಳೆದ ಹತ್ತು ವರ್ಷದ ಅವಧಿಯಲ್ಲಿ ನರೇಂದ್ರ ಮೋದಿ ಬಹಳಷ್ಟು ಅಭಿವೃದ್ಧಿ ಕಾರ್ಯ ಮಾಡಿದ್ದು, ದೇಶ ಪ್ರಗತಿ ಪಥದಲ್ಲಿ ಸಾಗುವಂತೆ ವಿಶಿಷ್ಟ ಯೋಜನೆಗಳನ್ನು ಅನುಷ್ಠಾನಗೊಳಿಸಿದ್ದಾರೆ. ಭಾರತ ಮತ್ತಷ್ಟು ಪ್ರಗತಿ ಸಾಧಿಸಲು ನರೇಂದ್ರ ಮೋದಿ ಕೈ ಬಲಪಡಿಸಬೇಕು ಎಂದು ಮತದಾರರಲ್ಲಿ ಮನವಿ ಮಾಡಿದರು.

ಮೈಸೂರು ಕೊಡಗು ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿ ಸರ್ಕಾರ ಬಹಳಷ್ಟು ಯೋಜನೆಗಳನ್ನು ಸಾಕಾರಗೊಳಿಸಿದೆ ಎಂದು ಮತದಾರರಿಗೆ ಮನದಟ್ಟು ಮಾಡಿದ ಯದುವೀರ್, ಮತ್ತಷ್ಟು ಯೋಜನೆಗಳನ್ನು ಅನುಷ್ಠಾನ ಮಾಡಿ ಈ ಕ್ಷೇತ್ರವನ್ನು ಹೆಚ್ಚಿನ ರೀತಿ ಅಭಿವೃದ್ಧಿ ಮಾಡಲು ಬಿಜೆಪಿ ಬೆಂಬಲಿಸಿ ಎಂದು ಕೋರಿದರು.

ಮತದಾನ ನಮ್ಮ ಹಕ್ಕು ಜೊತೆಗೆ ಕರ್ತವ್ಯ ಕೂಡ ಆಗಿದೆ. ಈ ಹಿನ್ನೆಲೆ ಎಲ್ಲರೂ ಕಡ್ಡಾಯವಾಗಿ ಮತದಾನ ಮಾಡಬೇಕು. ಏಪ್ರಿಲ್ 26ರಂದು ಯಾವುದೇ ಕೆಲಸ ವಿದ್ದರೂ ಮತದಾನ ನಮ್ಮ ಮೊದಲ ಆದ್ಯತೆ ಎಂದು ತಿಳಿದು ಮತ ಚಲಾಯಿಸಿ ಎಂದು ಯದವೀರ್ ಸಲಹೆ ನೀಡಿದರು.

ಯದುವೀರ್ ಜೊತೆ ಸೆಲ್ಫಿಗಾಗಿ ಮುಗಿ ಬಿದ್ದ ಜನರು

ನರಸಿಂಹರಾಜ ಕ್ಷೇತ್ರದ ಚುನಾವಣಾ ಪ್ರಚಾರದ ವೇಳೆ ಬಹಳಷ್ಟು ಜನರು ಯದುವೀರ್ ಜೊತೆ ಮುಗಿ ಬಿದ್ದು ಸೆಲ್ಫಿ ತೆಗೆಸಿಕೊಳ್ಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು.

ದಸರಾ ಸಂದರ್ಭದಲ್ಲಿ ಅರಮನೆಯೊಳಗೆ ನಡೆಯುತ್ತಿದ್ದ ಖಾಸಗಿ ದರ್ಬಾರ್ ಸೇರಿದಂತೆ ಇತರೆ ಧಾರ್ಮಿಕ ಹಾಗೂ ಸಾಂಪ್ರದಾಯಿಕ ಕಾರ್ಯಕ್ರಮಗಳು ಟಿವಿಗಳಲ್ಲಿ ಪ್ರಸಾರವಾಗುತ್ತಿದ್ದ ವೇಳೆ ಜನರು ಯದುವೀರ್ ನೋಡುತ್ತಿದ್ದರು. ಅದು ಬಿಟ್ಟರೆ ಕೆಲವು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದಾಗ ಕಣ್ಣಾರೆ ಕಾಣುತ್ತಿದ್ದರು.

ಆದರೆ ಇದೇ ಮೊದಲ ಬಾರಿಗೆ ಚುನಾವಣೆಯಲ್ಲಿ ಸ್ಪರ್ಧಿಸಿರುವ ಯದುವೀರ್ ಅವರನ್ನು ನೇರವಾಗಿ ನೋಡುವ ಅವಕಾಶ ಜನರಿಗೆ ಸಿಕ್ಕಿದೆ. ಇದರಿಂದ ನರಸಿಂಹರಾಜ ಕ್ಷೇತ್ರದಲ್ಲಿ ಚುನಾವಣಾ ಪ್ರಚಾರದಲ್ಲಿ ತೊಡಗಿದ್ದ ಸಂದರ್ಭದಲ್ಲಿ ಬಹಳಷ್ಟು ಜನರು ಯದುವೀರ್ ಜೊತೆ ಸೆಲ್ಫಿ ತೆಗೆಸಿಕೊಳ್ಳಲು ಮುಗಿಬಿದ್ದರು. ಅಷ್ಟೇ ಅಲ್ಲದೆ ರೋಡ್ ಶೋನಲ್ಲಿ ಸಾಗುತ್ತಿದ್ದ ದೃಶ್ಯವನ್ನು ಬಹಳಷ್ಟು ಜನರು ಫೋಟೋ ಹಾಗೂ ವಿಡಿಯೋ ಮಾಡಿಕೊಳ್ಳುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ರೆಡ್ ಶರ್ಟ್‌ನಲ್ಲಿ ಮಿಂಚುತ್ತಿದ್ದ ಯದುವೀರ್ ಅವರೊಂದಿಗೆ ಸೆಲ್ಫಿ ತೆಗೆದುಕೊಳ್ಳುವುದು ಕ್ರೇಜ್ ಆಗಿತ್ತು.

ಕಾಂಗ್ರೆಸ್‌ನಿಂದ ಮಾತ್ರ ಆರ್ಥಿಕ, ಸಾಮಾಜಿಕ ಅಸಮಾನತೆ ನಿವಾರಣೆ

ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ಅಭಿಮತ



ಮೈಸೂರು,ಏ.23(ಎಂಕೆ)–ಭೂ ಸುಧಾರಣೆ ಕಾಯ್ದೆ ಜಾರಿಗೊಳಿಸಿ ಬಡವರಿಗೆ ಭೂಮಿ ಹಕ್ಕು ನೀಡಿದ ಕಾಂಗ್ರೆಸ್‌ನಿಂದ ಮಾತ್ರ ಸಾಮಾಜಿಕ ಮತ್ತು ಆರ್ಥಿಕ ಅಸಮಾನತೆ ತೊಲಗಿಸಲು ಸಾಧ್ಯ ಎಂದು ವಿಧಾನಪರಿಷತ್ ಸದಸ್ಯ ಡಾ.ತಿಮ್ಮಯ್ಯ ಹೇಳಿದರು.

ಹನೂರು ತಾಲೂಕಿನ ವಿವಿಧ ಗ್ರಾಮಗಳಲ್ಲಿ ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ಮತಯಾಚನೆ ನಡೆಸಿದ ಅವರು, ರಾಜ್ಯದಲ್ಲಿ ಆರ್ಥಿಕ ಅಸಮಾನತೆ ತೊಲಗಿಸಲು ರಾಜ್ಯ ಸರ್ಕಾರ ಐದು ಗ್ಯಾರಂಟಿ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಬಡವರಿಗೆ ಜೀವನ ಭದ್ರತೆ ಒದಗಿಸಿದೆ ಎಂದರು.

ರಾಜ್ಯದಂತೆಯೇ ಕೇಂದ್ರದಲ್ಲಿಯೂ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಪ್ರತಿ ಬಡ ಕುಟುಂಬದ ಮಹಿಳೆ ಖಾತೆಗೆ ವರ್ಷಕ್ಕೆ 1 ಲಕ್ಷ ರೂ., 30ಲಕ್ಷ ಉದ್ಯೋಗ, ಗುತ್ತಿಗೆ ಪದ್ಧತಿ ರದ್ದು, ರೈತರ ಸಾಲ ಮನ್ನಾ ಮುಂತಾದ ಜನಪರ ಗ್ಯಾರಂಟಿ ಯೋಜನೆಗಳನ್ನು ಜಾರಿಗೆ ತರಲಾಗುವುದು. ಕಾಂಗ್ರೆಸ್ ನುಡಿದಂತೆಯೇ ನಡೆಯುವ ಪಕ್ಷವಾಗಿದೆ ಹೊರತು ಬಿಜೆಪಿಯವರಂತೆ ಪೊಳ್ಳು ಭರವಸೆಗಳನ್ನು ನೀಡುವುದಿಲ್ಲ. ಆದ್ದರಿಂದ ಬಿಜೆಪಿ ತಿರಸ್ಕರಿಸಿ, ಕಾಂಗ್ರೆಸ್ ಬೆಂಬಲಿಸುವಂತೆ ಮತದಾರರಲ್ಲಿ ಮನವಿ ಮಾಡಿದರು.

ಈ ವೇಳೆ ಕಾಂಗ್ರೆಸ್ ಮುಖಂಡರಾದ ಎಡತೊರೆ ನಿಂಗರಾಜ್, ಶಿವಮೂರ್ತಿ, ಪಾಳ್ಯ ರಾಚಪ್ಪ, ಟೆಲಿಫೋನ್ ರಾಚಪ್ಪ, ಬೂದುಬಾಳು ಮಹದೇವ, ರಾಜು ಮತ್ತಿತರರು ಉಪಸ್ಥಿತರಿದ್ದರು.

ಹೆಚ್.ಡಿ.ದೇವೇಗೌಡ, ಹೆಚ್‌ಡಿಕೆಯಿಂದ ಡಿಕೆಶಿ ತೇಜೋವಧೆಗೆ ಯತ್ನ ಆರೋಪ

ಮೈಸೂರು,ಏ.23(ಜಿಎ)–ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರ ತೇಜೋವಧೆಗೆ ಜೆಡಿಎಸ್‌ನ ರಾಜ್ಯಾಧ್ಯಕ್ಷ ಹೆಚ್.ಡಿ. ಕುಮಾರಸ್ವಾಮಿ ಮತ್ತು ವರಿಷ್ಠ ಹೆಚ್.ಡಿ. ದೇವೇಗೌಡರು ಪ್ರಯತ್ನಿಸುತ್ತಿದ್ದು, ಇದು ಹೀಗೆಯೇ ಮುಂದುವರಿದರೆ ಡಿಕೆಶಿ ಅಭಿಮಾನಿಗಳು, ಒಕ್ಕಲಿಗ ಮುಖಂಡರು ಹಾಗೂ ಕಾಂಗ್ರೆಸ್ ಪಕ್ಷದಿಂದ ಉಗ್ರ ಹೋರಾಟ ಮಾಡಬೇಕಾಗುತ್ತದೆ ಎಂದು ಕೆಪಿಸಿಸಿ ನಗರ ವಕ್ತಾರ ಟಿ.ಶ್ರೀನಿವಾಸ್ ಎಚ್ಚರಿಕೆ ನೀಡಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈತ್ರಿ ಸರ್ಕಾರದಲ್ಲಿ ಕುಮಾರಸ್ವಾಮಿಯವರ ಸಹಕಾರಕ್ಕಾಗಿ ಯಾವುದೇ ಕಲ್ಮಶವಿಲ್ಲದೆ ಕಾರ್ಯನಿರ್ವಹಿಸಿದ್ದ ಡಿ.ಕೆ. ಶಿವಕುಮಾರ್ ಅವರು ಸತತ ಪರಿಶ್ರಮದಿಂದ ಕಾಂಗ್ರೆಸ್ ಪಕ್ಷವನ್ನು ರಾಜ್ಯದಲ್ಲಿ ಅಧಿಕಾರಕ್ಕೆ ತಂದಿದ್ದಾರೆ. ಒಕ್ಕಲಿಗ ಸಮುದಾಯದ ನಾಯಕರಾಗಿಯೂ ಗಮನ ಸೆಳೆದಿದ್ದಾರೆ. ಅವರ ವಿರುದ್ಧ ಇಲ್ಲಸಲ್ಲದ ಮಾತುಗಳಾಡುವುದನ್ನು ಕೂಡಲೇ ನಿಲ್ಲಿಸಬೇಕು ಎಂದು ಆಗ್ರಹಿಸಿದರು.

ಮುಖಂಡ ತೇಜಸ್ವಿ ವಿ.ಎಚ್.ಗೌಡ ಮಾತನಾಡಿ, ಒಕ್ಕಲಿಗರ ಅಧಿಕೃತ ಪ್ರತಿನಿಧಿಯಾಗಿ ಒಕ್ಕಲಿಗರ ಸಂಘವಿದ್ದು, ಅದು ಮೈಸೂರು– ಕೊಡಗು ಲೋಕಸಭೆ ಕ್ಷೇತ್ರದಲ್ಲಿ ಎಂ.ಲಕ್ಷ್ಮಣ್ ಅವರ ಬೆಂಬಲಕ್ಕೆ ಕರೆ ನೀಡಿದೆ. ತಾತ್ಕಾಲಿಕವಾಗಿ ಹುಟ್ಟಿಕೊಂಡ ಒಕ್ಕೂಟಗಳ ಮಾತಿಗೆ ಸಮುದಾಯ ಬೆಲೆ ನೀಡಬಾರದು ಎಂದು ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಕುಮಾರ್, ನಟರಾಜ್, ಪವನ್, ವರುಣ ಮಹದೇವ್ ಉಪಸ್ಥಿತರಿದ್ದರು.



ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಪರ ವಾರ್ಡ್ ನಂ.40ರಲ್ಲಿ ಮತಯಾಚನೆ ಮಾಡಲಾಯಿತು. ವಾರ್ಡ್ ಅಧ್ಯಕ್ಷ ಮೋಹನ್‌ಕುಮಾರ್, ನಗರ ಕಾಂಗ್ರೆಸ್ ಸಮಿತಿಯ ಹಿಂದುಳಿದ ವರ್ಗದ ಅಧ್ಯಕ್ಷ ಎನ್.ಆರ್.ನಾಗೇಶ್, ಯುವ ಕಾಂಗ್ರೆಸ್ ಅಧ್ಯಕ್ಷ ಸುಹಾಸ್, ಮುಖಂಡರಾದ ವಿಕಾಸ್ ಸಿಂಹ, ಜಾವೀದ್, ಈರೇಗೌಡ, ಪಾಪಣ್ಣ, ಮಾದೇಶ್ ಶಿವಣ್ಣ, ರವಿನಾಯಕ್, ಚಂದ್ರಶೇಖರ್, ದೀಪಕ್, ಪುಟ್ಟಸ್ವಾಮಿ, ಸುಂದರ್‌ಕುಮಾರ್, ವರದಣ್ಣ, ನಾಗೇಶ್, ನಿರಂಜನ್, ರವಿಕುಮಾರ್, ಅರುಣ್, ಲೋಕನಾಥ್‌ಗೌಡ, ಸುನಿಲ್, ನಾರಾಯಣ್ ಇದ್ದರು.



ಬನ್ನೂರು ಪಟ್ಟಣದ ಮಹಾಶಕ್ತಿ ಕೇಂದ್ರದಲ್ಲಿ ಎನ್‌ಡಿಎ ಅಭ್ಯರ್ಥಿ ಎಸ್.ಬಾಲರಾಜ್ ಪರ ಮತಯಾಚಿಸಲಾಯಿತು. ಈ ವೇಳೆ ಅಧ್ಯಕ್ಷ ಪ್ರಭಾಕರ್, ಜಿಲ್ಲಾ ಪ್ರಕೋಷ್ಠ ಸಂಚಾಲಕ ಡಿ.ಮಹೇಶ ನಾಯಕ, ಕಾರ್ಯದರ್ಶಿ ಪಾಳೇಗೌಡ ಮತ್ತಿತರರು ಉಪಸ್ಥಿತರಿದ್ದರು.

ಸಂವಿಧಾನದ ಆಶಯಗಳಿಗೆ ಮೌಲ್ಯ ಬರಬೇಕಾದರೆ ಎಲ್ಲರೂ ಕಡ್ಡಾಯ ಮತದಾನ ಮಾಡಿ



ಮೈಸೂರು, ಏ.23– ಸಂವಿಧಾನದ ಆಶಯಗಳಿಗೆ ಮೌಲ್ಯ ಬರಬೇಕಾದರೆ ಮತದಾನದಲ್ಲಿ ಎಲ್ಲರೂ ಕಡ್ಡಾಯವಾಗಿ ಪಾಲ್ಗೊಂಡು ಮತ ಚಲಾಯಿಸಬೇಕೆಂದು ಮೈಸೂರು ಮಹಾನಗರ ಪಾಲಿಕೆ ಸಹಾಯಕ ಆಯುಕ್ತ ನಾಗೇಶ್ ತಿಳಿಸಿದರು.

ಮೈಸೂರಿನ ಎಂಎಂಕೆ ಮತ್ತು ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಕಾಲೇಜಿನಲ್ಲಿ ಎನ್‌ಎಸ್‌ಎಸ್, ಲೀಗಲ್ ಲಿಟ್ರೆಸಿ ಕ್ಲಬ್, ಜಿಲ್ಲಾ ಸ್ವೀಪ್ ಸಹಯೋಗದಲ್ಲಿ ಆಯೋಜಿಸಿದ್ದ ಡಾ. ಬಿ.ಆರ್.ಅಂಬೇಡ್ಕರ್ ಜನ್ಮ ದಿನಾಚರಣೆ ಮತ್ತು ಮತದಾನ ಜಾಗೃತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿದ್ದ ಅವರು, ಪ್ರಜಾಪ್ರಭುತ್ವದ ಮತದಾರನ ಹಬ್ಬ ಚುನಾವಣೆ ಈ ಚುನಾವಣೆಗಳಲ್ಲಿ ಪ್ರಜೆಗಳಿಗೆ ಉತ್ತಮ ಸವಲತ್ತು ಸೌಲಭ್ಯಗಳನ್ನು ಸರ್ಕಾರದಿಂದ ನೀಡಲು ಸೂಕ್ತ ಜನಪ್ರತಿನಿಧಿಗಳನ್ನು ಆಯ್ಕೆ ಮಾಡಲು ಸಂವಿಧಾನವು ನೀಡಿರುವ ಈ ಹಕ್ಕನ್ನು ಯಾವುದೇ ಆಮಿಷಗಳಿಗೆ ಒಳಗಾಗದೆ ಚಲಾಯಿಸಬೇಕೆಂದು ತಿಳಿಸಿ ಮತದಾನ ಜಾಗೃತಿ ಪ್ರತಿಜ್ಞಾ ಬೋಧನೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕಾಲೇಜಿನ ಪ್ರಾಂಶುಪಾಲರಾದ ಪ್ರೊ ಸಾಯಿನಾಥ್ ಮಲ್ಲಿಗೆಮಾಡು ಮಾತನಾಡಿದರು. ಉಪ ಪ್ರಾಂಶುಪಾಲರಾದ ಪ್ರೊ.ಎನ್. ಭಾರತಿ ಐಕ್ಯೂಎಸ್ ಸಂಚಾಲಕ ಪ್ರೊಸುಕೃತ, ಪಾಲಿಕೆ ಆರೋಗ್ಯಾಧಿಕಾರಿ ಅಶ್ವತ್ಥಗೌಡ, ಎನ್‌ಎಸ್‌ಎಸ್ ಅಧಿಕಾರಿ ಅನಿತ ಜಯರಾಮ, ಲೀಗಲ್ ಲಿಟ್ರೆಸಿ ಕ್ಲಬ್ ಸಂಚಾಲಕಿ ಭೋಗೇಶ್ವರಿ, ಅಧ್ಯಾಪಕರು ಅಧ್ಯಾಪಕೇತರರು, ವಿದ್ಯಾರ್ಥಿನಿಯರು ಉಪಸ್ಥಿತರಿದ್ದರು.



ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಪರ ನಾಗವಾಲ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಬೊಮ್ಮೇನಹಳ್ಳಿಯಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಸಿ.ನರೇಂದ್ರ ಮತಯಾಚನೆ ಮಾಡಿದರು. ಈ ಸಂದರ್ಭದಲ್ಲಿ ಗ್ರಾಪಂ ಸದಸ್ಯರಾದ ಗೀತಾ ಮಹದೇವ್, ಯಜಮಾನರಾದ ನಿಂಗಯ್ಯ, ಸಿದ್ದರಾಜು, ಮುಖಂಡರಾದ ಶಿವರಾಜು, ಬಿಎಸ್‌ಎಸ್ ಸಂಚಾಲಕ ಶಿವಣ್ಣ, ಕುಮಾರ, ಮೈಸೂರು ಜಿಲ್ಲಾ ಯುವ ಕಾಂಗ್ರೆಸ್ ಸಮಿತಿ ಉಪಾಧ್ಯಕ್ಷ ಬಿಳಿಕೆರೆ ಸ್ವಾಮಿ, ಜವರನಾಯಕ, ಪಾಪನಾಯಕ, ಗ್ರಾಮದ ಮುಖಂಡರು, ಅಂಬೇಡ್ಕರ್ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಪ್ರವಾಸಿ ವಾಹನಗಳನ್ನು ತಡೆದು ವಶಕ್ಕೆ ಪಡೆಯುವುದನ್ನು ನಿಲ್ಲಿಸುವಂತೆ ಸಾರಿಗೆ ಅಧಿಕಾರಿಗಳಿಗೆ ಮನವಿ



ಮೈಸೂರು,ಏ.23–ಕಳೆದ ಕೆಲವು ದಿನಗಳಿಂದ ಸಾರಿಗೆ ಅಧಿಕಾರಿಗಳು ನಗರದಲ್ಲಿ ಸಂಚರಿಸುತ್ತಿರುವ ಪ್ರವಾಸಿ ವಾಹನಗಳನ್ನು ರಸ್ತೆ ಮಧ್ಯೆ ತಡೆಹಿಡಿದು ವಾಹನಗಳನ್ನು ಚುನಾವಣಾ ಕಾರ್ಯಕ್ಕೆ ಬಳಸಿಕೊಳ್ಳುತ್ತಿರುವುದಾಗಿ ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್ ಅಧ್ಯಕ್ಷ ಬಿ.ಎಸ್. ಪ್ರಶಾಂತ್ ಆರೋಪಿಸಿದ್ದಾರೆ.

ಒಂದು ವೇಳೆ ಚುನಾವಣಾ ಕಾರ್ಯದ ಬಳಕೆಗೆ ವಾಹನ ಬೇಕಾದಲ್ಲಿ ಪ್ರಾದೇಶಿಕ ಸಾರಿಗೆ ಕಚೇರಿ ವತಿಯಿಂದ ಮೈಸೂರು ಟ್ರಾವೆಲ್ಸ್ ಅಸೋಸಿಯೇಷನ್‌ಗೆ ಅಧಿಕೃತವಾಗಿ ಪತ್ರ ನೀಡಬೇಕು. ಆಗ ನಾವೇ ನಮ್ಮ ಸಂಸ್ಥೆ ವತಿಯಿಂದ ವಾಹನಗಳನ್ನು ಕಳುಹಿಸಿಕೊಡುತ್ತೇವೆ. ಸದಾ ಇಲಾಖೆಯ ಜೊತೆಗಿರುತ್ತೇವೆ. ಅದರ ಬದಲು ಈ ರೀತಿ ಮಾಡುವುದನ್ನು ಖಂಡಿಸುತ್ತೇವೆ ಎಂದರು. ಅದೂ ಅಲ್ಲದೆ ಕಳೆದ ವರ್ಷ ನಾವು ಚುನಾವಣಾ ಕಾರ್ಯಕ್ಕೆ ನೀಡಿರುವ ವಾಹನಗಳ ಬಿಲ್‌ಗಳನ್ನೇ ಇನ್ನೂ ಪಾವತಿ ಮಾಡಿಲ್ಲ ದಯವಿಟ್ಟು ಸಾರಿಗೆ ಇಲಾಖೆ ಈ ಬಗ್ಗೆ ಗಮನಹರಿಸಿ ಇದ್ದಕ್ಕಿದ್ದಂತೆ ವಾಹನಗಳನ್ನು ವಶಕ್ಕೆ ಪಡೆಯುವುದನ್ನು ನಿಲ್ಲಿಸಬೇಕೆಂದು ಮನವಿ ಮಾಡಿದ್ದಾರೆ.




ವೀರ ಸಾವರ್ಕರ್ ಯುವ ಬಳಗದ ವತಿಯಿಂದ ಮೈಸೂರು ರೈಲ್ವೆ ನಿಲ್ದಾಣ ಮುಂಭಾಗ ಪ್ರಯಾಣಿಕರಿಗೆ ಕಡ್ಡಾಯ ಮತದಾನದ ಜಾಗೃತಿಯ ಕರಪತ್ರ ನೀಡಿ, ಮತದಾನದ ಬಗ್ಗೆ ಅರಿವು ಮೂಡಿಸಲಾಯಿತು. ಈ ವೇಳೆ ಸಮಾಜ ಸೇವಕ ಆರ್.ಪರಮೇಶ್, ವೀರ ಸಾವರ್ಕರ್ ಯುವ ಬಳಗದ ಉಪಾಧ್ಯಕ್ಷ ಸಂದೇಶ್, ಸಂಚಾಲಕರಾದ ಆರ್.ಪರಮೇಶ್, ಪ್ರಮೋದ್‌ಗೌಡ, ಮಧು ಸೋಮಶೇಖರ್, ಸುರೇಂದ್ರ, ಚಂದನ್‌ಗೌಡ, ಯೋಗೇಶ್, ಸಚಿನ್ ಇನ್ನಿತರರು ಹಾಜರಿದ್ದರು.



ಮೈಸೂರು ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಚಾ.ನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನೀಲ್ ಬೋಸ್ ಪರ ತುಮ್ಮ ನೇರಳೆಯಲ್ಲಿ ಮತಯಾಚಿಸಿದರು. ಈ ವೇಳೆ ಮೈಸೂರು ನಗರ ಕಾಂಗ್ರೆಸ್ ಜಿಲ್ಲಾ ಹಿರಿಯ ಉಪಾಧ್ಯಕ್ಷ ಕೆ.ಸಿ.ರಾಜು, ಹಿರಿಯ ಮುಖಂಡ ಎಂ.ಕೆ.ಕೊಂಡೇಗೌಡ, ಮುಡಾ ಮಾಜಿ ಸದಸ್ಯ, ಸಿಟಿ ಕೋ–ಆಪರೇಟಿವ್ ಬ್ಯಾಂಕ್ ನಿರ್ದೇಶಕ ಸಿ.ಜಯಕುಮಾರ್ ಮತ್ತಿತರರು ಇದ್ದರು.



ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಮೈತ್ರಿ ಅಭ್ಯರ್ಥಿ ಯದುವೀರ್ ಪರ ಮಾಜಿ ಶಾಸಕ ಎಲ್.ನಾಗೇಂದ್ರ ನೇತೃತ್ವದಲ್ಲಿ ಜೆಡಿಎಸ್ ಮುಖಂಡ ಸೋಮು, ಒಕ್ಕಲಿಗರ ಸಂಘದ ನಿರ್ದೇಶಕ ರವಿ, ಪಾಲಿಕೆ ಮಾಜಿ ಸದಸ್ಯ ಶಿವರಾಮ್ ಮತಯಾಚಿಸಿದರು.



ವರುಣ ಕ್ಷೇತ್ರದ ಮರಡಿಹುಂಡಿ ಗ್ರಾಮದಲ್ಲಿ ಚಾ.ನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನಿಲ್ ಬೋಸ್ ಬಿರುಸಿನ ಪ್ರಚಾರ ನಡೆಸಿದರು. ಈ ವೇಳೆ ಗ್ರಾಪಂ ಸದಸ್ಯ ಬುಲೆಟ್ ಮಹಾದೇವ್, ಮುಖಂಡರಾದ ವಜ್ರೇಗೌಡ, ಮಲ್ಲಿಕಾಗೌಡ, ಮಹದೇವಪ್ಪ ಅಭಿಮಾನಿ ಬಳಗದ ಅಧ್ಯಕ್ಷ ಹಿನಕಲ್ ನಂಜುಂಡ ಮತ್ತಿತರರಿದ್ದರು.


ವಿದ್ಯಾರಣ್ಯಪುರಂ ಅಂಬೇಡ್ಕರ್ ಕಾಲೋನಿಯಲ್ಲಿ ಅರಿಶಿನ ಕುಂಕುಮ ವಿತರಿಸಿ ಮತದಾನ ಜಾಗೃತಿ

ಮತದಾನ ಹೆಚ್ಚಳಕ್ಕೆ ವಿನೂತನ ಅಭಿಯಾನ



ಮೈಸೂರು,ಏ.23–ಲೋಕಸಭಾ ಚುನಾವಣೆಯಲ್ಲಿ ಪ್ರತಿಯೊಬ್ಬರೂ ಕಡ್ಡಾಯ ಮತದಾನ ನಡೆಸಲು ವಿಶ್ವ ಹಿಂದೂ ಪರಿಷತ್ ಮೈಸೂರು ವಿಭಾಗದ ವತಿಯಿಂದ ವಿದ್ಯಾರಣ್ಯಪುರಂನಲ್ಲಿರುವ ಅಂಬೇಡ್ಕರ್ ಕಾಲೋನಿಯಲ್ಲಿ ಮನೆ ಮನೆಗೆ ತೆರಳಿ ಮಹಿಳೆಯರಿಗೆ ಅರಿಶಿನ, ಕುಂಕುಮ ಹಾಗೂ ಕಡ್ಡಾಯ ಮತದಾನದ ಕರೆಯೋಲೆ ನೀಡಿ ಮತದಾನಕ್ಕೆ ಆಹ್ವಾನಿಸಲಾಗುತ್ತಿದೆ. ಏ.26ರಂದು ಕಡ್ಡಾಯವಾಗಿ ಮತದಾನ ಮಾಡಬೇಕು ಎಂದು ವಿಶ್ವ ಹಿಂದೂ ಪರಿಷತ್ ವಿಭಾಗ ಸಂಯೋಜಿಕೆ ಸವಿತಾ ಘಾಟ್ಕೆ ಮನವಿ ಮಾಡಿದರು. ನಂತರ ಮಾತನಾಡಿದ ಅವರು, ಮತ ಹಕ್ಕು ಕೇವಲ ನಮ್ಮ ಹಕ್ಕು ಮಾತ್ರವಲ್ಲ, ನಮ್ಮ ಜವಾಬ್ದಾರಿಯು ಆಯ್ಕೆಯು ಆಗಿದೆ. ಜಿಲ್ಲೆ, ದೇಶದ ಅಭಿವೃದ್ಧಿಗೆ ಉತ್ತಮ ನಾಯಕರನ್ನು ಆಯ್ಕೆ ಮಾಡುವ ಪ್ರಕ್ರಿಯೆ ಇದಾಗಿದೆ. ನಾವು ಪ್ರತಿಯೊಂದು ಹಬ್ಬವನ್ನು ಕುಟುಂಬದ ಸದಸ್ಯರ ಜೊತೆಗೆ ಆಚರಣೆ ಮಾಡುತ್ತೇವೋ ಅದೇ ರೀತಿ ನಮ್ಮ ರಾಜ್ಯದ ಮತ್ತು ದೇಶದ ಅತಿ ದೊಡ್ಡ ಹಬ್ಬ ಈ ಚುನಾವಣೆ ಹಬ್ಬವು ನಮ್ಮ ದೇಶದ ಹೆಮ್ಮೆ, ಗರ್ವವಾದ ಹಬ್ಬವಾಗಿದೆ. ಈ ಹಬ್ಬದಲ್ಲಿ ನಗರ ಮತ್ತು ಜಿಲ್ಲೆಯ ಜನರು ಭಾಗವಹಿಸಬೇಕು ಎಂದರು.

ಈ ಸಂದರ್ಭದಲ್ಲಿ ಸಹ ಕಾರ್ಯದರ್ಶಿ ಜಯಶ್ರೀ ಶಿವರಾಂ, ಸಹ ಕಾರ್ಯದರ್ಶಿ ಪುನೀತ್, ಸೇವಾ ಪ್ರಮುಖ ಸರಸ್ವತಿ ಹಲಸಗಿ, ಪ್ರಖಂಡ ಸಂಯೋಜಕಿಯಾದ ರೂಪ, ಭಾಗ್ಯ, ಲಲಿತಾಂಬ, ಸರಸ್ವತಿ ಪ್ರಸಾದ್ ಭಾಗವಹಿಸಿ ಮಹಿಳೆಯರಿಗೆ ಬಾಗಿನ ನೀಡಿ ಕಡ್ಡಾಯ ಮತದಾನದ ಜಾಗೃತಿ ಮೂಡಿಸಿದರು.



ಎನ್.ಆರ್. ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ರೋಡ್ ಶೋ ಮೂಲಕ ಮತಯಾಚನೆ

ಶಾಸಕ ತನ್ವೀರ್ ಸೇಠ್ ಸಾಥ್

ಮೈಸೂರು, ಏ.23(ಎಂಟಿವೈ)- ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಮಂಗಳವಾರ ಶಾಸಕ ತನ್ವೀರ್ ಸೇಠ್ ಹಾಗೂ ಸ್ಥಳೀಯ ಮುಖಂಡರೊಂದಿಗೆ ನರಸಿಂಹರಾಜ ವಿಧಾನಸಭಾ ಕ್ಷೇತ್ರದ ವಿವಿಧೆಡೆ ರೋಡ್ ಶೋ ಹಾಗೂ ಪಾದಯಾತ್ರೆ ನಡೆಸಿ ಬಿರುಸಿನ ಮತಯಾಚನೆ ನಡೆಸಿದರು.

ಲೋಕಸಭಾ ಚುನಾವಣೆಯ ಬಹಿರಂಗ ಪ್ರಚಾರ ಅಂತ್ಯಕ್ಕೆ ಕೇವಲ ಒಂದು ದಿನ ಬಾಕಿ ಇರುವಂತೆ ಇಂದು ಬಿರುಸಿನ ಪ್ರಚಾರ ನಡೆಸಿ ಮತಯಾಚಿಸಿದರು.

ಎನ್.ಆರ್.ಕ್ಷೇತ್ರದ ಗಾಯಿತ್ರಿಪುರಂ ಜಂಕ್ಷನ್, ಎಂಸಿಸಿ ಕಾಲೋನಿಯಿಂದ ಪ್ರಚಾರ ಆರಂಭಿಸಿದ ಎಂ.ಲಕ್ಷ್ಮಣ ಶ್ರೀ ದೇವಿ ಪಟ್ಟಲ್ಲಮ್ಮ ಹಾಗೂ ಶ್ರೀ ಆದಿಶಕ್ತಿ ದೇವಸ್ಥಾನಕ್ಕೆ ಹೋಗಿ ಪೂಜೆ ಸಲ್ಲಿಸಿದರು. ನಂತರ ಡಾ.ಬಿ.ಆರ್ ಅಂಬೇಡ್ಕರ್ ಭಾವ ಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಪಾದಯಾತ್ರೆ ಮುಂದುವರೆಸಿದರು. ಯರಗನಹಳ್ಳಿ, ಡಾ.ರಾಜಕುಮಾರ್ ರಸ್ತೆ, ವಿದ್ಯಾನಗರ, ರಾಘವೇಂದ್ರ ನಗರ, ಗೌಸಿಯಾನಗರ, ಕ್ಯಾತಮಾರನಹಳ್ಳಿ ಕೆ.ಎನ್.ಪುರ, ಕಲ್ಯಾಣಗಿರಿ, ಅಜೀಜ್ ಸೇಠ್, ಶಾಂತಿನಗರ, ರಾಜೀವ್‌ನಗರದಲ್ಲಿ ಪಾದಯಾತ್ರೆ ಮೂಲಕ ಮತಯಾಚಿಸಿ, ಲೋಕಸಭಾ ಚುನಾವಣೆಯಲ್ಲಿ ಈ ಬಾರಿ ಕಾಂಗ್ರೆಸ್ ಬೆಂಬಲಿಸುವಂತೆ ಮನವಿ ಮಾಡಿದರು.



ಮೈಸೂರಿನ ಎನ್.ಆರ್.ಕ್ಷೇತ್ರ ವ್ಯಾಪ್ತಿಯ ವಿವಿಧೆಡೆ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ, ಶಾಸಕ ತನ್ವೀರ್ ಸೇಠ್ ಅವರೊಂದಿಗೆ ಮತಯಾಚಿಸಿದರು.

ಪ್ರಚಾರದ ವೇಳೆ ಶಾಸಕ ತನ್ವೀರ್ ಸೇಠ್ ಮಾತನಾಡಿ, ಜನಪರ ಹಾಗೂ ಸಮಾಜದ ಪರ ಕಾಳಜಿಯಿಟ್ಟುಕೊಂಡು ಅನೇಕ ವರ್ಷಗಳಿಂದ ಹೋರಾಟ ಮಾಡಿಕೊಂಡು ಬಂದಿರುವ ಹಾಗೂ ಕಾಂಗ್ರೆಸ್ ಸಾಮಾನ್ಯ ಕಾರ್ಯಕರ್ತರಾದ ಎಂ.ಲಕ್ಷ್ಮಣ ಅವರನ್ನು ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಕಣಕ್ಕಿಳಿಸಲಾಗಿದೆ. ಸದಾ ಜನರೊಂದಿಗೆ ಇರುವ ಲಕ್ಷ್ಮಣ ಕ್ಷೇತ್ರದ ಜನರ ಸಮಸ್ಯೆಗಳಿಗೆ ಸ್ಪಂದಿಸುವ ಗುಣವುಳ್ಳವರಾಗಿದ್ದಾರೆ. ಜನರ ಕಷ್ಟ ಕಾರ್ಪಣ್ಯಗಳಿಗೆ, ಆಸೆ-ಆಕಾಂಕ್ಷೆಗಳಿಗೆ, ಕ್ಷೇತ್ರದ ಜನರ ಕನಸ್ಸನ್ನು ನನಸು ಮಾಡುವ ಶಕ್ತಿ ಲಕ್ಷ್ಮಣ ಅವರಿಗಿದೆ. ವಿರೋಧ ಪಕ್ಷದ ಕೆಲವರು ಜನರನ್ನು ದಾರಿ ತಪ್ಪಿಸಲು ಪ್ರಯತ್ನಿಸುತ್ತಿದ್ದಾರೆ. ಸಮಾಜದಲ್ಲಿ ಶಾಂತಿ ನೆಲೆಸಬೇಕಾದರೆ, ಎಲ್ಲಾ ವರ್ಗದ ಜನರು ನೆಮ್ಮದಿಯಿಂದ ಜೀವಿಸಬೇಕಾದರೆ ಲೋಕಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿಸುವಂತೆ ಮನವಿ ಮಾಡಿದರು.

ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಮಾತನಾಡಿ, ಪ್ರಸಕ್ತ ಲೋಕಸಭಾ ಚುನಾವಣೆ ಸುಳ್ಳು ಹಾಗೂ ಸತ್ಯದ ನಡುವಿನ ಹೋರಾಟವಾಗಿದೆ. ಈ ಧರ್ಮಯುದ್ಧದಲ್ಲಿ ಯಾರಿಗೆ ಜಯ ದೊರಕಿಸಿಕೊಡಬೇಕು ಎಂದು ನೀವೇ ನಿರ್ಧರಿಸಿ. ರೈತರು, ಜನಸಾಮಾನ್ಯರು, ಕೂಲಿ ಕಾರ್ಮಿಕರು, ಮಹಿಳೆಯರ ಪರವಾಗಿ ಯಾರು ಕಾರ್ಯಕ್ರಮ ರೂಪಿಸಿದ್ದಾರೆ. ಯಾವ ಪಕ್ಷದ ಸರ್ಕಾರ ಕೊಟ್ಟ ಮಾತನ್ನು ಉಳಿಸಿಕೊಂಡಿದೆ. ಗ್ಯಾರಂಟಿ ಯೋಜನೆಗಳನ್ನು ಬಿಜೆಪಿ ವಿರೋಧಿಸುತ್ತಿರುವುದು ಏಕೆ ಎಂದು ಅವಲೋಕಿಸಬೇಕು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಚುನಾವಣೆಗೂ ಮೊದಲು ನೀಡಿದ್ದ ಭರವಸೆಗಳನ್ನೂ ಈಗಾಗಲೇ ಈಡೇರಿಸಿದ್ದಾರೆ. ಗ್ಯಾರಂಟಿ ಯೋಜನೆಗಳಿಂದ ಬಡ, ಮಧ್ಯಮ, ರೈತ, ಕಾರ್ಮಿಕ ಹಾಗೂ ಅಸಂಘಟಿತ ಕಾರ್ಮಿಕರ ಕುಟುಂಬಕ್ಕೆ ದಾರಿದೀಪವಾಗಿದೆ. ಸಿಎಂ ಸಿದ್ದರಾಮಯ್ಯ ಈಗಾಗಲೇ ಮೈಸೂರಿನ ಅಭಿವೃದ್ಧಿಗೆ 3800 ಕೋಟಿ ಅನುದಾನವನ್ನು ನೀಡಿದ್ದಾರೆ. ವಿವಿಧ ಆಸ್ಪತ್ರೆಗಳು, ಹಾಸ್ಟೆಲ್, ಕಾಲೇಜು ಕಟ್ಟಡಗಳನ್ನು ಕಟ್ಟಿಸಿದ್ದಾರೆ. ತವರು ಜಿಲ್ಲೆ ಮೈಸೂರಿನ ಅಭಿವೃದ್ಧಿ ಮಾಡಲು ತವಕಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ ಏ.26ರಂದು ನಡೆಯುವ ಚುನಾವಣೆಯಲ್ಲಿ ಹಸ್ತದ ಗುರುತಿಗೆ ಮತ ಹಾಕುವಂತೆ ಮನವಿ ಮಾಡಿದರು.

ಪ್ರಚಾರದಲ್ಲಿ ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರ ಅಧ್ಯಕ್ಷ, ಮಾಜಿ ಮೇಯರ್ ಅಯೂಬ್ ಖಾನ್, ಪಾಲಿಕೆ ಮಾಜಿ ಸದಸ್ಯರಾದ ಎಂ.ಶಿವಣ್ಣ, ಶೌಖತ್ ಪಾಶ, ಬ್ಲಾಕ್ ಕಾಂಗ್ರೆಸ್ ಹಾಲಿ, ಮಾಜಿ ಅಧ್ಯಕ್ಷರು, ವಿವಿಧ ಘಟಕಗಳ ಮುಖಂಡರು ಪಾಲ್ಗೊಂಡು ಗ್ಯಾರಂಟಿ ಕಾರ್ಡ್ ವಿತರಿಸಿ ಮತಯಾಚಿಸಿದರು.



ಚಾಮರಾಜನಗರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಸುನಿಲ್ ಬೋಸ್ ಪರ ಬದನವಾಳು ಗ್ರಾಮದಲ್ಲಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಮತಯಾಚಿಸಿದರು. ಕಾಂಗ್ರೆಸ್ ಯುವ ಮುಖಂಡ ಭರತ್ ರಾಮಸ್ವಾಮಿ, ಮುಡಾ ಮಾಜಿ ಸದಸ್ಯ ಸಿ.ಜಿ ಶಿವಕುಮಾರ್, ಮುಖಂಡ ಹೆಚ್.ಜಿ.ರಮೇಶ್, ಬದನವಾಳು ಬಸವಣ್ಣ ಇತರರಿದ್ದರು.

ಭಾರತದ ಅಸ್ಮಿತೆ ಉಳಿಸಲು ಪ್ರಧಾನಿ ಮೋದಿ ಬೆಂಬಲಿಸಿ

ಮಿಷನ್ ಮೋದಿ ಮತ್ತೊಮ್ಮೆ ಪಿಎಂ ಸಂಘಟನೆ ಕರೆ

ಮೈಸೂರು, ಏ.23(ಜಿಎ)-ಭಾರತೀಯತೆಯ ಅಸ್ಮಿತೆಯನ್ನು ಉಳಿಸಲು ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರನ್ನು ಮತ್ತೆ ಬೆಂಬಲಿಸಿ ಗೆಲ್ಲಿಸುವಂತೆ ಮಿಷನ್ ಮೋದಿ ಮತ್ತೊಮ್ಮೆ ಪಿಎಂ ಸಂಘಟನೆಯ ಮೈಸೂರು ಜಿಲ್ಲಾಧ್ಯಕ್ಷ ಲೋಕೇಶ್ ನಾಗಪ್ಪ ಕರೆ ನೀಡಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಳೆದ ಹತ್ತು ವರ್ಷಗಳಲ್ಲಿ ದೇಶದ ಸರ್ವಾಂಗೀಣ ಅಭಿವೃದ್ಧಿಗಾಗಿ ಸಾವಿರಾರು ಯೋಜನೆಗಳನ್ನು ಜಾರಿಗೆ ತಂದು ಅನುಷ್ಠಾನಗೊಳಿಸಿದ್ದಾರೆ ಎಂದರು.

ರೈತಾಪಿ ವರ್ಗದ ಹಿತ, ಮಹಿಳಾ ಸಬಲೀಕರಣ, ಯುವ ಶಕ್ತಿಗೆ ಮಾನ್ಯತೆ, ರಕ್ಷಣಾ ಕ್ಷೇತ್ರದಲ್ಲಿ ಸ್ವಾವಲಂಬನೆ, ಸುಸ್ಥಿರ ಆರ್ಥಿಕತೆ, ಸ್ವದೇಶಿ ಉತ್ಪನ್ನಗಳಿಗೆ ಬೆಂಬಲ ಹಾಗೂ ಮಾರುಕಟ್ಟೆ, ದೂರದರ್ಶಿತ್ವದ ವಿದೇಶಾಂಗ ನೀತಿ ಹೀಗೆ ಸರ್ವರಂಗಗಳಲ್ಲಿಯೂ ಅನುಪಮ ಸಾಧನೆಗೈದು ತಮ್ಮ ಇಡೀ ನಾಲ್ಕು ದಶಕಗಳ ರಾಜಕೀಯ ಜೀವನದಲ್ಲಿ ಭ್ರಷ್ಟಾಚಾರದ ಒಂದೇ ಒಂದು ಕಪ್ಪು ಚುಕ್ಕಿ ಇಲ್ಲದೇ ದೇಶದ ಏಳಿಗೆಗಾಗಿ ಶ್ರಮಿಸಿ, ಜಾಗತಿಕ ಮಟ್ಟದಲ್ಲಿ ಭಾರತದ ಘನತೆಯನ್ನು, ಹೆಚ್ಚಿಸಿರುವ ಪ್ರಧಾನಿ ನರೇಂದ್ರ ಮೋದಿಯವರು ಮತ್ತೊಮ್ಮೆ ಪ್ರಧಾನಿಯಾಗಬೇಕು ಎಂದರು.

ಮೈಸೂರು-ಕೊಡಗು ಲೋಕಸಭಾ ಅಭ್ಯರ್ಥಿಯಾಗಿ ಬಿಜೆಪಿಯಿಂದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಸ್ಪರ್ಧಿಸಿದ್ದು, ಮೈಸೂರು ಅರಸರ ಕೊಡುಗೆ ಈ ನಾಡಿಗೆ ಅಪಾರವಾದದ್ದು, ಯುವಕರು, ವಿದ್ಯಾವಂತರು ಹಾಗೂ ಸಮಾಜದ ಎಲ್ಲಾ ವರ್ಗಗಳ ಬಗ್ಗೆ ವಿಶೇಷ ಕಾಳಜಿ ಹೊಂದಿರುವ ಹಾಗೂ ಮೋದಿಯವರ ಸಾಧನೆಗಳಿಂದ ಪ್ರೇರಿತಗೊಂಡು ರಾಜಕೀಯ ಪ್ರವೇಶಿಸಿರುವ ಅವರನ್ನು ಹೆಚ್ಚಿನ ಮತಗಳ ಅಂತರದಿಂದ ಗೆಲ್ಲಿಸ ಬೇಕು ಎಂದು ಮನವಿ ಮಾಡಿದರು.

ಸುದ್ದಿಗೋಷ್ಠಿಯಲ್ಲಿ ಸಂಘಟನೆಯ ಮೈಸೂರು ವಿಭಾಗೀಯ ಅಧ್ಯಕ್ಷ ತಳಕಾನೆ ರಾಜೇಂದ್ರ, ಉಪಾಧ್ಯಕ್ಷ ಎಂ.ಸುರೇಶ್ ಬಾಬು, ಸಂಘಟನಾ ಕಾರ್ಯದರ್ಶಿ ಎಂ.ಜಿ.ರವಿಶಂಕರ್, ಕಾರ್ಯದರ್ಶಿ ವಿಷ್ಣು ನಾಚಪ್ಪ, ಮಹಿಳಾ ಘಟಕದ ಸುಮರಾವ್ ಉಪಸ್ಥಿತರಿದ್ದರು.



ಚಾಮರಾಜನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜ್ ಪರ ವರುಣಾ ಕ್ಷೇತ್ರ ವ್ಯಾಪ್ತಿಯ ರಂಗಸಮುದ್ರದಲ್ಲಿ ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ, ಮಾಜಿ ಶಾಸಕ ಅಶ್ವಿನ್ ಕುಮಾರ್ ಪ್ರಚಾರ ನಡೆಸಿದರು. ಈ ವೇಳೆ ವರುಣ ಹೋಬಳಿ ಜೆಡಿಎಸ್ ಅಧ್ಯಕ್ಷ ಬಾಬು ಕುಪ್ಪೇಗಾಲ, ನಾಡನಹಳ್ಳಿ ಮಧುಸೂದನ್, ಉಮೇಶ್ ಚಿಕ್ಕೇಗೌಡನಹುಂಡಿ ಉಪಸ್ಥಿತರಿದ್ದರು.

ಕಾಂಗ್ರೆಸ್‌ನಿಂದ ಕ್ರೈಸ್ತ ಸಮುದಾಯಕ್ಕೆ ಅನ್ಯಾಯ

ಬಿಜೆಪಿ ಬೆಂಬಲಿಸಲು ಕ್ರೈಸ್ತರ ಕ್ಷೇಮಾಭಿವೃದ್ಧಿ ಸಂಸ್ಥೆ ನಿರ್ಧಾರ

ಮೈಸೂರು, ಏ.23(ಜಿಎ)-ಕಾಂಗ್ರೆಸ್‌ನಿಂದ ಇದುವರೆಗೂ ಕ್ರೈಸ್ತ ಸಮುದಾಯಕ್ಕೆ ಅನ್ಯಾಯಗಳೇ ಆಗಿವೆ. ಆದರೆ ರಾಜ್ಯದಲ್ಲಿ ಬಿಜೆಪಿ ಅಧಿಕಾರದಲ್ಲಿದ್ದ ವೇಳೆ ಸಮುದಾಯಕ್ಕೆ ಅನೇಕ ಪ್ರಯೋಜನ ದೊರೆತಿರುವ ಕಾರಣ ಈ ಬಾರಿಯ ಲೋಕಸಭಾ ಚುನಾವಣೆ ವೇಳೆ ಸಮುದಾಯವು ಬಿಜೆಪಿ ಅಭ್ಯರ್ಥಿಗಳನ್ನು ಬೆಂಬಲಿಸಬೇಕೆಂದು ಬೆಂಗಳೂರಿನ ಕರ್ನಾಟಕ ಕ್ರೈಸ್ತರ ಸಾಮಾಜಿಕ ಕ್ಷೇಮಾಭಿವೃದ್ಧಿ ಸಂಸ್ಥೆಯ ಅಧ್ಯಕ್ಷ ಹ್ಯಾರಿ ಡಿಸೋಜಾ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬಿ.ಎಸ್.ಯಡಿಯೂರಪ್ಪ ಅವರು ಮುಖ್ಯಮಂತ್ರಿಗಳಾಗಿದ್ದ ಅವಧಿಯಲ್ಲಿ ಸಮುದಾಯದ ಸಮಗ್ರ ಅಭಿವೃದ್ಧಿಗಾಗಿ ಅಭಿವೃದ್ಧಿ ಸಮಿತಿ ರಚಿಸಿ, ನಾನಾ ರೀತಿಯ ಕಾರ್ಯಕ್ರಮ ಅನುಷ್ಠಾನಕ್ಕೆ ತಂದರು ಎಂದರು.

ಬಿಜೆಪಿಯಲ್ಲಿನ ಒಂದು ವಿಭಾಗಕ್ಕೆ ಅನಿಲ್ ಥಾಮಸ್ ಅವರನ್ನು ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಆದರೆ ಕಾಂಗ್ರೆಸ್ ಈ ರೀತಿಯ ಕೆಲಸ ಮಾಡಿಲ್ಲ. ಕ್ರೈಸ್ತ ಮುಖಂಡರಿಗೆ ನಿಗಮ ಮಂಡಳಿಗಳಲ್ಲಿ ಸ್ಥಾನ ನೀಡಿಲ್ಲ. ಚುನಾವಣೆ ಬಂದ ವೇಳೆ ಮಾತ್ರ ಪಕ್ಷಕ್ಕೆ ಕ್ರೈಸ್ತರು ನೆನಪಾಗುತ್ತದೆ. ಹೀಗಾಗಿ ಬಿಜೆಪಿ ಬೆಂಬಲಿಸಬೇಕೆಂದು ಸಮುದಾಯದವರಿಗೆ ಮನವಿ ಮಾಡಿದರು. ಸುದ್ದಿಗೋಷ್ಠಿಯಲ್ಲಿ ಸ್ಟಾನೆಸ್ ರಾಜಾ, ಜ್ಞಾನ ಪ್ರಕಾಶ್, ಡಾ.ಅಶೋಕ ಜೇವಿಯರ್, ಪ್ರಭು ಬಾಸ್ಕೊ ಉಪಸ್ಥಿತರಿದ್ದರು.



ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ನರಸಿಂಹರಾಜ ಕ್ಷೇತ್ರದಲ್ಲಿ ಪ್ರಚಾರ ನಡೆಸುವ ವೇಳೆ ಮೈಸೂರು ನಗರ ಬಿಜೆಪಿ ಪ್ರಧಾನ ಕಾರ್ಯದರ್ಶಿ ಗಿರಿಧರ್ ಅವರ ಮನೆಗೆ ಭೇಟಿ ನೀಡಿ, ಅಭಿನಂದನೆ ಸ್ವೀಕರಿಸಿದರು. ಈ ವೇಳೆ ಗಿರಿಧರ್ ಕುಟುಂಬ ಸಮೇತರಾಗಿ ಯದುವೀರ್ ಅವರನ್ನು ಗೌರವಿಸಿ, ಸತ್ಕರಿಸಿದರು.

ಸಿದ್ದರಾಮಯ್ಯ ನಾಯಕರ ಹಿತ ಕಾಪಾಡಿದ್ದಾರೆ; ಸಮುದಾಯ ಕಾಂಗ್ರೆಸ್ ಬೆಂಬಲಿಸಬೇಕು

ಹೆಚ್.ಡಿ.ಕೋಟೆ ಶಾಸಕ ಅನಿಲ್ ಕುಮಾರ್ ಮತದಾರರಲ್ಲಿ ಮನವಿ



ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರ ಶಾಸಕ ಅನಿಲ್ ಕುಮಾರ್ ಚಾಮುಂಡೇಶ್ವರಿ ಕ್ಷೇತ್ರದ ವಿವಿಧ ಗ್ರಾಮಗಳಲ್ಲಿ ಬಿರುಸಿನ ಪ್ರಚಾರ ನಡೆಸಿದರು.

ಮೈಸೂರು, ಏ.23(ಎಂಟಿವೈ)- ನಾಯಕ ಸಮುದಾಯದ ಯುವಕರು ಸ್ವ-ಉದ್ಯಮಿಗಳಾಗಿ ಮಾರ್ಪಡಲು ಶೇ.75ರಷ್ಟು ಸಬ್ಸಿಡಿ ನೀಡಿ ಭೂಮಿ ನೀಡುವುದೂ ಸೇರಿದಂತೆ ವಿವಿಧ ಯೋಜನೆಗಳನ್ನು ಜಾರಿಗೊಳಿಸುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ನಾಯಕ ಜನಾಂಗದ ಹಿತಕಾಪಾಡಿದ್ದಾರೆ. ಇನ್ನಷ್ಟು ಯೋಜನೆಗಳ ಅನುಷ್ಠಾನಕ್ಕಾಗಿ ಲೋಕಸಭಾ ಚುನಾವಣೆಯಲ್ಲಿ ನಾಯಕ ಸಮುದಾಯ ಕಾಂಗ್ರೆಸ್‌ಗೆ ಬೆಂಬಲ ನೀಡಬೇಕು ಎಂದು ಶಾಸಕ ಅನಿಲ್ ಕುಮಾರ್ ಮನವಿ ಮಾಡಿದ್ದಾರೆ.

ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಪರವಾಗಿ ಚಾಮುಂಡೇಶ್ವರಿ ಕ್ಷೇತ್ರದ ಇಲವಾಲ, ರಮ್ಮನಹಳ್ಳಿ, ಸಾಗರಕಟ್ಟೆ, ರಾಮನಹಳ್ಳಿ, ಕುಮಾರ ಬೀಡು, ಕಡಕೊಳ, ಸಿಂಧುವಳ್ಳಿ, ಟಿ. ಕಾಟೂರು, ಉದ್ಬೂರು ಗ್ರಾಮಗಳಲ್ಲಿ ಬಿರುಸಿನ ಪ್ರಚಾರ ನಡೆಸಿ ಮಾತನಾಡಿದ ಅವರು, ಮೈಸೂರು ಭಾಗದಲ್ಲಿ ನಾಯಕ ಸಮಾಜದ ಪರಿವಾರ, ತಳವಾರ ಪಂಗಡವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಲು 2014ರಲ್ಲಿ ಮುಖ್ಯಮಂತ್ರಿಯಾಗಿದ್ದ ಸಿದ್ದರಾಮಯ್ಯ ಕೇಂದ್ರಕ್ಕೆ ಶಿಫಾರಸ್ಸು ಮಾಡಿದ್ದರು. ಅಲ್ಲಿಯವರೆಗೂ ಪರಿವಾರ, ತಳವಾರ ಪಂಗಡದ ಜನರಿಗೆ ಸರ್ಕಾರದ ಸೌಲಭ್ಯ ಸಿಗುತ್ತಿರಲಿಲ್ಲ. ಸಿದ್ದರಾಮಯ್ಯ ಅವರು ಕಳುಹಿಸಿದ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರದ ಪರಿವಾರ, ತಳವಾರವನ್ನು ಪರಿಶಿಷ್ಟ ಪಂಗಡಕ್ಕೆ ಸೇರಿಸಿತು. ಇದರಿಂದ ಕಳೆದ ಹಲವು ವರ್ಷಗಳಿಂದ ಮೈಸೂರು ಭಾಗದಲ್ಲಿ ತೊಂದರೆ ಅನುಭವಿಸುತ್ತಿದ್ದ ಪರಿವಾರ, ತಳವಾರದ ಜನರಿಗೆ ನ್ಯಾಯ ಒದಗಿಸಿದ್ದಾರೆ ಎಂದರು.

ವಿಧಾನಸೌಧದ ಬಳಿ ಮಹರ್ಷಿ ವಾಲ್ಮೀಕಿ ಪ್ರತಿಮೆ ನಿರ್ಮಿಸಿ ಸಾಮಾಜಿಕ ನ್ಯಾಯ ಎತ್ತಿ ಹಿಡಿಸಿದ್ದಾರೆ. ವಾಲ್ಮೀಕಿ ಅಭಿವೃದ್ಧಿ ನಿಗಮದಿಂದ ಸಮುದಾಯದ ಫಲಾನುಭವಿಗಳು ಪಡೆದಿದ್ದ ಸಾಲ ಮನ್ನಾ ಮಾಡಿದ್ದಾರೆ. ಯುವಕರು ಸ್ವಯಂ ಉದ್ಯಮಿಗಳಾಗಲು ಶೇ.75 ಸಬ್ಸಿಡಿ ನೀಡಿ ಕೈಗಾರಿಕೆಗಳನ್ನು ಸ್ಥಾಪಿಸಲು ಭೂಮಿ ನೀಡುತ್ತಿದ್ದಾರೆ. ಬಿಜೆಪಿಯವರು ಬಿಜೆಪಿ ಕಚೇರಿಯಲ್ಲಿದ್ದ ಮಹರ್ಷಿ ವಾಲ್ಮೀಕಿ ಮತ್ತು ಡಾ.ಅಂಬೇಡ್ಕರ್ ಫೋಟೋಗಳನ್ನು ತೆಗೆದು ಹಾಕಿ ದ್ರೋಹ ಬಗೆದಿದ್ದಾರೆ. ಸಿದ್ದರಾಮಯ್ಯರವರು ಕೊಟ್ಟ ಐದು ಗ್ಯಾರಂಟಿಗಳಿಂದ ಜನರು ನೆಮ್ಮದಿಯಿಂದ ಇದ್ದಾರೆ. ಆದ್ದರಿಂದ ಸಿದ್ದರಾಮಯ್ಯರವರ ಕೈ ಬಲಪಡಿಸಲು ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ ಅವರಿಗೆ ಮತ ನೀಡಿ ಗೆಲ್ಲಿಸಬೇಕೆಂದು ಕೋರಿದರು. ಈ ಸಂದರ್ಭದಲ್ಲಿ ಜಿಲ್ಲಾ ಗ್ಯಾರಂಟಿ ಸಮಿತಿ ಅಧ್ಯಕ್ಷ ಅರುಣ್ ಕುಮಾರ್, ಜಿ.ಪಂ ಮಾಜಿ ಸದಸ್ಯ ಬೀರಿಹುಂಡಿ ಬಸವಣ್ಣ, ಮುಖಂಡರಾದ ದೇವರಾಜ್ ಟಿ. ಕಾಟೂರು, ಕೆಂಪನಾಯಕ, ಕೆ.ಎಸ್.ಕರೀಗೌಡ, ದ್ಯಾವಪ್ಪನಾಯಕ, ಸಿದ್ದಯ್ಯ, ಮಾದೇಗೌಡ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಬಿ. ಗುರುಸ್ವಾಮಿ, ಜಯರಾಮೇಗೌಡ, ಎಂ.ಸೋಮಣ್ಣ, ಸಿದ್ದರಾಜು, ಪರಶಿವಮೂರ್ತಿ, ಕುಮಾರ್, ರವಿ, ಸುರೇಶ್ ಇನ್ನಿತರರು ಪಾಲ್ಗೊಂಡಿದ್ದರು.

ಶಾಂತಿ-ಸೌಹಾರ್ದತೆ ಕದಡುವ ಶಕ್ತಿಯನ್ನು ಸೋಲಿಸುವಂತೆ ಕರೆ

ಮೈಸೂರು,ಏ.23(ಜಿಎ)-ಲೋಕಸಭಾ ಚುನಾವಣೆಯಲ್ಲಿ ಶಾಂತಿ-ಸೌಹಾರ್ದತೆಯನ್ನು ಕದಡುವ ಶಕ್ತಿಗಳನ್ನು ಸೋಲಿಸೋಣ ಎಂದು ಸೌಹಾರ್ದ ಕರ್ನಾಟಕ ಮತ್ತು ಪ್ರಗತಿಪರ ಚಿಂತಕರು ಸೇರಿದಂತೆ ವಿವಿಧ ಸಂಘಟನೆಗಳು ಕರೆ ನೀಡಿವೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸೌಹಾರ್ದ ಕರ್ನಾಟಕದ ಸಂಚಾಲಕ ಸಿ.ಬಸವಲಿಂಗಯ್ಯ ಮಾತನಾಡಿ, ದೇಶದಲ್ಲಿ ಜನರ ಪರವಾಗಿ ಶಾಂತಿ-ಸೌಹಾರ್ದತೆಗಳ ಪರವಾಗಿ ದನಿ ಎತ್ತಿದ ಸಾಹಿತಿ, ಚಿಂತಕರು, ಪತ್ರಕರ್ತರು, ಸೈದ್ಧಾಂತಿಕ ವಿರೋಧಿಗಳನ್ನು ದಮನಿಸುವ ನೀತಿಯನ್ನು ಆಳುವ ವರ್ಗ ಅನುಸರಿಸುತ್ತಿದೆ. ಇದ್ದರಿಂದ ಪ್ರಜಾಪ್ರಭುತ್ವದ ಮೌಲ್ಯಗಳಿಗೆ ಧಕ್ಕೆಯಾಗುತ್ತಿದೆ ಎಂದರು.

ಕಾರ್ಮಿಕರು, ರೈತರು, ದಲಿತರು, ಆದಿವಾಸಿಗಳು, ಮಹಿಳೆಯರು ಸಾಕಷ್ಟು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ದಲಿತರು, ಮಹಿಳೆಯರ ಮೇಲಿನ ದೌರ್ಜನ್ಯ ಹಾಗೂ ಹತ್ಯೆಗಳು ಹೆಚ್ಚುತ್ತಿವೆ. ನಿರುದ್ಯೋಗ ಸಮಸ್ಯೆಯಿಂದ ಯುವ ಸಮೂಹ ಕಂಗಾಲಾಗಿದೆ. ಸಮಾನತೆಯ ಆಶಯಕ್ಕನುಗುಣವಾಗಿ ಯೋಜನೆಗಳನ್ನು ರೂಪಿಸಿ, ಅನುಷ್ಠಾನಗೊಳಿಸುವ ಬದಲು ಭಾವ ಬಂಧುತ್ವದ ಭಾರತವನ್ನು ಭಾವೋದ್ರೇಕದ ಬೀಡಾಗಿ ರೂಪಾಂತರಿಸಲಾಗುತ್ತಿದೆ. ಆದ್ದರಿಂದ ನಮ್ಮ ಸೌಹಾರ್ದ ಜನ ಸಂಸ್ಕೃತಿಗೆ ಮಾರಕವಾದ ನೀತಿಗಳನ್ನು ಅನುಸರಿಸುತ್ತಿರುವ ಬಿಜೆಪಿ-ಜೆಡಿಎಸ್ ಕೂಟವನ್ನು ನಿರ್ಣಾಯಕವಾಗಿ ತಿರಸ್ಕರಿಸಬೇಕೆಂದು ಮನವಿ ಮಾಡಿದರು. ಗೋಷ್ಠಿಯಲ್ಲಿ ಲ.ಜಗನ್ನಾಥ್, ನೂರ್ ಮರ್ಚೆಂಟ್ ಇದ್ದರು.



ಮೈಸೂರಿನ ವಾರ್ಡ್ ನಂ.50ರ ಸುಣ್ಣದಕೇರಿಯಲ್ಲಿ ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಎಂ.ಲಕ್ಷ್ಮಣ್ ಪರ ಮನೆ ಮನೆಗೆ ತೆರಳಿ ಮತಯಾಚಿಸಲಾಯಿತು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕಾಡಾ ಮಾಜಿ ಸದಸ್ಯ ಕೃಷ್ಣ, ಮುಡಾ ಮಾಜಿ ಸದಸ್ಯ ಶಿವಮಲ್ಲು, ಪಾಲಿಕೆ ಮಾಜಿ ಸದಸ್ಯ ಜಾಕಿರ್ ಪಾಷಾ, ಆಶ್ರಯ ಸಮಿತಿ ಮಾಜಿ ಸದಸ್ಯ ನಾಸೀರ್, ಸೇವಾದಳ ಮಾಜಿ ಅಧ್ಯಕ್ಷ ಗಿರೀಶ್, ಕಾರ್ಯದರ್ಶಿ ಡೈರಿವೆಂಕಟೇಶ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಕಲೀಂ ಷರೀಫ್, ಸತೀಶ್, ಶೇಖರ್, ಬಸವಣ್ಣ, ಮಹ್ಮದ್ ಫಾರೂಖ್, ಪ್ರದೀಪ್ ಶಿವಕುಮಾರ್, ನವೀನ್, ಚಂದ್ರು, ಲಕ್ಷ್ಮೀಶ್, ಕೃಷ್ಣ, ರವಿ ಮತ್ತಿತರರು ಉಪಸ್ಥಿತರಿದ್ದರು.

ಅಂಬೇಡ್ಕರ್ ಸೋಲಿಸಿದ, ಕರ್ನಾಟಕದಲ್ಲಿ ದಲಿತರನ್ನು ಸಿಎಂ ಮಾಡದ ಕಾಂಗ್ರೆಸ್ ಬೆಂಬಲಿಸಬೇಡಿ

ಬಲಗೈ ಬಲವರ್ಧನೆ ಸಂದೇಶ ಸಭೆಯಲ್ಲಿ ದಲಿತ ಬಾಂಧವರಲ್ಲಿ ಮನವಿ

ಮೈಸೂರು, ಏ.23(ಬಿಎಲ್‌ಯು)- ಲೋಕಸಭಾ ಚುನಾವಣೆಯಲ್ಲಿ ಸಂವಿಧಾನ ಶಿಲ್ಪಿ ಡಾ.ಬಿ.ಆರ್.ಅಂಬೇಡ್ಕರ್ ಅವರನ್ನು ಸೋಲಿಸಿದ, ಕರ್ನಾಟಕದಲ್ಲಿ ಈ ತನಕ ದಲಿತರನ್ನು ಮುಖ್ಯಮಂತ್ರಿ ಮಾಡದ ಕಾಂಗ್ರೆಸ್ ಪಕ್ಷವನ್ನು ಬೆಂಬಲಿಸಬೇಡಿ ಎಂದು ಮಾಜಿ ಸಚಿವ ಎನ್.ಮಹೇಶ್ ಮನವಿ ಮಾಡಿದರು.

ಮೈಸೂರಿನ ವಿಜಯನಗರದ ಸಪ್ತಪದಿ ಕಲ್ಯಾಣ ಮಂಟಪದಲ್ಲಿ ಇಂದು ಬಿಜೆಪಿ ಆಯೋಜಿಸಿದ್ದ ಬಲಗೈ ಬಲವರ್ಧನೆ ಸಂದೇಶ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ದಲಿತರಿಗೆ ಮತದಾನ ಹಕ್ಕು ನೀಡಲು ಆರಂಭದಲ್ಲಿ ತೀವ್ರ ವಿರೋಧ ಮಾಡಿದ ಕಾಂಗ್ರೆಸ್‌ನ್ನು ನೀವು ಬೆಂಬಲಿಸಬೇಕೇ ಎಂದು ಪ್ರಶ್ನಿಸಿದರು.

ಲೋಕಸಭಾ ಚುನಾವಣೆಯಲ್ಲಿ ಸ್ಪರ್ಧಿಸಿದ್ದ ಅಂಬೇಡ್ಕರ್ ಅವರನ್ನು ಇದೇ ಕಾಂಗ್ರೆಸ್‌ನವರು ಸೋಲಿಸಿದರು. ಅಷ್ಟೇ ಅಲ್ಲದೆ ಅಂಬೇಡ್ಕರ್ ಮೃತಪಟ್ಟ ಸಂದರ್ಭದಲ್ಲಿ ಅವರ ಅಂತ್ಯಸಂಸ್ಕಾರಕ್ಕೆ ಜಾಗ ಕೂಡ ನೀಡಲಿಲ್ಲ. ದಲಿತ ಸಮುದಾಯದ ಪರವಾಗಿ ಕ್ರಾಂತಿಕಾರಿ ಹೋರಾಟ ಮಾಡಿದ ಅಂಬೇಡ್ಕರ್ ಅವರ ಬಗ್ಗೆ ಅಗೌರವ ತೋರಿದ್ದ ಕಾಂಗ್ರೆಸ್ ಅನ್ನು ನೀವು ಈಗ ಬೆಂಬಲಿಸಬೇಕೆ ಎಂದು ಮಹೇಶ್ ಮರು ಪ್ರಶ್ನಿಸಿದರು.



ಅಂಬೇಡ್ಕರ್ ಬದುಕಿದ್ದಾಗ ಅವರಿಗೆ ಕಾಂಗ್ರೆಸ್ ಭಾರತ ರತ್ನ ನೀಡಲಿಲ್ಲ. ಆದರೆ ಬಿಜೆಪಿ ಮರಣೋತ್ತರ ಭಾರತ ರತ್ನ ನೀಡಿತು. ಆದರೆ ಈಗ ಅಂಬೇಡ್ಕರ್ ಬಗ್ಗೆ ಕಾಂಗ್ರೆಸ್ ಮೆಚ್ಚುಗೆಯ ಮಾತುಗಳನ್ನಾಡುತ್ತಿದ್ದು, ಇದಕ್ಕೆ ಮರುಳಾಗಿ ಕಾಂಗ್ರೆಸ್ ಪಕ್ಷವನ್ನು ಯಾವುದೇ ಕಾರಣಕ್ಕೂ ನಂಬಬೇಡಿ ಎಂದು ಸಲಹೆ ನೀಡಿದರು.

ಇಷ್ಟು ವರ್ಷಗಳ ಕಾಲ ಕರ್ನಾಟಕದಲ್ಲಿ ಆಡಳಿತ ನಡೆಸಿದ ಕಾಂಗ್ರೆಸ್ ಪಕ್ಷ ದಲಿತರನ್ನು ಮುಖ್ಯಮಂತ್ರಿ ಮಾಡದೆ ಮೂಗಿಗೆ ತುಪ್ಪ ಸವರುತ್ತಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು. ದಲಿತ ಸಮುದಾಯಕ್ಕೆ ಮೈಸೂರು ಸಂಸ್ಥಾನ ಬಹಳಷ್ಟು ಕೊಡುಗೆ ನೀಡಿದೆ. ಶಿಕ್ಷಣ ಹಾಗೂ ಭೂಮಿ ಹಂಚಿಕೆಯಲ್ಲಿ ಮೈಸೂರು ಮಹಾರಾಜರು ಮೀಸಲಾತಿ ನೀಡಿದ್ದಾರೆ. ಅಸ್ಪೃಶ್ಯತೆ ಹೋಗಲಾಡಿಸಲು ನಾಲ್ವಡಿ ಕೃಷ್ಣರಾಜ ಒಡೆಯರ್ ಮೈಸೂರು ಅರಮನೆಗೆ ಪ್ರವೇಶ ನೀಡಿದರು. ಅಸ್ಪೃಶ್ಯರಿಗಾಗಿಯೇ 800 ಶಾಲೆ ತೆರೆದರು. ಪ್ರಜಾ ಪ್ರತಿನಿಧಿ ಸಭೆಯಲ್ಲಿ 8 ದಲಿತರಿಗೆ ಮೀಸಲಾತಿ ನೀಡಿದರು. ತಮ್ಮ ಆಡಳಿತಾವಧಿಯಲ್ಲಿ ಭೂ ಸುಧಾರಣೆ ಯೋಜನೆ ಜಾರಿಗೆ ತಂದು ದಲಿತರಿಗೆ ಜಮೀನು ನೀಡಿದರು. ಈಗ ಅವರ ವಂಶಸ್ಥರಾದ ಯದುವೀರ್ ಚುನಾವಣೆಯಲ್ಲಿ ಸ್ಪರ್ಧಿಸಿದ್ದು, ರಾಜರು ನೀಡಿದ ಕೊಡುಗೆ ಸ್ಮರಿಸಿ ಬಿಜೆಪಿ ಬೆಂಬಲಿಸಿ ಎಂದು ಮಹೇಶ್ ಮನವಿ ಮಾಡಿದರು.

ಈ ವೇಳೆ ಮಾತನಾಡಿದ ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ ಸರ್ಕಾರದಲ್ಲಿ ದಲಿತ ಸಮುದಾಯದ ಯೋಜನೆಗಳಿಗೆ ಮೀಸಲಿಟ್ಟ 25 ಸಾವಿರ ಕೋಟಿ ರೂ. ಗಳನ್ನು ಮುಖ್ಯಮಂತ್ರಿ ಸಿದ್ದ ರಾಮಯ್ಯ ಗ್ಯಾರಂಟಿ ಯೋಜನೆ ಗಳಿಗೆ ಬಳಸಿಕೊಂಡಿದ್ದಾರೆ. ಇಂತಹ ದಲಿತ ವಿರೋಧಿ ನೀತಿ ತಳೆದಿರುವ ಕಾಂಗ್ರೆಸ್ ಪಕ್ಷವನ್ನು ಯಾವುದೇ ಕಾರಣಕ್ಕೆ ಬೆಂಬಲಿಸಬೇಡಿ ಎಂದರು.

ಮೈಸೂರು ಮಹಾರಾಜರು ಅಂಬೇಡ್ಕರ್‌ಗೆ ನೀಡಿದ್ದ ಭೂಮಿ ನುಂಗಿದರು

ಮೈಸೂರು ಮಹಾರಾಜರು ಹಾಗೂ ಡಾ.ಅಂಬೇಡ್ಕರ್ ನಡುವೆ ಉತ್ತಮ ಬಾಂಧವ್ಯವಿತ್ತು. ಈ ಹಿನ್ನೆಲೆಯಲ್ಲಿ ದಲಿತ ಸಮುದಾಯದ ಅಭಿವೃದ್ಧಿಗಾಗಿ ಮೈಸೂರು ಮಹಾರಾಜರು ಅಂಬೇಡ್ಕರ್ ಅವರಿಗೆ ಬೆಂಗಳೂರಿನಲ್ಲಿ 5 ಎಕರೆ ಜಮೀನು ನೀಡಿದ್ದರು. ಆದರೆ ನಮ್ಮಲ್ಲೆ ಇರುವ ಕೆಲವು ನುಂಗಣ್ಣರು ಆ ಜಾಗ ಕಬಳಿಸಿದರು. ಈಗ 5 ಎಕರೆ ಜಾಗದಲ್ಲಿ ಕೇವಲ 1 ಎಕರೆ ಜಾಗ ಮಾತ್ರ ಉಳಿದಿದೆ ಎಂದು ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಆರೋಪಿಸಿದರು. ದಲಿತ ಸಮುದಾಯದ ಬಗ್ಗೆ ಮೈಸೂರು ಮಹಾರಾಜರಿಗೆ ವಿಶೇಷ ಕಾಳಜಿ ಎಷ್ಟಿತ್ತು ಎಂಬುದನ್ನು ಇದು ತೋರಿಸುತ್ತದೆ. ಆದ ಕಾರಣ ಮೈಸೂರು ರಾಜಮನೆತನದ ಋಣ ತೀರಿಸುವ ಕಾಲ ಈಗ ಬಂದಿದ್ದು, ಯದುವೀರ್ ಬೆಂಬಲಿಸಿ ಎಂದು ಮನವಿ ಮಾಡಿದರು. ಬಿಜೆಪಿ ಅಧಿಕಾರಕ್ಕೆ ಬಂದರೆ ಸಂವಿಧಾನ ಬದಲಾವಣೆ ಮಾಡುತ್ತದೆ ಎಂದು ಕಾಂಗ್ರೆಸ್ ಆರೋಪಿಸುತ್ತಿದೆ. ಸಂವಿಧಾನದ ಬಗ್ಗೆ ಗೌರವವಿದ್ದರೆ ಜಮ್ಮು-ಕಾಶ್ಮೀರದಲ್ಲಿ ಸಂವಿಧಾನವನ್ನು ಏಕೆ ಸಮರ್ಪಕವಾಗಿ ಜಾರಿಗೊಳಿಸಲಿಲ್ಲ ಎಂದು ಪ್ರಶ್ನಿಸಿದರು. ದಲಿತ ಸಮುದಾಯದ ಬಗ್ಗೆ ಕಾಂಗ್ರೆಸ್ ಹೇಳುವ ಮಾತೆಲ್ಲಾ ಸುಳ್ಳು. ಆದರೆ ಬಿಜೆಪಿ ಸರ್ಕಾರ ತನ್ನ ಅಧಿಕಾರಾವಧಿಯಲ್ಲಿ ದಲಿತ ಸಮುದಾಯಕ್ಕೆ ಬಹಳಷ್ಟು ಕೊಡುಗೆ ನೀಡಿದ್ದು, ಇದನ್ನು ಸ್ಮರಿಸಿ ಬಿಜೆಪಿ ಬೆಂಬಲಿಸಿ ಎಂದು ನಾರಾಯಣಸ್ವಾಮಿ ಮನವಿ ಮಾಡಿದರು.



ಪ್ರಜಾಪ್ರಭುತ್ವ ಉಳಿವಿಗೆ ಇದು ಕೊನೆ ಚುನಾವಣೆ

• ಅಧಿಕಾರದಿಂದ ಬಿಜೆಪಿ ಹೊರಗಿಡಬೇಕು • ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹೇಳಿಕೆ



ಮಡಿಕೇರಿಯ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಕಾಂಗ್ರೆಸ್ ಪರಿಶಿಷ್ಟ ಜಾತಿ ಸಮಾವೇಶದಲ್ಲಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಅವರಿಗೆ ಅಂಬೇಡ್ಕರ್ ಭಾವಚಿತ್ರ ನೀಡಲಾಯಿತು.

ಮಡಿಕೇರಿ, ಏ.23–ಸಂವಿಧಾನ ನಾಶಪಡಿಸುವ ಅಜೆಂಡಾ ಹೊಂದಿರುವ ಬಿಜೆಪಿಯನ್ನು ಅಧಿಕಾರದಿಂದ ಹೊರಗಿಟ್ಟು ಪ್ರಜಾಪ್ರಭುತ್ವ ವ್ಯವಸ್ಥೆ ಉಳಿಸಿಕೊಳ್ಳಲು ಇದು ಕೊನೆಯ ಲೋಕಸಭಾ ಚುನಾವಣೆಯಾಗಿದೆ ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ತಿಳಿಸಿದರು.

ನಗರದ ಅಂಬೇಡ್ಕರ್ ಭವನದಲ್ಲಿ ಆಯೋಜಿಸಿದ್ದ ಕೊಡಗು ಜಿಲ್ಲಾ ಕಾಂಗ್ರೆಸ್ ಪರಿಶಿಷ್ಟ ಜಾತಿ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಮತ ಎಂದರೆ ಹಕ್ಕು ಮತ್ತು ಕರ್ತವ್ಯವಾಗಿದೆ. ಈ ರಾಷ್ಟ್ರದ ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಸಂವಿಧಾನದ ಪರವಾಗಿರುವವರನ್ನು ಆಯ್ಕೆ ಮಾಡಲು ಮತ ಚಲಾಯಿಸಬೇಕು ಎಂದು ಮನವಿ ಮಾಡಿದರು.

ಧರ್ಮ ಸಂಸತ್ ಹುನ್ನಾರ: ಬಾಬಾ ಸಾಹೇಬ್ ಡಾ.ಅಂಬೇಡ್ಕರ್ ಅವರು ಈ ರಾಷ್ಟ್ರಕ್ಕೆ ನೀಡಿರುವ ಸಂವಿಧಾನದ ವಿರುದ್ಧವಾಗಿ 1947ರಲ್ಲಿ ಜನಸಂಘ ತನ್ನದೇ ಆದ 'ಜನ ಸಂಘಿ ಸಂವಿಧಾನ' ವನ್ನು ಮಾಡಿಕೊಂಡಿತ್ತು. ಆ ಮೂಲಕ ದೇಶದಲ್ಲಿ ಧರ್ಮ ಸಂಸತ್ ಹೇರುವ ಪ್ರಯತ್ನಿಸಲಾಗುತ್ತಿದೆ. ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದಿಂದ ಇದರ ಭಾಗವಾಗಿಯೇ ಒಂದು ದೇಶ–ಒಂದು ಚುನಾವಣೆ ಎನ್ನುವ ಸರ್ವಾಧಿಕಾರಿ ಧೋರಣೆ ಆಗುತ್ತಿದೆ ಎಂದು ಆರೋಪಿಸಿದರು.

ಕಾಂಗ್ರೆಸ್ ಎಂದಿಗೂ ಸಂವಿಧಾನದ ತಂಟೆಗೆ ಹೋಗುವುದಿಲ್ಲ. 1995ರಲ್ಲಿ ಪ್ರಧಾನಿಯಾದ್ದ ಅಟಲ್ ಬಿಹಾರಿ ವಾಜಪೇಯಿ ಅವರು ಸಂವಿಧಾನದ ಪರಾಮರ್ಶೆಗೆ ಮುಂದಾಗಿದ್ದರು. ಅದು ಜಾರಿಯಾಗದಂತೆ ಕಾಂಗ್ರೆಸ್ ತೀವ್ರ ವಿರೋಧ ವ್ಯಕ್ತಪಡಿಸಿತ್ತು ಎಂದು ತಿಳಿಸಿದರು.

ಸ್ವಾಭಿಮಾನದ ಬದುಕಿನ ವ್ಯವಸ್ಥೆ: ಸಂವಿಧಾನ ಬದ್ಧವಾದ ಪ್ರಜಾಪ್ರಭುತ್ವ ಎಂದರೆ, ಸಮಾಜದ ಬಲಹೀನ ಸಮುದಾಯಗಳಿಗೆ ಬಲ ತುಂಬುವ ವ್ಯವಸ್ಥೆಯಾಗಿದೆ. ಅಂಬೇಡ್ಕರ್ ಸಂವಿಧಾನ ರಚನೆ ಮೂಲಕ ರಾಷ್ಟ್ರದ ಎಲ್ಲಾ ಸಮುದಾಯಗಳಿಗೆ ಸರ್ವ ಸಮಾನ ಹಕ್ಕುಗಳೊಂದಿಗೆ ಸಮ ಸಮಾಜ ನಿರ್ಮಾಣಕ್ಕೆ ಪೂರಕವಾದ ಅಂಶಗಳನ್ನು ನೀಡಿದ್ದಾರೆ. ಇಂತಹ ವ್ಯವಸ್ಥೆಯನ್ನು ಹಾಳುಗೆಡವಿ ಮನುವಾದವನ್ನು ಜಾರಿಗೊಳಿಸುವ ಯತ್ನ ಬಿಜೆಪಿಯಿಂದ ನಡೆಯುತ್ತಿದೆ. ಇದು ಜಾರಿಯಾದಲ್ಲಿ ದೇಶದ ಬಹು ಸಂಖ್ಯಾತ ಶೋಷಿತ ಸಮುದಾಯಗಳು ಕೇವಲ ಶೇ.2.5ರಷ್ಟಿರುವ ಬಲಾಢ್ಯ ಸಮುದಾಯಗಳ ಸೇವೆ ಮಾಡುವ ಪರಿಸ್ಥಿತಿ ನಿರ್ಮಾಣವಾಗುತ್ತದೆ ಎಂದು ಹೇಳಿದರು.

ಮಡಿಕೇರಿ ನಗರಸಭಾ ಮಾಜಿ ಅಧ್ಯಕ್ಷ ಹೆಚ್.ಎಂ.ನಂದ ಕುಮಾರ್ ಮಾತನಾಡಿ, ಸಂವಿಧಾನ ಬದಲಾವಣೆಯ ಚಿಂತನೆ ಹಿನ್ನೆಲೆಯಲ್ಲಿ ಬಿಜೆಪಿ ಈ ಬಾರಿ 370 ಸ್ಥಾನಗಳ ಪಡೆಯುವ ಗುರಿ ಹೊಂದಿದೆ. ಸಂವಿಧಾನದ ಬದಲಾವಣೆಯಿಂದ ಪ್ರಜಾಪ್ರಭುತ್ವ ವ್ಯವಸ್ಥೆ ನಾಶವಾಗಿ ಸಮಾನತೆ ಮಾಯವಾಗಿ ಗುಲಾಮಗಿರಿ ಉಂಟಾಗುತ್ತದೆ. ಈ ಹಿನ್ನೆಲೆಯಲ್ಲಿ ಸಂವಿಧಾನ ರಕ್ಷಣೆಗೆ ಕಾಂಗ್ರೆಸ್ ಬೆಂಬಲಿಸಬೇಕು ಎಂದು ಮನವಿ ಮಾಡಿದರು.

ಸಮಾವೇಶದಲ್ಲಿ ಶಾಸಕ ಡಾ. ಮಂತರ್‌ಗೌಡ, ಕಾಂಗ್ರೆಸ್ ಜಿಲ್ಲಾಧ್ಯಕ್ಷ ಧರ್ಮಜ ಉತ್ತಪ್ಪ, ಮಾಜಿ ಎಂಎಲ್‌ಸಿ ವೀಣಾ ಅಚ್ಚಯ್ಯ, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಪಿ.ಚಂದ್ರಕಲಾ, ಪ್ರಚಾರ ಸಮಿತಿ ಅಧ್ಯಕ್ಷ ಟಿ.ಪಿ.ರಮೇಶ್, ಕಾಂಗ್ರೆಸ್ ಮಾಜಿ ಜಿಲ್ಲಾಧ್ಯಕ್ಷ ಕೆ.ಕೆ. ಮಂಜುನಾಥ್ ಕುಮಾರ್, ಜಿಪಂ ಮಾಜಿ ಅಧ್ಯಕ್ಷ ಪಾಪು ಸಣ್ಣಯ್ಯ, ಪ್ರಮುಖರಾದ ವಿ.ಪಿ.ಶಶಿಧರ್, ರಾಜೇಶ್ ಯಲ್ಲಪ್ಪ, ಸುರಯ್ಯ ಅಬ್ರಾರ್, ಕೆ.ಎಂ. ಲೋಕೇಶ್, ಹಂಸ, ಯಾಕೂಬ್, ಮಂಜುನಾಥ್ ಗುಂಡೂರಾವ್, ಸೂರಜ್ ಹೊಸೂರು, ತೆನ್ನಿರ ಮೈನಾ, ಕಾನೆಹಿತ್ಲು ಮೊಣ್ಣಪ್ಪ, ಕೆ.ಈ.ಸುರೇಶ್, ಮುತ್ತುರಾಜ್, ಪಾಲಾಕ್ಷ, ಜೋಸೆಫ್ ಮತ್ತಿತರರು ಉಪಸ್ಥಿತರಿದ್ದರು.

ಕಾಡಾನೆ ದಾಳಿ: ಕಾರು, ಶೆಡ್ ಜಖಂ



ನಾಪೋಕ್ಲು, ಏ.23–ಸಮೀಪದ ನೆಲಜಿ ಗ್ರಾಮದಲ್ಲಿ ಸೋಮವಾರ ಮುಂಜಾನೆ ಕಾಡಾನೆ ಮನೆಯ ಶೆಡ್‌ನಲ್ಲಿ ನಿಲ್ಲಿಸಿದ್ದ ಕಾರನ್ನು ಜಖಂಗೊಳಿಸಿದೆ. ಗ್ರಾಮದ ಕೈಬುಲಿರ ದಿನೇಶ್ ಕಾವೇರಪ್ಪ ಅವರ ಮನೆಯ ಶೆಡ್ ಮೇಲೆ ದಾಳಿ ನಡೆಸಿದ ಆನೆ ಕಾರನ್ನು ಜಖಂಗೊಳಿಸಿದೆ. ದಿನೇಶ್ ಕಾವೇರಪ್ಪ ಮುಂಜಾನೆ ಆನೆ ಘೀಳಿಡುವ ಶಬ್ದ ಕೇಳಿ ಮನೆ ಬಾಗಿಲು ತೆಗೆದು ಹೊರಬಂದು ನೋಡಿದಾಗ ಮರಿ ಆನೆ ಸೇರಿ ಮೂರು ಕಾಡಾನೆಗಳು ಪತ್ತೆಯಾಗಿವೆ. ಅರಣ್ಯ ಸಿಬ್ಬಂದಿ ಭೇಟಿ ನೀಡಿ, ಸ್ಥಳ ಪರಿಶೀಲಿಸಿದರು.

ವಿರಾಜಪೇಟೆಯಲ್ಲಿ ಹನುಮ ಜಯಂತಿ



ವಿರಾಜಪೇಟೆಯ ಚತ್ರಕೆರೆ ಬಳಿಯ ವೀರಾಂಜನೇಯಸ್ವಾಮಿ ದೇವಾಲಯದಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ವಿರಾಜಪೇಟೆ, ಏ.23–ನಗರದ ಚತ್ರಕೆರೆ ಬಳಿಯ ಶ್ರೀ ವೀರಾಂಜನೇಯಸ್ವಾಮಿ ದೇವಾಲಯದಲ್ಲಿ ಹನುಮ ಜಯಂತಿ ಆಚರಿಸಲಾಯಿತು. ಹನುಮ ಜಯಂತಿ ಪ್ರಯುಕ್ತ ದೇವಾಲಯದಲ್ಲಿ ಬೆಳಗ್ಗೆಯಿಂದಲೇ ವಿಶೇಷ ಪೂಜೆ ನಡೆದವು. ಮಧ್ಯಾಹ್ನ ಮಹಾಪೂಜೆ ಬಳಿಕ ಪ್ರಸಾದ ವಿತರಣೆ ಹಾಗೂ ಅನ್ನಸಂತರ್ಪಣೆ ಏರ್ಪಡಿಸಲಾಗಿತ್ತು. ಈ ವೇಳೆ ವಿನಾಯಕ ಭಜನಾ ಮಂಡಳಿ ಸದಸ್ಯರಿಂದ ದೇವರ ನಾಮಕೀರ್ತನೆ ನಡೆಸಲಾಯಿತು. ದೇವಾಲಯ ಆಡಳಿತ ಮಂಡಳಿ ಅಧ್ಯಕ್ಷರು ಮತ್ತು ಸದಸ್ಯರು ಹಾಗೂ ನೂರಾರು ಭಕ್ತರು ಭಾಗವಹಿಸಿದ್ದರು.

ಹುಲಿ ದಾಳಿಗೆ 2 ಜಾನುವಾರು ಬಲಿ



ಅರಣ್ಯಾಧಿಕಾರಿಗಳನ್ನು ರೈತ ಸಂಘದ ಮುಖಂಡರು ತರಾಟೆ ತೆಗೆದುಕೊಂಡರು.

ಮಡಿಕೇರಿ, ಏ.23–ಹುಲಿ ದಾಳಿಗೆ ಎರಡು ಜಾನುವಾರುಗಳು ಬಲಿಯಾಗಿರುವ ಘಟನೆ ಪೊನ್ನಂಪೇಟೆ ತಾಲೂಕಿನ ನಿಟ್ಟೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ವಡ್ಡರಮಾಡಿನಲ್ಲಿ ಸೋಮವಾರ ರಾತ್ರಿ ನಡೆದಿದೆ.

ವಡ್ಡರಮಾಡು ಗ್ರಾಮದ ಪಟ್ಟಡ ಬೋಪಯ್ಯ ಅವರಿಗೆ ಸೇರಿದ ಎರಡು ಹಸುಗಳನ್ನು ಹುಲಿ ಬಲಿ ಪಡೆದಿದೆ.

ಮಂಗಳವಾರ ಸ್ಥಳಕ್ಕೆ ಆಗಮಿಸಿದ ಅರಣ್ಯಾಧಿಕಾರಿಗಳನ್ನು ರಾಜ್ಯ ರೈತ ಸಂಘದ ಪ್ರಮುಖರು ತೀವ್ರ ತರಾಟೆಗೆ ತೆಗೆದುಕೊಂಡರು. ಹಸುಗಳನ್ನು ಕಳೆದುಕೊಂಡ ಮಾಲೀಕರಿಗೆ ಸ್ಥಳದಲ್ಲೇ ಸೂಕ್ತ ಪರಿಹಾರ ನೀಡುವಂತೆ ಪಟ್ಟುಹಿಡಿದರು. ನಂತರ ಸೂಕ್ತ ಪರಿಹಾರ ನೀಡಲು ಅರಣ್ಯಾಧಿಕಾರಿಗಳು ಒಪ್ಪಿದರು.

ರೈತ ಸಂಘದ ಜಿಲ್ಲಾ ಕಾರ್ಯದರ್ಶಿ ಚಟ್ರುಮಾಡ ಸುಜಯ್ ಬೋಪಯ್ಯ, ಸಂಘದ ಮಾಯಮುಡಿ ಗ್ರಾಮದ ಅಧ್ಯಕ್ಷ ಪುಚ್ಚಿಮಾಡ ರಾಯ್ ಮಾದಪ್ಪ, ನಿಟ್ಟೂರು ಗ್ರಾಮದ ಅಧ್ಯಕ್ಷ ಲೆಹರ್ ಬಿದ್ದಪ್ಪ, ಗ್ರಾಪಂ ಉಪಾಧ್ಯಕ್ಷ ಚೆಕ್ಕೇರ ಸೂರ್ಯ, ಮಲಚೀರ ಗಿರೀಶ್, ಮಲಚೀರ ಅಶೋಕ್, ತಿತಿಮತಿ ವಲಯದ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ ಗೋಪಾಲ್, ಸಿಬ್ಬಂದಿ ಹಾಜರಿದ್ದರು.

ಮೋದಿ ಅಭಿವೃದ್ಧಿ ಟ್ರೈಲರ್ ಕೊಟ್ಟರೆ, ರಾಜ್ಯ ಸರ್ಕಾರ ತಾಲಿಬಾನ್ ಟ್ರೈಲರ್ ಕೊಟ್ಟಿದೆ

ಕಾಂಗ್ರೆಸ್ ಸರ್ಕಾರದ ವಿರುದ್ಧ ಸಿ.ಟಿ.ರವಿ ಗುಡುಗು



ಮಂಡ್ಯ, ಏ.23– ದೇಶದ ಜನಕ್ಕೆ ಪ್ರಧಾನಿ ನರೇಂದ್ರ ಮೋದಿ ಅಭಿವೃದ್ಧಿಯ ಟ್ರೈಲರ್ ಕೊಟ್ಟಿದ್ದರೆ, ರಾಜ್ಯದಲ್ಲಿ ಕಾಂಗ್ರೆಸ್ ನೇತೃತ್ವದ ಸರ್ಕಾರ ತಾಲಿಬಾನ್ ಟ್ರೈಲರ್ ಕೊಟ್ಟಿದೆ ಎಂದು ಬಿಜೆಪಿ ಮಾಜಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ಲೇವಡಿ ಮಾಡಿದರು.

ಮಂಗಳವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ರಾಜ್ಯದ ಜನರ ಹಿತಕ್ಕಿಂತ ಓಟ್ ಬ್ಯಾಂಕ್ ರಾಜಕಾರಣವೇ ಕಾಂಗ್ರೆಸ್‌ಗೆ ಮುಖ್ಯವಾಗಿದೆ ಸರ್ವ ಜನಾಂಗದ ಶಾಂತಿಯ ತೋಟವಾದ ಕರ್ನಾಟಕವನ್ನು ಕಾಂಗ್ರೆಸ್ ಅಶಾಂತಿಯ ತೋಟವನ್ನಾಗಿ ಮಾಡುತ್ತಿದೆ ಎಂದು ಕಿಡಿಕಾರಿದರು.

ಕಳೆದ ಒಂದು ತಿಂಗಳಿನಿಂದ ಕರ್ನಾಟಕದಲ್ಲಿ ಸಾಕಷ್ಟು ಅಶಾಂತಿ ವಾತಾವರಣ ನಿರ್ಮಾಣವಾಗಿದೆ. ರಾಮನವಮಿಯಂದು ಬೆಂಗಳೂರಿನಲ್ಲಿ ಯುವಕನನ್ನು ಅಡ್ಡಗಟ್ಟಿ ಅಲ್ಲಾ ಹು ಅಕ್ಬರ್ ಎಂದು ಘೋಷಣೆ ಕೂಗುವಂತೆ ಆತನ ಮೇಲೆ ಹಲ್ಲೆ ಮಾಡಲಾಗಿದೆ. ಮೋದಿ ಪರ ಗೀತೆ ರಚನೆ ಮಾಡಿದ್ದಕ್ಕೆ ಮೈಸೂರಿನಲ್ಲಿ ಹಿಂದೂ ಯುವಕನ ಮೇಲೆ ಮಾರಣಾಂತಿಕ ಹಲ್ಲೆ ನಡೆದಿದೆ. ಹುಬ್ಬಳ್ಳಿಯಲ್ಲಿ ಸಾವಿರಾರು ವಿದ್ಯಾರ್ಥಿಗಳಿರುವ ಕಾಲೇಜಿನ ಮುಂಭಾಗದಲ್ಲಿ ದುಷ್ಕರ್ಮಿಯೋರ್ವ ನೇಹಾ ಎಂಬ ವಿದ್ಯಾರ್ಥಿನಿಗೆ 13 ಬಾರಿ ಇರಿದು ಕೊಂದಿದ್ದಾನೆ. ಯಾದಗಿರಿಯಲ್ಲಿ ದಲಿತ ಯುವಕನನ್ನು ಮನೆಯಿಂದ ಹೊರಗೆಳೆದು ಅನ್ಯ ಕೋಮಿನವರು ಹಲ್ಲೆ ಮಾಡಿದ್ದಾರೆ. ವಿಧಾನಸೌಧದಲ್ಲಿ ಪಾಕಿಸ್ತಾನದ ಪರ ಘೋಷಣೆ ಕೂಗಲಾಗುತ್ತದೆ. ಚಿತ್ರನಟಿ ಹರ್ಷಿಕಾ ಪೂಣಚ್ಚ ದಂಪತಿ ಕನ್ನಡದಲ್ಲಿ ಮಾತನಾಡಿದ್ದಕ್ಕೆ ಅವರ ವಿರುದ್ಧ ಅವಾಚ್ಯ ಶಬ್ಧಗಳಿಂದ ಅನ್ಯ ಕೋಮಿನವರು ನಿಂದಿಸುತ್ತಾರೆ. ಕರ್ನಾಟಕದಲ್ಲಿ ನಿಜಕ್ಕೂ ಕಾನೂನು ಸುವ್ಯವಸ್ಥೆ ಇದೆಯೇ ಎಂದು ಪ್ರಶ್ನಿಸಿದರು.

ಸುದ್ದಿಗೋಷ್ಠಿಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಇಂದ್ರೇಶ್, ಸಿ.ಪಿ.ಉಮೇಶ್, ಅಶೋಕ್ ಜಯರಾಂ, ಎಸ್.ಪಿ.ಸ್ವಾಮಿ, ವಸಂತ್ ಕುಮಾರ್, ಅರುಣ್‌ಕುಮಾರ್ ಇದ್ದರು.

ನಾಗಮಂಗಲದಲ್ಲಿ ದರ್ಶನ್ ಅದ್ದೂರಿ ರೋಡ್ ಶೋ

ಚಲುವರಾಯಸ್ವಾಮಿ ಋಣ ನಮ್ಮ ಮೇಲಿದೆ, ಸ್ಟಾರ್‌ಚಂದ್ರು ಗೆಲ್ಲಿಸಿ: ದರ್ಶನ್

ನಾಗಮಂಗಲ, ಏ.23– ಮಂಡ್ಯ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್‌ಚಂದ್ರು) ಅವರ ಪರ ನಟ ಚಾಲೆಂಜಿಂಗ್ ಸ್ಟಾರ್ ದರ್ಶನ್ ಅವರು ಪಟ್ಟಣದಲ್ಲಿ ಮಂಗಳವಾರ ಅದ್ದೂರಿ ರೋಡ್ ಶೋ ನಡೆಸಿ, ಮತಯಾಚಿಸಿದರು.



ಪಟ್ಟಣದ ಟಿ.ಬಿ.ಸರ್ಕಲ್, ಮಂಡ್ಯ ಸರ್ಕಲ್, ಬ್ರಹ್ಮದೇವರಹಳ್ಳಿ ಸರ್ಕಲ್‌ನಲ್ಲಿ ತೆರೆದ ವಾಹನದಲ್ಲಿ ಆಗಮಿಸಿದ ನಟ ದರ್ಶನ್, ಸಚಿವ ಚಲುವರಾಯಸ್ವಾಮಿ, ಅಭ್ಯರ್ಥಿ ವೆಂಕಟರಮಣೇಗೌಡ (ಸ್ಟಾರ್ ಚಂದ್ರು) ಅವರನ್ನು ನೋಡಲು ಬಿರುಬಿಸಿಲಿನಲ್ಲೂ ಸಹಸ್ರಾರು ಸಂಖ್ಯೆಯಲ್ಲಿ ಜನಸ್ತೋಮ ಸೇರಿತ್ತು. ಬಿ.ಎಂ.ರಸ್ತೆಯ ಅಕ್ಕಪಕ್ಕದಲ್ಲಿ ನೆರೆದಿದ್ದ ಜನರು ಕಾಂಗ್ರೆಸ್ ಗೆ ಜೈಕಾರ ಹಾಕಿದರು. ನೂರಾರು ಯುವಕರು ಬೈಕ್‌ನಲ್ಲಿ ಸಾಗಿ ಸ್ವಾಗತ ಕೋರುತ್ತಿದ್ದರು.

ಇದೇ ವೇಳೆ ಮಾತನಾಡಿದ ದರ್ಶನ್, ಸ್ಟಾರ್ ಚಂದ್ರು ಅವರು ಒಳ್ಳೆ ಸಹೃದಯಿ, ವ್ಯಕ್ತಿ. ಜನಸೇವೆ ಮಾಡಲು ಬಂದಿದ್ದಾರೆ. ಇವರನ್ನು ಗೆಲ್ಲಿಸುವ ಅವಕಾಶ ಸಿಕ್ಕಿದೆ. ಅದನ್ನು ಕಳೆದುಕೊಳ್ಳಬೇಡಿ ಎಂದು ಮತದಾರರಲ್ಲಿ ಮನವಿ ಮಾಡಿದರು.

ಕಳೆದ ಚುನಾವಣೆಯಲ್ಲಿ ಹಿಂದೆ ಯಿಂದ ನಿಂತು ಚಲುವರಾಯಸ್ವಾಮಿ ನಮಗೆ ಸಹಾಯ ಮಾಡಿದ್ದಾರೆ. ಅವರ ಋಣ ನಮ್ಮ ಮೇಲಿದೆ. ಆ ಋಣವನ್ನು ನಾವು ತೀರಿಸಬೇಕಿದೆ ಎನ್ನುವ ಮೂಲಕ 2019ರ ಲೋಕಸಭಾ ಚುನಾವಣೆಯಲ್ಲಿ ಚಲುವರಾಯಸ್ವಾಮಿ ಪರೋಕ್ಷವಾಗಿ ಸುಮಲತಾ ಪರ ನಿಂತಿದ್ದನ್ನು ಉಲ್ಲೇಖಿಸಿದ ದರ್ಶನ್, ತಮ್ಮ ಅಭಿಮಾನಿಗಳು ಸ್ಟಾರ್ ಚಂದ್ರುಗೆ ಮತ ಕೊಡಬೇಕೆಂದು ಹೇಳಿದರು.

ಆಮ್ ಆದ್ಮಿ ಪಕ್ಷದ ರಾಜ್ಯಾಧ್ಯಕ್ಷ ಹಾಗೂ ಹಿರಿಯ ನಟ ಮುಖ್ಯಮಂತ್ರಿ ಚಂದ್ರು ಮಾತನಾಡಿ, ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ನೇತೃತ್ವದ ರಾಜ್ಯ ಸರ್ಕಾರ ಐದು ಗ್ಯಾರಂಟಿಯನ್ನು ನೀಡುವ ಮೂಲಕ ಜನ ಮಾನಸದಲ್ಲಿ ಉಳಿದಿದ್ದಾರೆ. ರಾಜ್ಯ ಹಾಗೂ ದೇಶ ಮತ್ತಷ್ಟು ಅಭಿವೃದ್ಧಿ ಯಾಗಬೇಕು. ಮಂಡ್ಯ ಜಿಲ್ಲೆಯೂ ಸಹ ಸಮಗ್ರ ಅಭಿವೃದ್ಧಿ ಕಾಣಬೇಕೆಂದರೆ ಚಂದ್ರು ಗೆಲ್ಲಬೇಕೆಂದು ಮನವಿ ಮಾಡಿದರು.

ಕುಮಾರಸ್ವಾಮಿ ಈಗಾಗಲೇ ಚನ್ನಪಟ್ಟಣ ಕ್ಷೇತ್ರದ ಶಾಸಕರು. ಅಧಿಕಾರ ಇರಬೇಕಾದರೆ ಮಂಡ್ಯ ಕ್ಷೇತ್ರದಿಂದ ಏಕೆ ಸ್ಪರ್ಧೆ ಮಾಡಬೇಕಿತ್ತು. ಅವರ ಪಕ್ಷದಲ್ಲಿ ಅಭ್ಯರ್ಥಿಗಳೇ ಇರಲಿಲ್ಲವೇ? ಕೇವಲ ಅವರ ಕುಟುಂಬದ ಹಿತವನ್ನು ಮಾತ್ರ ನೋಡುವ ದೇವೇಗೌಡರು ಹಾಗೂ ಕುಮಾರಸ್ವಾಮಿಗೆ ಈ ಚುನಾವಣೆಯಲ್ಲಿ ತಕ್ಕಪಾಠ ಕಲಿಸಬೇಕೆಂದು ಕರೆ ನೀಡಿದರು. ಈ ಸಂದರ್ಭದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಅಭ್ಯರ್ಥಿ ವೆಂಕಟರಮಣೇಗೌಡ, ನಟ ಸಚಿನ್ ಚಲುವರಾಯಸ್ವಾಮಿ, ಮಾಜಿ ಶಾಸಕ ಎನ್.ಅಪ್ಪಾಜಿಗೌಡ ಸೇರಿದಂತೆ ಹಲವು ಮಂದಿ ಭಾಗವಹಿಸಿದ್ದರು.

'ಈ ಬಡ್ಡಿ ಮಕ್ಕಳು ಕೊಡೋ ಎರಡು ಸಾವಿರ ರೂ.ಗೆ ಓಟ್ ಮಾರಿಕೊಳ್ತೀವಾ ನಾವು'

ಜೆಡಿಎಸ್ ಸಮಾವೇಶದಲ್ಲಿ ಡಾ.ರವೀಂದ್ರ ವಿವಾದಾತ್ಮಕ ಹೇಳಿಕೆ



ಮದ್ದೂರು: ಮಂಡ್ಯ ಜಿಲ್ಲೆಯ ಜನ ವರ್ಷಕ್ಕೊಂದು ಪರ ಮಾಡುತ್ತೇವೆ. ವರ್ಷಕ್ಕೊಂದು ಹಬ್ಬ ಮಾಡುತ್ತೇವೆ. 250–500 ಮಂದಿಗೆ ಬಾಡೂಟ ಹಾಕಿ 25 ಸಾವಿರ ಹಣ ಖರ್ಚು ಮಾಡುತ್ತೇವೆ. ಅಂತಹದ್ದರಲ್ಲಿ 'ಈ ಬಡ್ಡಿ ಮಕ್ಕಳು ಕೊಡೋ ಎರಡು ಸಾವಿರ ರೂ. ಹಣಕ್ಕೆ ಓಟ್ ಮಾರಿಕೊಳ್ತೀವಾ ನಾವು' ಎಂದು ಜೆಡಿಎಸ್ ಮುಖಂಡ ಡಾ.ರವೀಂದ್ರ ವಿವಾದಾತ್ಮವಾಗಿ ಮಾತನಾಡಿದ್ದಾರೆ.

ಸೋಮವಾರ ಸಂಜೆ ಪಟ್ಟಣದ ತಾಲೂಕು ಕ್ರೀಡಾಂಗಣದಲ್ಲಿ ಮೈತ್ರಿ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ ಪರ ನಡೆದ ಬೃಹತ್ ಸಮಾವೇಶದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಮಂಡ್ಯ ಜನರು ದುಡ್ಡಿಗೆ ಬದುಕಿದ್ದಾರೆ ಎಂದು ಭಾವಿಸಿರುವ ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿಗೆ ಧಿಕ್ಕಾರವಿರಲಿ. ಹಣದಿಂದ ಮಂಡ್ಯ ಜನರನ್ನು ಖರೀದಿ ಮಾಡಲು ಸಾಧ್ಯವಿಲ್ಲ. ಜಿಲ್ಲೆಯ ಜನ ಹಣದ ಬದಲು ಮಾನ ಮರ್ಯಾದೆ, ಸ್ವಾಭಿಮಾನಕ್ಕೆ ಬದುಕಿದವರು ಎಂದು ಗುಡುಗಿದರು. ಕುಮಾರಸ್ವಾಮಿ ಅವರನ್ನು ಹೊರಗಿನವರು ಎಂದು ಟೀಕಿಸುತ್ತಾರೆ. ಬಾದಾಮಿಗೆ ಓಡಿ ಹೋದ ಸಿದ್ದರಾಮಯ್ಯ ಅಲ್ಲಿಗೆ ಒಳಗಿನವರಾ? ನಿಮ್ಮ ತಟ್ಟೆಯಲ್ಲಿ ಹೆಗ್ಗಣ ಬಿದ್ದಿದೆ. ನಮ್ಮ ತಟ್ಟೆಯ ನೊಣ ಹುಡುಕುತ್ತೀರಾ? ಸ್ಟಾರ್ ಚಂದ್ರು ನೋಟು, ಕುಮಾರಣ್ಣಗೆ ಓಟು ಎಂದು ಹೇಳಿದ ಅವರು, ಕಾಂಗ್ರೆಸ್ ವರ್ಷಕ್ಕೆ ಒಂದು ಲಕ್ಷ ರೂ. ಹಣ ಹಾಕುತ್ತೇವೆ ಎಂದಿದ್ದಾರೆ. ಈ ರೀತಿ ಹಣ ಹಾಕಿದರೆ ದೇಶ ದಿವಾಳಿಯಾಗುತ್ತದೆ. ಒಂದು ಲಕ್ಷ ರೂ. ಹಣ ಹಾಕುವುದಾಗಿ ಹೇಳುವ ರಾಹುಲ್‌ಗಾಂಧಿ ನಿಜಕ್ಕೂ ಪಪ್ಪುನೇ. ಜೊತೆಗೆ ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಯಾವ ಪಾಪದ ಪಲಕ್ಕೋ ಜಿಲ್ಲೆಗೆ ಒಕ್ಕರಿಸಿಕೊಂಡಿದ್ದಾರೆ ಎಂದು ಕಿಡಿಕಾರಿದರು.

ವೇದಿಕೆ ಬಳಿ ಬೆಂಕಿ: ಕಾರ್ಯಕ್ರಮ ನಡೆಯುವಾಗ ಭಾರೀ ಸಿಡಿ ಮದ್ದುಗಳನ್ನು ಜೆಡಿಎಸ್ ಮುಖಂಡರು ಸಿಡಿಸುತ್ತಿದ್ದ ಹಿನ್ನೆಲೆಯಲ್ಲಿ ವೇದಿಕೆಯಿಂದ 40 ಅಡಿ ದೂರದಲ್ಲಿ ಪಟಾಕಿ ಸ್ಫೋಟಕ್ಕೆ ಲಘುವಾಗಿ ಬೆಂಕಿ ಕಾಣಿಸಿಕೊಂಡಿತು. ಆದರೆ ಅದೃಷ್ಟವಶಾತ್ ಯಾವುದೇ ಅಪಾಯ ಸಂಭವಿಸಲಿಲ್ಲ.

ವೇದಿಕೆಯಲ್ಲಿ ಅಭ್ಯರ್ಥಿ ಹೆಚ್.ಡಿ.ಕುಮಾರಸ್ವಾಮಿ, ಮಾಜಿ ಸಚಿವರಾದ ಡಿ.ಸಿ.ತಮ್ಮಣ್ಣ, ಕೆ.ಸಿ.ನಾರಾಯಣಗೌಡ, ಮಾಜಿ ಶಾಸಕರಾದ ತಾರಾ ಅನುರಾಧ, ಕಲ್ಪನಾ ಸಿದ್ದರಾಜು, ಮುಖಂಡರಾದ ಗುರುಚರಣ್, ಎಸ್.ಪಿ. ಸ್ವಾಮಿ, ಡಿ.ರಮೇಶ್ ಸೇರಿದಂತೆ ಹಲವು ಮಂದಿ ಉಪಸ್ಥಿತರಿದ್ದರು.

ಹಲವು ಮುಖಂಡರು ಕಾಂಗ್ರೆಸ್ ಸೇರ್ಪಡೆ



ಮಂಡ್ಯ,ಏ.23– ನಗರದ ಜಿಲ್ಲಾ ಕಾಂಗ್ರೆಸ್ ಕಚೇರಿಯಲ್ಲಿ ಹಿರಿಯ ಕಾಂಗ್ರೆಸ್ ನಾಯಕರು ಆಯೋಜಿಸಿದ್ದ ಕಾಂಗ್ರೆಸ್ ಸೇರ್ಪಡೆ ಕಾರ್ಯಕ್ರಮಕ್ಕೆ ಸಚಿವ ಎನ್.ಚಲುವರಾಯಸ್ವಾಮಿ ಚಾಲನೆ ನೀಡಿದರು.

ಬಳಿಕ ಮಾತನಾಡಿದ ಸಚಿವ ಎನ್.ಚಲುವರಾಯಸ್ವಾಮಿ, ಮುಡಾ ಮಾಜಿ ಅಧ್ಯಕ್ಷ ಅಸಾದುಲ್ಲಾಖಾನ್ ನೇತೃತ್ವದಲ್ಲಿ ನೂರಾರು ಮಂದಿ ಕಾಂಗ್ರೆಸ್ ಪಕ್ಷ ಸೇರ್ಪಡೆಯಾಗುತ್ತಿರುವುದು ಸಂತಸ, ಕಾಂಗ್ರೆಸ್ ಸರ್ಕಾರ ಕೊಟ್ಟ 5 ಗ್ಯಾರಂಟಿ ಯೋಜನೆಗಳು ಪಕ್ಷ ಗೆಲ್ಲಲು ನೆರವಾಗುತ್ತಿವೆ ಎಂದರು. ಇಂದಿನಿಂದಲೇ ಕಾಂಗ್ರೆಸ್ ಅಭ್ಯರ್ಥಿ ಸ್ಟಾರ್‌ಚಂದ್ರು ಗೆಲುವಿಗೆ ಮತಯಾಚನೆ ಮಾಡಿ, ಓಟು ಹಾಕಿಸುವ ಮೂಲಕ ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಮತ್ತು ನಮಗೆ ಮತ್ತಷ್ಟು ಶಕ್ತಿ ತುಂಬಿ ಎಂದು ಕೋರಿದರು.

ಕಾಂಗ್ರೆಸ್‌ನ ಬಹಳಷ್ಟು ಮಂದಿ ಬೇಲ್‌ನಲ್ಲಿದ್ದಾರೆ

ವಿಧಾನ ಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಹೇಳಿಕೆ



ಚಾ.ನಗರದ ಶಿವಕುಮಾರಸ್ವಾಮಿ ಕಲ್ಯಾಣ ಮಂಟಪದಲ್ಲಿ ನಡೆದ ಬಲವರ್ಧನೆಗಾಗಿ ಭೀಮ ಸಮಾವೇಶವನ್ನು ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಅಭ್ಯರ್ಥಿ ಎಸ್.ಬಾಲರಾಜು ಉದ್ಘಾಟಿಸಿದರು.

ಚಾಮರಾಜನಗರ, ಏ.23–ಹತ್ತು ವರ್ಷದ ಪ್ರಧಾನಿ ನರೇಂದ್ರ ಮೋದಿ ಆಡಳಿತದಲ್ಲಿ ಯಾವುದೇ ಹಗರಣವಿಲ್ಲದೆ ಸ್ವಚ್ಛ ಆಡಳಿತ ನೀಡಿರುವ ಬಿಜೆಪಿಯನ್ನು ಮತ್ತೆ ಅಧಿಕಾರಕ್ಕೆ ತರಲು ಬೆಂಬಲಿಸಬೇಕು ಎಂದು ವಿಧಾನ ಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ ಮನವಿ ಮಾಡಿದರು.

ನಗರದ ಶಿವಕುಮಾರಸ್ವಾಮಿ ಕಲ್ಯಾಣ ಮಂಟಪದಲ್ಲಿ ಬಿಜೆಪಿ ಎಸ್ಸಿ ಮೋರ್ಚಾ ವತಿಯಿಂದ ನಡೆದ ಬಲವರ್ಧನೆಗಾಗಿ ಭೀಮ ಸಮಾವೇಶದಲ್ಲಿ ಮಾತನಾಡಿದ ಅವರು, ಹಿಂದಿನ ಯುಪಿಎ ಸರ್ಕಾರದಲ್ಲಿ ಲಕ್ಷಾಂತರ ಕೋಟಿ ರೂ. ಹಗರಣ ನಡೆದಿದೆ. ಕಾಂಗ್ರೆಸ್‌ನ ಬಹಳಷ್ಟು ಮಂದಿ ಇನ್ನೂ ಬೇಲ್‌ನಲ್ಲಿದ್ದಾರೆ. 60 ವರ್ಷ ಆಡಳಿತ ನಡೆಸಿದ ಅವರು ದಲಿತರನ್ನು ಕಡೆಗಣಿಸುತ್ತಾ ಬಂದಿದ್ದಾರೆ. ಅಲ್ಲದೆ, ಕಾಂಗ್ರೆಸ್‌ನ ಹಿರಿಯ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮುಖ್ಯಮಂತ್ರಿ ಮಾಡದೇ ದಲಿತ ಸಮಾಜದ ಮತಗಳನ್ನು ಪಡೆದು ವಂಚನೆ ಮಾಡಿದ್ದಾರೆ. ಹೀಗಾಗಿ ಎಚ್ಚೆತ್ತು ಈ ಬಾರಿ ಲೋಕಸಭಾ ಚುನಾವಣೆಯಲ್ಲಿ ಚಾಮರಾಜನಗರ ಮೀಸಲು ಕ್ಷೇತ್ರದಲ್ಲಿ ಸ್ಪರ್ಧಿಸಿರುವ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಅವರನ್ನು ಗೆಲ್ಲಿಸುವ ಮೂಲಕ ಕೇಂದ್ರದಲ್ಲಿ ಮತ್ತೊಮ್ಮೆ ಬಿಜೆಪಿಯನ್ನು ಅಧಿಕಾರಕ್ಕೆ ತರಬೇಕು ಎಂದು ಹೇಳಿದರು.

ದಲಿತ ಮುಖಂಡ ವೆಂಕಟರಮಣಸ್ವಾಮಿ (ಪಾಪು) ಮಾತನಾಡಿ, ಚಾಮರಾಜನಗರದ ಶಾಂತಿ, ಸೌಹಾರ್ದತೆ ಕಾಪಾಡಲು ಉತ್ತಮ ಅಭ್ಯರ್ಥಿಯಾಗಿ ಸ್ಪರ್ಧಿಸಿರುವ ಬಿಜೆಪಿ ಅಭ್ಯರ್ಥಿ ಎಸ್.ಬಾಲರಾಜು ಅವರಿಗೆ ಹೆಚ್ಚಿನ ಮತಗಳನ್ನು ನೀಡಬೇಕು ಎಂದು ತಿಳಿಸಿದರು.

ಸಮಾವೇಶದಲ್ಲಿ ಬಿಜೆಪಿ ರಾಜ್ಯ ಉಪಾಧ್ಯಕ್ಷ ಎನ್.ಮಹೇಶ್, ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮೂಡ್ನಾಕೂಡು ಪ್ರಕಾಶ್, ಎಸ್ಸಿ ಮೋರ್ಚಾ ಪ್ರಧಾನ ಕಾರ್ಯದರ್ಶಿ ಮುತ್ತಿಗೆ ಮೂರ್ತಿ, ನಗರಸಭಾ ಸದಸ್ಯೆ ಕುಮುದಾ ಕೇಶವಮೂರ್ತಿ, ಜೆಡಿಎಸ್ ಮುಖಂಡರಾದ ಪುಟ್ಟಸ್ವಾಮಿ, ಬಿಜೆಪಿ ಮುಖಂಡರಾದ ಕೂಡ್ಲೂರು ಶ್ರೀಧರಮೂರ್ತಿ, ಮಲ್ಲೇದೇವರು, ಆಲೂರು ಪರಶಿವಮೂರ್ತಿ, ಸಿಎಂ ಕೃಷ್ಣಮೂರ್ತಿ ಇತರರು ಹಾಜರಿದ್ದರು.

ಹೆಚ್.ಎಂ.ಸ್ವಾಮಿ ನಿಧನ



ಗುಂಡ್ಲುಪೇಟೆ, ಏ.23–ಚಾಮರಾಜನಗರ ಜಿಲ್ಲಾ ಬಿಜೆಪಿ ಉಪಾಧ್ಯಕ್ಷರಾದ ತಾಲೂಕಿನ ಹಿರಿಕಾಟಿ ಸೋಮಶೇಖರ್ ಅವರ ತಂದೆ ಹೆಚ್.ಎಂ.ಸ್ವಾಮಿ (86) ಮಂಗಳವಾರ ಮಧ್ಯಾಹ್ನ ನಿಧನರಾದರು.

ಮೃತರು ಇಬ್ಬರು ಪುತ್ರರು, ಪುತ್ರಿ ಮತ್ತು ಅಪಾರ ಬಂಧು–ಬಳಗ ಅಗಲಿದ್ದಾರೆ. ಬುಧವಾರ ಮಧ್ಯಾಹ್ನ 12 ಗಂಟೆಗೆ ತಾಲೂಕಿನ ಹಿರಿಕಾಟಿ ಗ್ರಾಮದಲ್ಲಿ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಬಿಜೆಪಿ ಜಿಲ್ಲಾಧ್ಯಕ್ಷ ಸಿ.ಎಸ್. ನಿರಂಜನಕುಮಾರ್, ಮಂಡಲಾಧ್ಯಕ್ಷ ಮಹದೇವಪ್ರಸಾದ್ ಸಂತಾಪ ಸೂಚಿಸಿದ್ದಾರೆ.

ಮತದಾನ ಸೌಲಭ್ಯ ಕೇಂದ್ರ ಮುಂದುವರಿಕೆ

ಚಾಮರಾಜನಗರ, ಏ.23– ಚುನಾವಣಾ ಆಯೋಗದ ನಿರ್ದೇಶನದಂತೆ ಚಾಮರಾಜನಗರ ಲೋಕಸಭಾ ಕ್ಷೇತ್ರ ವ್ಯಾಪ್ತಿಯ ಮತಗಟ್ಟೆಗಳಿಗೆ ನೇಮಕ ಮಾಡಿರುವ ಮತಗಟ್ಟೆ ಅಧಿಕಾರಿಗಳು ಹಾಗೂ ಚುನಾವಣಾ ಕರ್ತವ್ಯ ನಿರತ ಅಧಿಕಾರಿಗಳು, ಸಿಬ್ಬಂದಿಗೆ ಮತ ಚಲಾಯಿಸಲು ಅನುಕೂಲವಾಗುವಂತೆ ಜಿಲ್ಲಾಡಳಿತ ಭವನದ ಹಳೇ ಕೆಡಿಪಿ ಸಭಾಂಗಣದ ಕೊಠಡಿ ಸಂಖ್ಯೆ 6ರಲ್ಲಿ ಏ.24ರವರೆಗೆ ಮತದಾನ ಸೌಲಭ್ಯ ಕೇಂದ್ರದ ಕಾರ್ಯ ಮುಂದುವರೆಸಲಾಗಿದೆ ಎಂದು ಜಿಲ್ಲಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಳಿಗಿರಿರಂಗನಬೆಟ್ಟದಲ್ಲಿ ವಿಜೃಂಭಣೆಯ ರಥೋತ್ಸವ

• ಸಾವಿರಾರು ಭಕ್ತರ ಹರ್ಷೋದ್ಗಾರ • ಮುಂಜಾನೆಯಿಂದಲೇ ವಿಶೇಷ ಪೂಜೆ

ಯಳಂದೂರು, ಏ.23–ಬಿಳಿಗಿರಿರಂಗನ ಬೆಟ್ಟದಲ್ಲಿ ರಂಗನಾಥಸ್ವಾಮಿಯ ಬ್ರಹ್ಮ ರಥೋತ್ಸವ (ದೊಡ್ಡಜಾತ್ರೆ) ಮಂಗಳವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜಂಭಣೆಯಿಂದ ಜರುಗಿತು.

ರಥೋತ್ಸವದಲ್ಲಿ ಬೆಟ್ಟದ ಉದ್ದಗಲಕ್ಕೂ ಸಂಭ್ರಮ, ಸಡಗರ, ಭಕ್ತರ ಕಲರವ ಕಂಡು ಬಂತು. ರಥಕ್ಕೆ ಚಾಲನೆ ದೊರಕುತ್ತಿದ್ದಂತೆ ಭಕ್ತರು ಬಿರು ಬಿಸಿಲನ್ನು ಲೆಕ್ಕಿಸದೆ ಉಘೇ.. ಉಘೇ ರಂಗಪ್ಪ ಎಂದು ಹರ್ಷೋದ್ಗಾರ ಮೊಳಗಿಸಿದರು.

ಮುಂಜಾನೆಯಿಂದಲೇ ರಂಗನಾಥಸ್ವಾಮಿ ಹಾಗೂ ಅಲಮೇಲು ರಂಗನಾಯಕಿ ಅಮ್ಮನವರ ಧಾರ್ಮಿಕ ಪೂಜಾ ಕಾರ್ಯಗಳು ನೆರವೇರಿಸಿದವು. ಬಳಿಕ ರಂಗನಾಥಸ್ವಾಮಿ ಮೂರ್ತಿಯನ್ನು ರತ್ನ ಖಚಿತ ಚಿನ್ನದ ಕಿರಿಟ, ತುಳಸಿ, ಸುಗಂಧರಾಜ, ಗುಲಾಬಿ, ಮಲ್ಲಿಗೆ, ಸಂಪಿಗೆ ಸೇರಿದಂತೆ ವಿವಿಧ ಪುಷ್ಪಗಳಿಂದ ಅಲಂಕರಿಸಲಾಯಿತು.

ಮುಂಜಾನೆ 4 ಗಂಟೆಗೆ ಕಲ್ಯಾಣೋತ್ಸವ, ಬೆಳಗ್ಗೆ 6 ಗಂಟೆಗೆ ಪ್ರಸ್ಥಾನ ಮಂಟಪೋತ್ಸವ ನಡೆಯಿತು. ನಂತರ ಹೂವಿನ ಅಲಂಕೃತ ಅಡ್ಡ ಪಲ್ಲಕ್ಕಿಯಲ್ಲಿ ರಂಗನಾಥಸ್ವಾಮಿ ಹಾಗೂ ಅಲಮೇಲು ರಂಗನಾಯಕಿ ಉತ್ಸವ ಮೂರ್ತಿ ಇರಿಸಿ, ದೇವಾಲಯದ ಸುತ್ತ ಮೂರು ಪ್ರದಕ್ಷಿಣೆ ಮತ್ತು ರಾಜಬೀದಿಯಲ್ಲಿ ಮೆರವಣಿಗೆ ನಡೆಸಲಾಯಿತು. ಬಳಿಕ ಧ್ವಜವನ್ನು ದೊಡ್ಡ ರಥದಲ್ಲಿ ಪ್ರತಿಷ್ಠಾಪಿಸಲಾಯಿತು.



ಬಿಳಿಗಿರಿರಂಗನಬೆಟ್ಟದಲ್ಲಿ ಸಾವಿರಾರು ಭಕ್ತರ ಸಮ್ಮುಖದಲ್ಲಿ ಬ್ರಹ್ಮ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಬೆಳಗ್ಗೆ 10.53 ರಿಂದ 11.08 ಗಂಟೆಗೆ ಸಲ್ಲುವ ಶುಭ ಮಿಥುನ ಲಗ್ನದ ಮೇಷ ಕುಜ ನಾವಾಂಶ ಮುಹೂರ್ತದಲ್ಲಿ ಪೂಜೆ ಸಲ್ಲಿಸಿ, ರಥಕ್ಕೆ ಚಾಲನೆ ನೀಡಲಾಯಿತು. ಗೋವಿಂದ.. ಗೋವಿಂದ.. ಎಂದು ಜೈಕಾರ ಹಾಕುತ್ತ, ಶಂಖ, ಜಾಗಟೆ ಬಾರಿಸುತ್ತ ರಥ ಎಳೆದ ಭಕ್ತರು ಸಂತೃಪ್ತರಾದರು.

ಸೋಲಿಗರ ಸಂಭ್ರಮ: ಬಿಳಿಗಿರಿರಂಗನ ಬೆಟ್ಟದ ಪುರಾಣಿ, ಹೊಸ ಜೀರಿಗೆ, ಗದ್ದ, ಮಂಜಿಗುಡ್ಡೆ, ಬಂಗ್ಲೆ ಪೋಡು, ಗೊಂಬೆಗಲ್ಲು, ದೊಡ್ಡಸಂಪಿಗೆ ಇತರೆ ಹಾಡಿಯ ಸೋಲಿಗರು ರಂಗಪ್ಪನ ತೇರು ನೋಡಲು ಪರಿವಾರ ಸಮೇತ ಕಾಲುದಾರಿಯಲ್ಲಿ ನಡೆದುಕೊಂಡು ಬರುತ್ತಿದ್ದ ದೃಶ್ಯ ಸಾಮಾನ್ಯವಾಗಿತ್ತು. ತೇರಿಗೆ ನವ ವಿವಾಹಿತರು ಹಣ್ಣು, ಧವನ ಅರ್ಪಿಸಿ ಇಷ್ಟಾರ್ಥ ಸಿದ್ಧಿಗೆ ಪ್ರಾರ್ಥಿಸಿದರು. ರೈತರು ಬೆಳೆದ ರಾಗಿ, ಭತ್ತ, ಜೋಳ, ಕಬ್ಬು, ಅವರೆ, ಅಲಸಂದೆ, ಹುರಳಿ, ಹೆಸರು, ನವಣೆ ಇತರೆ ಧಾನ್ಯಗಳನ್ನು ರಥಕ್ಕೆ ಸಲ್ಲಿಸಿ ಹರಕೆ ತಿರಿಸಿದರು. ಹಳ್ಳಿಗಳಿಂದ ಬಂದಿದ್ದ ಭಕ್ತರು ಅಕ್ಕಿ, ಬೆಲ್ಲ, ಕಾಯಿ, ಹಸಿಕಡ್ಲೆ ಯನ್ನು ನೀರಿನಲ್ಲಿ ನೆನೆಸಿ ಜತೆಗೆ ಕಜ್ಜಾಯ ಬೆರೆಸಿ (ಬ್ಯಾಟಮಣೆ) ಪ್ರಸಾದವಾಗಿ ಸ್ವೀಕರಿಸಿದರು.

ಬಸ್ ವ್ಯವಸ್ಥೆ: ರಾಜ್ಯದ ವಿವಿಧೆಡೆಗಳಿಂದ ಬಿಳಿಗಿರಿರಂಗನಬೆಟ್ಟದ ಜಾತ್ರೆಗೆ ಆಗಮಿಸುವ ಭಕ್ತರ ಅನುಕೂಲಕ್ಕಾಗಿ ಮೈಸೂರು, ಚಾಮರಾಜನಗರ, ಕೊಳ್ಳೇಗಾಲ, ಗುಂಡ್ಲುಪೇಟೆ, ಯಳಂದೂರಿನಿಂದ ಸಾರಿಗೆ ಬಸ್‌ಗಳ ವ್ಯವಸ್ಥೆ ಕಲ್ಪಿಸಲಾಗಿತ್ತು. ಬೆಟ್ಟಕ್ಕೆ ದ್ವಿಚಕ್ರ ವಾಹನ ಗಳನ್ನು ನಿರ್ಬಂಧಿಸಲಾಗಿತ್ತು. ಜಿಲ್ಲಾಡಳಿತ ಪ್ರಾಣಿ ಬಲಿ ಹಾಗೂ ಪ್ಲಾಸ್ಟಿಕ್ ಬಳಕೆಗೆ ನಿಷೇಧ ಹೇರಿದ್ದರಿಂದ ಅರಣ್ಯ ಇಲಾಖೆ ನೌಕರರು, ಪೊಲೀಸರು ವಾಹನಗಳ ತಪಾಸಣೆ ಮಾಡಿದರು.

ಇಂದು ವಿಶೇಷ 'ಸ್ವಾತಿ' ಪೂಜೆ



ಮೈಸೂರು,ಮಾ.23-ನಗರದ ಕಾಳಿದಾಸ ರಸ್ತೆಯಲ್ಲಿರುವ ಶ್ರೀ ಯದು ಗಿರಿ ಯತಿರಾಜ ಮಠ, ಮೈಸೂರು ಶಾಖೆಯ ಶ್ರೀ ಲಕ್ಷ್ಮೀನರಸಿಂಹ ಸ್ವಾಮಿ ದೇವಸ್ಥಾನದಲ್ಲಿ ಏ.24ರಂದು ಬುಧವಾರ 'ಸ್ವಾತಿ' ನಕ್ಷತ್ರದ ಪ್ರಯುಕ್ತ ವಿಶೇಷ ಪೂಜೆ ಆಯೋಜಿಸಲಾಗಿದೆ. ಅಂದು ಬೆಳಗ್ಗೆ 8ಕ್ಕೆ ಸಂಕಲ್ಪ, 9ಕ್ಕೆ ಅಭಿಷೇಕ, 10.30ಕ್ಕೆ ಅಲಂಕಾರ, 11.30ಕ್ಕೆ ಮಹಾಮಂಗಳಾರತಿ, ಮಧ್ಯಾಹ್ನ 12.30ಕ್ಕೆ ಶಾತ್ತುಮೊರೈ, 1 ಗಂಟೆಗೆ ತೀರ್ಥ ಪ್ರಸಾದ ವಿನಿಯೋಗವನ್ನು ಏರ್ಪಡಿಸಲಾಗಿದೆ. ಸಂಜೆ 7.30ಕ್ಕೆ ಪ್ರಾಕಾರೋತ್ಸವ ಹಮ್ಮಿಕೊಳ್ಳಲಾಗಿದೆ ಎಂದು ದೇವಸ್ಥಾನದ ಪ್ರಧಾನ ವ್ಯವಸ್ಥಾಪಕ ವಿದ್ವಾನ್ ಕೆ.ಆರ್.ಯೋಗಾನರಸಿಂಹನ್ (ಮುರುಳಿ ಅಯ್ಯಂಗಾರ್) ತಿಳಿಸಿದ್ದಾರೆ.

ಭಕ್ತಾದಿಗಳು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಸ್ವಾಮಿಯ ಕೃಪೆಗೆ ಪಾತ್ರರಾಗಬೇಕೆಂದು ಕೋರಿದ್ದಾರೆ. ಹೆಚ್ಚಿನ ಮಾಹಿತಿಗಾಗಿ ಮೊ. 9342188323, 7598832271 ಸಂಪರ್ಕಿಸಬಹುದು.

ಹೊಯ್ಸಳ ಕರ್ನಾಟಕ ಸಂಘ ಚಾರಿಟೆಬಲ್ ಟ್ರಸ್ಟ್‌ನ ನೂತನ ಪದಾಧಿಕಾರಿಗಳು



ಮೈಸೂರು,ಏ.23-ಮೈಸೂರಿನ ಹೊಯ್ಸಳ ಕರ್ನಾಟಕ ಸಂಘ ಚಾರಿಟೆಬಲ್ ಟ್ರಸ್ಟ್‌ನ 2024-2027ನೇ ಸಾಲಿಗೆ ನೂತನ ಪದಾಧಿಕಾರಿಗಳನ್ನು ಆಯ್ಕೆ ಮಾಡಲಾಯಿತು.

ಟ್ರಸ್ಟಿನ ಛೇರ್ಮನ್ -ಎಸ್.ಅಚ್ಯುತ, ವೈಸ್-ಛೇರ್ಮನ್-ಮೀರಾ, ಕಾರ್ಯದರ್ಶಿ-ಪಿ.ಶ್ರೀನಿಧಿ, ಖಜಾಂಚಿ-ರಾಘವೇಂದ್ರ ಹೆಚ್.ಎನ್., ಸಹ ಕಾರ್ಯದರ್ಶಿ-ವೀಣಾ ಜಿ.ಆರ್, ಟ್ರಸ್ಟಿಗಳಾಗಿ ಕೆ.ಆರ್.ಸತ್ಯನಾರಾಯಣ, ಜಯಸಿಂಹ ಎನ್.ಎಸ್, ಸಂಧ್ಯಾನಂದ ಕುಮಾರ್, ವಿಜಯಾ ಪ್ರಸಾದ್ ನೇಮಕಗೊಂಡಿದ್ದಾರೆ.

ಇದೇ ವೇಳೆ ಟ್ರಸ್ಟಿನ ಛೇರ್ಮನ್ ಆಗಿ ಇಲ್ಲಿವರೆಗೂ ಕಾರ್ಯನಿರ್ವಹಿಸಿದ ನಾರಾಯಣ ಶಾಸ್ತ್ರಿ ಮತ್ತು ಕಾರ್ಯದರ್ಶಿಯಾಗಿದ್ದ ನರೇಂದ್ರನಾಥ್, ಖಜಾಂಚಿಗಳಾಗಿ ಕಾರ್ಯನಿರ್ವಹಿಸಿದ ಕೆ.ಎಸ್.ಸಿಂಹ ಮತ್ತು ವಿಜಯಕುಮಾರ್ ಅವರಿಗೆ ಬೀಳ್ಕೊಡುಗೆ ನೀಡಲಾಯಿತು.



ಶ್ರೀ ಸುತ್ತೂರು ಕ್ಷೇತ್ರದಲ್ಲಿ ಜಗದ್ಗುರು ಶ್ರೀ ವೀರಸಿಂಹಾಸನ ಮಹಾಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠದ ವತಿಯಿಂದ ತಾಂತ್ರಿಕ ವಿದ್ಯಾರ್ಥಿಗಳಿಗೆ ಆಯೋಜಿಸಿದ್ದ 'ವ್ಯಕ್ತಿತ್ವ ವಿಕಸನ ಶಿಬಿರ'ದ ಅಂಗವಾಗಿ ಕಪಿಲಾ ನದಿ ತೀರದಲ್ಲಿ 'ಕಪಿಲಾರತಿ'ಯನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮಿಗಳ ಆಶೀರ್ವಾದದೊಂದಿಗೆ ನೆರವೇರಿಸಲಾಯಿತು.

ಇಂದು ಫೋನ್-ಇನ್ ಕಾರ್ಯಕ್ರಮ



ಮೈಸೂರು,ಏ.23-ಮೈಸೂರಿನ ಜೆಎಸ್‌ಎಸ್ ಕಲಾ ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನಲ್ಲಿರುವ ಸಮುದಾಯ ಬಾನುಲಿ ಕೇಂದ್ರ ಜೆಎಸ್‌ಎಸ್ ರೇಡಿಯೋ 91.2 ಎಫ್‌ಎಂನಲ್ಲಿ ಏ.24ರಂದು ಬೆಳಗ್ಗೆ 11.30ರಿಂದ 12.30ರವರೆಗೆ ಜಿಲ್ಲಾ ಆರೋಗ್ಯ -ಕುಟುಂಬ ಕಲ್ಯಾಣ ಇಲಾಖೆ ಡಾ.ಪಿ.ಸಿ.ಕುಮಾರಸ್ವಾಮಿ ಅವರ ನೇರ ಸಂದರ್ಶನ ಫೋನ್-ಇನ್ ಕಾರ್ಯಕ್ರಮ ನಡೆಯಲಿದೆ. ಸಾರ್ವಜನಿಕರು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿರುವ ಸೇವಾ ಸೌಲಭ್ಯಗಳ ಕುರಿತು ಯಾವುದೇ ಪ್ರಶ್ನೆಗಳು ಅಥವಾ ಸಲಹೆಗಳು ಇದ್ದಲ್ಲಿ ಕರೆ ಮಾಡಿ ನೇರವಾಗಿ ಅಧಿಕಾರಿಗಳ ಜೊತೆ ಹಂಚಿಕೊಳ್ಳಬಹುದು. ದೂರವಾಣಿ ಸಂಖ್ಯೆ: 8296725912, 0821-2546563. ಜೆಎಸ್‌ಎಸ್ ರೇಡಿಯೋವನ್ನು ಪ್ಲೇ ಸ್ಟೋರ್‌ನಲ್ಲಿ ಲಭ್ಯವಿರುವ ಆ್ಯಪ್ ಮೂಲಕ ಬಾನುಲಿಯ ಕಾರ್ಯಕ್ರಮಗಳನ್ನು ಆಲಿಸಬಹುದು.



ಮಗುವಿನೊಂದಿಗೆ ತಾಯಿ ನಾಪತ್ತೆ

ಮೈಸೂರು,ಏ.23-ಮೈಸೂರಿನ ಉದಯಗಿರಿ ಗೌಸಿಯಾನಗರ ರೇಣುಕಾದೇವಿ ಬ್ಲಾಕ್ ನಿವಾಸಿ ಅನಿಲ್ ಎಂಬುವರ ಪತ್ನಿ ಕೀರ್ತನಾ (20) ಮತ್ತು 2 ತಿಂಗಳ ಪುತ್ರಿ ಯದೀಕ್ಷಾ ನಾಪತ್ತೆಯಾಗಿದ್ದಾರೆ. ಏ.11ರಂದು ಮಗುವನ್ನು ಆಸ್ಪತ್ರೆಗೆ ಕರೆದುಕೊಂಡು ಹೋದ ಕೀರ್ತನಾ ವಾಪಸ್ ಬಂದಿಲ್ಲ ಎಂದು ಪತಿ ಅನಿಲ್ ಪೊಲೀಸರಿಗೆ ದೂರು ನೀಡಿದ್ದಾರೆ. ಇವರ ಬಗ್ಗೆ ಮಾಹಿತಿ ತಿಳಿದಲ್ಲಿ ದೂ. 0821-2418309 ಸಂಪರ್ಕಿಸಲು ಉದಯಗಿರಿ ಠಾಣೆಯ ಪೊಲೀಸರು ಕೋರಿದ್ದಾರೆ.

ಮುರುಘಾ ಶ್ರೀ ಮತ್ತೆ ಜೈಲಿಗೆ: ಜಾಮೀನು ರದ್ದುಗೊಳಿಸಿದ 'ಸುಪ್ರೀಂ'



ನವದೆಹಲಿ: ಇಬ್ಬರು ಅಪ್ರಾಪ್ತ ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪ ಎದುರಿಸುತ್ತಿರುವ ಚಿತ್ರದುರ್ಗದ ಮುರುಘಾ ಮಠದ ಡಾ. ಶಿವಮೂರ್ತಿ ಶರಣರಿಗೆ ಹೈಕೋರ್ಟ್ ನೀಡಿದ್ದ ಜಾಮೀನನ್ನು ಸುಪ್ರೀಂಕೋರ್ಟ್ ಮಂಗಳವಾರ ರದ್ದು ಮಾಡಿದೆ ಈ ಮೂಲಕ ಮತ್ತೆ ಸ್ವಾಮೀಜಿ ಜೈಲು ಸೇರಲಿದ್ದಾರೆ.

ಕೆಲ ತಿಂಗಳುಗಳ ಹಿಂದೆ ಕರ್ನಾಟಕ ಹೈಕೋರ್ಟ್, ಮುರುಘಾ ಶ್ರೀಗಳಿಗೆ ಷರತ್ತುಬದ್ಧ ಜಾಮೀನು ನೀಡಿತ್ತು. ಆದರೆ ಆರೋಪಿ ಬಂಧನದಿಂದ ಹೊರಗಿದ್ದು, ಸಾಕ್ಷ್ಯಗಳನ್ನು ನಾಶಪಡಿಸಬಹುದು ಎಂದು ಮಾಜಿ ಸಚಿವ ಎಚ್.ಏಕಾಂತಯ್ಯ ಸುಪ್ರೀಂಕೋರ್ಟ್ ಮೆಟ್ಟಿಲೇರಿದ್ದರು. ಶ್ರೀಗಳ ಜಾಮೀನು ರದ್ದು ಕೋರಿ ಏಕಾಂತಯ್ಯ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಸುಪ್ರೀಂ ಕೋರ್ಟ್, ಜಾಮೀನು ರದ್ದುಗೊಳಿಸಿ, ನಾಲ್ಕು ತಿಂಗಳ ಕಾಲ ಆರೋಪಿಗೆ ನ್ಯಾಯಾಂಗ ಬಂಧನ ವಿಧಿಸಿ ಆದೇಶಿಸಿದೆ. ಒಂದು ವಾರದಲ್ಲಿ ನ್ಯಾಯಾಂಗ ಬಂಧನಕ್ಕೆ ತೆರಳುವಂತೆ ಆರೋಪಿ ಮುರುಘಾ ಶ್ರೀಗಳಿಗೆ ಸುಪ್ರೀಂ ಕೋರ್ಟ್ ಸೂಚನೆ ನೀಡಿದೆ. ಇನ್ನು 4 ತಿಂಗಳಲ್ಲಿ ತನಿಖೆ ಪೂರ್ಣಗೊಳ್ಳದಿದ್ದರೆ ಶ್ರೀಗಳ ನ್ಯಾಯಾಂಗ ಬಂಧನದ ಅವಧಿಯನ್ನು ಇನ್ನೆರಡು ತಿಂಗಳ ಕಾಲ ವಿಸ್ತರಣೆ ಮಾಡಬಹುದು. ಸುಪ್ರೀಂಕೋರ್ಟ್ ಆದೇಶದಂತೆ, ಮುರುಘಾ ಶ್ರೀಗಳು ಒಂದು ವಾರದೊಳಗೆ ಮ್ಯಾಜಿಸ್ಟ್ರೇಟ್ ಮುಂದೆ ಹಾಜರಾಗಬೇಕು. ಪ್ರಕರಣಕ್ಕೆ ಸಂಬಂಧಿಸಿದಂತೆ ಸಂತ್ರಸ್ಥೆಯರು ಹಾಗೂ ಪೋಷಕರ ವಿಚಾರಣೆಗೆ ಮುಗಿಸುವವರೆಗೂ ಶ್ರೀಗಳು ಬಂಧನದಲ್ಲಿರಬೇಕು ಎಂದು ಸುಪ್ರೀಂಕೋರ್ಟ್ ಹೇಳಿದೆ. 2022 ಆಗಸ್ಟ್ 31ರಂದು ಇಬ್ಬರು ಬಾಲಕಿಯರ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ ಆರೋಪದ ಮೇಲೆ ಮುರುಘಾ ಶ್ರೀಗಳ ವಿರುದ್ಧ ಪ್ರಕರಣ ದಾಖಲಾಗಿತ್ತು. ಸೆಪ್ಟೆಂಬರ್ 1ರಂದು ಶ್ರೀಗಳ ಬಂಧನವಾಗಿತ್ತು. ಸುಮಾರು 14 ತಿಂಗಳ ಕಾಲ ಜೈಲಿನಲ್ಲಿದ್ದ, ಶ್ರೀಗಳು 2023 ನವೆಂಬರ್ 16ರಂದು ಷರತ್ತು ಬದ್ಧ ಜಾಮೀನಿನ ಮೇಲೆ ಹೊರಗೆ ಬಂದಿದ್ದರು.



ಹೆಚ್.ಡಿ.ಕೋಟೆ ಪಟ್ಟಣದ ಇತಿಹಾಸ ಪ್ರಸಿದ್ಧಿ ಶ್ರೀಲಕ್ಷ್ಮೀ ವರದರಾಜಸ್ವಾಮಿ ಬ್ರಹ್ಮ ರಥೋತ್ಸವವು ಸಾವಿರಾರು ಜನ ಭಕ್ತಾದಿಗಳ ಸಮ್ಮುಖದಲ್ಲಿ ವಿಜೃಂಭಣೆಯಿಂದ ನೆರವೇರಿತು.

ಶಿಸ್ತು-ಒಗ್ಗಟ್ಟಿನೊಂದಿಗೆ ಆಧ್ಯಾತ್ಮದ ಪ್ರಜ್ಞೆಯು ವಿದ್ಯಾರ್ಥಿಗಳಿಗೆ ಅಗತ್ಯ

ಮೈಸೂರು ವಿಭಾಗದ ಎನ್‌ಸಿಸಿ ಕೆಡೆಟ್‌ಗಳಿಗೆ ನಡೆದ ಅಭಿನಂದನಾ ಸಮಾರಂಭದಲ್ಲಿ ಕರ್ನಲ್ ರೋಹಿತ್ ಠಾಕೂರ್ ಅಭಿಮತ



ಮೈಸೂರು,ಏ.23-ರಾಷ್ಟ್ರೀಯ ಜೀವನದಲ್ಲಿ ಯುವ ಜನತೆಯ ಪಾತ್ರ ದೊಡ್ಡದು. ದೇಶದ ಅಭಿವೃದ್ಧಿಯಲ್ಲಿ ಯುವಜನತೆ ಹಲವು ನೆಲೆಗಳಲ್ಲಿ ವ್ಯಕ್ತಿತ್ವವನ್ನು ಬೆಳೆಸಿಕೊಳ್ಳಬೇಕು ಎಂದು ಕರ್ನಲ್ ರೋಹಿತ್ ಠಾಕೂರ್ ತಿಳಿಸಿದ್ದಾರೆ.

ಮೈಸೂರು ಶ್ರೀ ಸುತ್ತೂರು ಮಠದಲ್ಲಿ 2024ರ ಗಣರಾಜ್ಯೋತ್ಸವ, ರಾಷ್ಟ್ರ ಮಟ್ಟದ ಶಿಬಿರ ಮತ್ತು ಸ್ಪರ್ಧೆಗಳಲ್ಲಿ ಭಾಗವಹಿಸಿದ ಮೈಸೂರು ವಿಭಾಗದ ಎನ್‌ಸಿಸಿ ಕೆಡೆಟ್‌ಗಳಿಗೆ ನಡೆದ ಅಭಿನಂದನಾ ಸಮಾರಂಭದಲ್ಲಿ ಭಾಗವಹಿಸಿ, ಮಾತನಾಡಿದರು.

ಎನ್‌ಸಿಸಿ ಕೆಡೆಟ್‌ಗಳಿಗೆ ಶಿಸ್ತು ಮತ್ತು ಒಗ್ಗಟ್ಟಿನೊಂದಿಗೆ ಅಧ್ಯಾತ್ಮದ ಪ್ರಜ್ಞೆಯು ಅಗತ್ಯ. ಅಧ್ಯಾತ್ಮದ ಅನುಭವ ಜೀವನದಲ್ಲಿ ಸರಿ ತಪ್ಪುಗಳ ವಿವೇಚನೆ ಮಾಡುವುದಕ್ಕೆ ಸಹಕಾರಿ. ದೇಶವನ್ನು ಅಧ್ಯಾತ್ಮದ ಅನುಭವವು ಸದೃಢಗೊಳಿಸುತ್ತಾ ಬಂದಿದೆ. ದೇಶ ಕಟ್ಟುವ ನಿಟ್ಟಿನಲ್ಲಿ ಹಿರಿಯರ ಪರಿಶ್ರಮವಿದೆ. ಯುವಜನತೆ ಮತ್ತು ಎನ್‌ಸಿಸಿ ಕೆಡೆಟ್‌ಗಳು ಇದನ್ನು ಅರಿತು ಸದೃಢ ದೇಶಕಟ್ಟುವಲ್ಲಿ ಭವಿಷ್ಯದ ಹೆಜ್ಜೆಗಳ ಬಗ್ಗೆ ಚಿಂತಿಸಬೇಕು. ದೇಶಪ್ರೇಮಿಗಳಿಂದ ಮಾತ್ರ ದೇಶದ ಸುಭದ್ರತೆ ಸಾಧ್ಯ. ಆದರೆ ಇಂದು ಸೇನೆಗೆ ಸೇರುವವರ ಸಂಖ್ಯೆ ಕಡಿಮೆಯಾಗುತ್ತಿರುವುದು ವಿಪರ್ಯಾಸ. ಈ ದಿಸೆಯಲ್ಲಿ ನಾವೆಲ್ಲ ಆಲೋಚಿಸ ಬೇಕಿದೆ ಎಂದರು.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿಯವರು ಆಶೀರ್ವಚನ ನೀಡಿ, ಎನ್‌ಸಿಸಿಯು ವಿದ್ಯಾರ್ಥಿಗಳಿಗೆ ರಾಷ್ಟ್ರಭಕ್ತಿಯನ್ನು ಮತ್ತು ಶಿಸ್ತನ್ನು ಬೆಳೆಸುವ ಅತ್ಯುತ್ತಮ ಮಾಧ್ಯಮವಾಗಿದೆ. ದೇಶ ಮತ್ತು ಗುರು ಹಿರಿಯರ ಮೇಲೆ ಗೌರವ ಮತ್ತು ಭಕ್ತಿಯ ಭಾವ ಸಹಜವಾಗಿ ಮೂಡುವಂತೆ ಮಾಡುತ್ತದೆ. ಎನ್‌ಸಿಸಿಯಲ್ಲಿ ಎಲ್ಲಾ ಮಟ್ಟದ ವಿದ್ಯಾರ್ಥಿಗಳು ಸಕ್ರಿಯವಾಗಿ ಭಾಗವಹಿಸಿ, ಅತ್ಯುತ್ತಮವಾದ ಸಾಧನೆಗಳನ್ನು ಮಾಡಿ ವಿಶೇಷ ಅನುಭವಗಳನ್ನು ಮತ್ತು ಆತ್ಮವಿಶ್ವಾಸವನ್ನು ಪಡೆದುಕೊಂಡಿದ್ದಾರೆ. ಇದು ಇತರ ವಿದ್ಯಾರ್ಥಿಗಳಿಗೆ ಪ್ರೇರಕವಾಗಲಿ. ಇದರಿಂದ ಅವರ ಶೈಕ್ಷಣಿಕ ಮತ್ತು ರಾಷ್ಟ್ರೀಯ ಜೀವನ ಉನ್ನತವಾಗಲಿದೆ. ನಮ್ಮ ದೇಶದ ಆಧ್ಯಾತ್ಮಿಕ ಸಂಪತ್ತು ದೊಡ್ಡದು. ಧಾರ್ಮಿಕತೆ ಮತ್ತು ಆಧ್ಯಾತ್ಮಿಕತೆ ಭಾರತೀಯರಲ್ಲಿ ರಕ್ತಗತವಾಗಿರುತ್ತದೆ. ಅಧ್ಯಾತ್ಮದಲ್ಲಿ ಸಾಗಿದಾಗ ಎಲ್ಲರೂ ಯಶಸ್ಸನ್ನು ಪಡೆಯಲು ಸಾಧ್ಯ ಎಂದು ತಿಳಿಸಿದರು.

ಜೆಎಸ್‌ಎಸ್ ಕಾಲೇಜಿನ ಮುಖ್ಯ ಕಾರ್ಯನಿರ್ವಾಹಕ ಪ್ರೊ. ಬಿ.ವಿ. ಸಾಂಬಶಿವಯ್ಯ ಪ್ರಾಸ್ತಾವಿಕ ನುಡಿಗಳನ್ನಾಡಿ, ಜೆಎಸ್‌ಎಸ್ ಮಹಾವಿದ್ಯಾಪೀಠದ ಅಡಿಯಲ್ಲಿ 300ಕ್ಕೂ ಅಧಿಕ ಸಂಸ್ಥೆಗಳನ್ನು ಸ್ಥಾಪಿಸಿ, ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ, ಆರೋಗ್ಯ - ಹೀಗೆ ನಾನಾ ಕ್ಷೇತ್ರಗಳಲ್ಲಿ ಅವಿರತವಾಗಿ ಸೇವೆಯನ್ನು ಸಲ್ಲಿಸುತ್ತಿದೆ. ದೆಹಲಿಯ ಗಣರಾಜ್ಯೋತ್ಸವದ ಶಿಬಿರದಲ್ಲಿ 22 ಕೆಡೆಟ್‌ಗಳು; ಥಾಲ್ ಸೈನಿಕ್ ಶಿಬಿರದಲ್ಲಿ 16 ಹುಡುಗರು ಮತ್ತು 22 ಹುಡುಗಿಯರು; ಅಖಿಲ ಭಾರತ ನೌಕ ಸೈನಿಕ ಶಿಬಿರದಲ್ಲಿ 6 ಕೆಡೆಟ್‌ಗಳು; ಅಖಿಲ ಭಾರತ ವಾಯು ಸೈನಿಕ ಶಿಬಿರದಲ್ಲಿ 3 ಕೆಡೆಟ್‌ಗಳು ಭಾಗವಹಿಸಿದ್ದಾರೆ ಎಂದು ತಿಳಿಸಿದರು.

ಭಾಷೆಗಳ ಉಗಮಕ್ಕೆ ಚಿತ್ರಕಲಾ ಕಾರಣ

ಜೆಎಸ್‌ಎಸ್ ಮಹಾವಿದ್ಯಾಪೀಠದ ಚಿತ್ರಕಲಾ ಶಿಬಿರ ಸಮಾರೋಪದಲ್ಲಿ ಕೆ.ಸಿ.ಮಹದೇವಶೆಟ್ಟಿ



ಮೈಸೂರು,ಏ.23-ಭಾಷೆಗಳ ಉಗಮಕ್ಕೆ ಚಿತ್ರಕಲೆ ಕಾರಣ ಎಂದು ಶ್ರೀ ಕಲಾನಿಕೇತನ ಕಲಾ ಕಾಲೇಜಿನ ಪ್ರಾಂಶುಪಾಲರೂ ಆದ ರಾಜ್ಯ ಲಲಿತಕಲಾ ಅಕಾಡೆಮಿ ಸದಸ್ಯ ಕೆ.ಸಿ.ಮಹದೇವಶೆಟ್ಟಿ ಹೇಳಿದರು.

ಜೆಎಸ್‌ಎಸ್ ಮಹಾವಿದ್ಯಾಪೀಠವು ರಾಜೇಂದ್ರ ಭವನದಲ್ಲಿ ಏರ್ಪಡಿಸಿದ್ದ ಚಿತ್ರಕಲಾ ಶಿಬಿರದ ಸಮಾರೋಪ ಸಮಾರಂಭದಲ್ಲಿ ಮಕ್ಕಳ ಚಿತ್ರಕಲಾ ಪ್ರದರ್ಶನ ಉದ್ಘಾಟಿಸಿ ಮಾತನಾಡಿದ ಅವರು, ಅಕ್ಷರಗಳ ತಾಯಿ ಚಿತ್ರಕಲೆ. ಆದಿಮಾನವ ಮೊದಲು ಸಂಜ್ಞೆ ಬಳಸುತ್ತಿದ್ದ. ನಂತರ ಚಿತ್ರ ಬಿಡಿಸುವುದನ್ನು ಕಲಿತ ಎಂದರು.

ಶಿಬಿರದಲ್ಲಿ ಮಕ್ಕಳು ರಚಿಸಿರುವ ಚಿತ್ರಕಲೆಗಳು ಮನಸ್ಸಿಗೆ ಆಹ್ಲಾದವನ್ನುಂಟು ಮಾಡುತ್ತವೆ. ಮಕ್ಕಳ ಮನಸ್ಸು ಪ್ರಬುದ್ಧವಾಗಿ ಬೆಳೆಯಲು ಚಿತ್ರಕಲೆ ಅವಶ್ಯಕ ಎಂದರು.

ಅಧ್ಯಕ್ಷತೆ ವಹಿಸಿದ್ದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್ ಮಾತನಾಡಿ, ಮಕ್ಕಳ ಬೇಸಿಗೆ ಶಿಬಿರಗಳು ಸಂಪೂರ್ಣ ವಾಣಿಜ್ಯೀಕರಣಗೊಂಡಿದ್ದು, ಬಹುತೇಕ ಕಡೆ ಪಾಶ್ಚಾತ್ಯ ಸಂಗೀತ ಮತ್ತಿತರವುಗಳನ್ನು ಕಲಿಸುತ್ತಿರುವಾಗ ಜೆಎಸ್‌ಎಸ್ ಮಹಾವಿದ್ಯಾಪೀಠ ಕಳೆದ ಚಿತ್ರಕಲಾ ಶಿಬಿರವನ್ನು ನಡೆಸಿಕೊಂಡು ಬರುತ್ತಿರುವುದು ಮೆಚ್ಚಬೇಕಾದ ಸಂಗತಿ ಎಂದರು.

ಶಿಬಿರದ ಸಂಚಾಲಕ ಎಸ್.ಎಂ. ಜಂಬುಕೇಶ್ವರ ಪ್ರಾಸ್ತಾವಿಕ ಭಾಷಣ ಮಾಡಿ, ಮಕ್ಕಳಿಗೆ ಬೆಳಗ್ಗೆ 9ರಿಂದ ಮಧ್ಯಾಹ್ನ 1ರವರೆಗೆ ನಿಸರ್ಗದ ಮರದ ನೆರಳಿನಡಿ ಕೂರಿಸಿ, ಚಿತ್ರಕಲೆ ಕಲಿಸಲಾಗುತ್ತದೆ. ನಾವು ಬೇರೆಡೆಯಿಂದ ಸಂಪನ್ಮೂಲ ವ್ಯಕ್ತಿಗಳನ್ನು ಕರೆಸಿಲ್ಲ. ಜೆಎಸ್‌ಎಸ್ ಸಂಸ್ಥೆಗಳಲ್ಲಿ ಕೆಲಸ ಮಾಡುವ ಚಿತ್ರಕಲಾ ಶಿಕ್ಷಕರೇ ಆಸಕ್ತಿಯಿಂದ ಮಕ್ಕಳಿಗೆ ಕಲಿಸುತ್ತಾರೆ ಎಂದು ಹೇಳಿದರು.

ಶಿಬಿರಾರ್ಥಿಗಳಾದ ಧೃತಕೀರ್ತಿ, ಅಭಿನಂದನ್, ಧನ್ಯಾ ಡಿ. ಪ್ರಭು, ಪೋಷಕರಾದ ಕಾಶೀನಾಥ್, ಆಶಾ, ರೇಖಾ ಶಿಬಿರದ ಬಗ್ಗೆ ಅನಿಸಿಕೆಗಳನ್ನು ಹಂಚಿಕೊಂಡರು. ಶಿಬಿರಾರ್ಥಿ ಬಿ.ಲಿಖಿತಾ ಪ್ರಾರ್ಥಿಸಿದರು. ಹಾಗೂ ವರದಿ ಓದಿದರು. ಶಿಕ್ಷಕ ಎಂ.ನಾಗೇಂದ್ರ ಸ್ವಾಗತಿಸಿದರು. ಶಿಕ್ಷಕ ಡಿ.ಎಸ್.ನಾಗರಾಜಪ್ಪ ವಂದಿಸಿದರು. ಶಿಕ್ಷಕ ಪಿ.ಎಸ್.ಸಲಬಣ್ಣ ವರ್ ನಿರೂಪಿಸಿದರು. ಶಿಕ್ಷಕರಾದ ಪಲ್ಲೇದ, ವೆಂಕಟರಾಜು, ಮೌನೇಶ್ ಬಡಿಗೇರ್, ಬಿ.ಎಂ.ಕೆರೂರ್, ಜೆಎಸ್‌ಎಸ್ ಸಾಮಾನ್ಯ ಶಿಕ್ಷಣ ವಿಭಾಗದ ಅಧಿಕಾರಿಗಳಾದ ರೇಣುರ್ ಸ್ವಾಮಿ, ಚನ್ನಬಸಪ್ಪ, ನಾಗರಾಜು ಇದ್ದರು.

ಬಹುಮಾನ ವಿಜೇತರು

ಶಿಬಿರದಲ್ಲಿ ಒಟ್ಟು 71 ಮಂದಿ ಭಾಗವಹಿಸಿದ್ದರು. ಶಿಬಿರದಲ್ಲಿ ಬಿಡಿಸಿದ ಚಿತ್ರಗಳಿಗೆ ಮೂರು ವಿಭಾಗಗಳಲ್ಲಿ ತಲಾ ನಾಲ್ಕು ಬಹುಮಾಗಳನ್ನು ನೀಡಲಾಯಿತು. 1-4 ತರಗತಿ ವಿಭಾಗ- ಐಸಿರಿ, ಧ್ವನಿತ್, ಹರ್ಷಿತಾ, ಮೋನಿಶ್, 5ರಿಂದ 7ನೇ ತರಗತಿ ವಿಭಾಗ- ಶ್ರುತಿ ಕೀರ್ತಿ, ಅಭಿನಂದನ್, ಧೃತಿ, ವರ್ಷಿನಿ, 8 ರಿಂದ 11 ನೇ ತರಗತಿ ವಿಭಾಗ- ಹ್ಯಬಾ, ಲಿಖಿತಾ, ಚಂದನ, ರಾಜಗುರು ಬಹುಮಾನಗಳನ್ನು ಪಡೆದರು.



ರಾಜ್ಯ ಸಿದ್ದರಾಮಯ್ಯ ಅಭಿಮಾನಿ ಬಳಗದ ಮೈಸೂರು ಜಿಲ್ಲಾಧ್ಯಕ್ಷ ಬೋಗಾದಿ ಕೆ.ಮಹದೇವಸ್ವಾಮಿ ನೇತೃತ್ವದಲ್ಲಿ ಮೈಸೂರು-ಕೊಡಗು ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಲಕ್ಷ್ಮಣ ಅವರ ಗೆಲುವಿಗೆ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಗ್ಯಾರಂಟಿ ಕಾರ್ಡ್ ವಿತರಿಸಲಾಯಿತು. ಈ ವೇಳೆ ಎಂ.ನಾಗರಾಜ್, ಡಾ.ಹರೀಶ್, ಸತೀಶ್, ಹಿನಕಲ್ ಗಿರೀಶ್, ರಂಗಣ್ಣ, ಮಹದೇವಪ್ರಸಾದ್, ಚೆಟ್ಟಿಹುಂಡಿ ರಾಜಪ್ಪ, ಶಿವಣ್ಣ, ಮಣಿಕಂಠ ಇನ್ನಿತರರಿದ್ದರು.



ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯಲೆಂದು ಕಾವೇರಿ ಕ್ರಿಯಾ ಸಮಿತಿ ವತಿಯಿಂದ ತಲಕಾವೇರಿಯಲ್ಲಿ ಕಾವೇರಿ ಮಾತೆ, ಅಗಸ್ತೇಶ್ವರ ಮತ್ತು ಬಗಂಡೇಶ್ವರ ದೇವಸ್ಥಾನದಲ್ಲಿ ಸಮಿತಿ ಅಧ್ಯಕ್ಷ ಹಾಗೂ ಬಿಜೆಪಿ ನಾಯಕ ಎಸ್.ಜಯಪ್ರಕಾಶ್ ವಿಶೇಷ ಪೂಜೆ ಸಲ್ಲಿಸಿದರು. ಈ ವೇಳೆ ಸಮಿತಿಯ ಮೂಗೂರು ನಂಜುಂಡಸ್ವಾಮಿ, ಎಂ.ಜೆ. ಸುರೇಶ್‌ಗೌಡ, ಸೌಭಾಗ್ಯ, ಎಸ್.ಚೇತನ್, ರಮೇಶ್, ತೇಜಸ್ ಲೋಕೇಶ್‌ಗೌಡ, ನಾಗರಾಜ್, ಬೋಗಾದಿ ಸಿದ್ದೇಗೌಡ, ವರಕೂಡು ಕೃಷ್ಣೇಗೌಡ, ಮಹೇಶ್‌ಗೌಡ, ಮಹದೇವ್, ಕನ್ನಡಾಂಬೆ ಸೇನೆಯ ರಾಜ್ಯಾಧ್ಯಕ್ಷ ರಾಜಶೇಖರ್, ರವೀಶ್, ಹನುಮಂತಯ್ಯ, ಶಿವಕುಮಾರ್, ಪ್ರಭಾಕರ್, ಹನುಮಂತೇಗೌಡ ಮತ್ತಿತರರು ಹಾಜರಿದ್ದರು.

ಸೇಂಟ್ ಫಿಲೋಮಿನಾ ಕಾಲೇಜಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರ



ಮೈಸೂರು,ಏ.23-ಸೇಂಟ್ ಫಿಲೋಮಿನಾ ಕಾಲೇಜು ಹಾಗೂ ಯೂತ್ ರೆಡ್ ಕ್ರಾಸ್ ಮತ್ತು ಎನ್.ಎಸ್.ಎಸ್ ಮತ್ತು ಜೀವದಾರ ರಕ್ತ ನಿಧಿ ಕೇಂದ್ರದ ಸಹಯೋಗದೊಂದಿಗೆ ಬನ್ನಿಮಂಟಪದಲ್ಲಿರುವ ಸೇಂಟ್ ಫಿಲೋಮಿನಾ ಕಾಲೇಜು ಆವರಣದಲ್ಲಿ ಸ್ವಯಂಪ್ರೇರಿತ ರಕ್ತದಾನ ಶಿಬಿರ ಆಯೋಜಿಸಲಾಗಿತ್ತು. ಕಾಲೇಜಿನ 70 ಯುವಕ-ಯುವತಿಯರು ಸ್ವಯಂ ಪ್ರೇರಿತ ರಕ್ತದಾನ ಮಾಡಿದರು.

ಈ ವೇಳೆ ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್ ಮಾತನಾಡಿ, ತುರ್ತು ಸಂದರ್ಭಗಳಲ್ಲಿ ರಕ್ತದ ಕೊರತೆಯಿಂದ ನಿತ್ಯ ಅನೇಕ ಮಂದಿ ರೋಗಿಗಳು, ಗರ್ಭಿಣಿಯರು, ಅಪಘಾತದಲ್ಲಿ ಗಾಯಗೊಂಡವರು ಸಾವಿಗೀಡಾಗುತ್ತಿದ್ದು, ರಕ್ತದ ಕೊರತೆಯಿಂದ ಜೀವನ್ಮರಣದ ನಡುವೆ ಹೋರಾಟ ನಡೆಸುವವರಿಗೆ ರಕ್ತದಾನದ ಮೂಲಕ ಮರುಜನ್ಮ ನೀಡಿ ಪ್ರತಿಯೊಬ್ಬರು ತಮ್ಮ ಜೀವನವನ್ನು ಜೀವನ ಸಾರ್ಥಕ ಪಡಿಸಿಕೊಳ್ಳಬೇಕಿದೆ ಎಂದರು.

ದೇಶದ ಪ್ರಗತಿಗೆ ಅಡಿಪಾಯವಾಗಿರುವ ಯುವಜನರು ಕರ್ತವ್ಯ ಪ್ರಜ್ಞೆಯಿಂದ ಜವಾಬ್ದಾರಿ ಅರಿತು ಸ್ವಯಂ ಪ್ರೇರಿತ ರಕ್ತದಾನ ಶಿಬಿರಗಳಲ್ಲಿ ಪಾಲ್ಗೊಳ್ಳಬೇಕು. ಆಗ ಮಾತ್ರ ಉತ್ತಮ ಆರೋಗ್ಯವಂತ ಸಮಾಜ ನಿರ್ಮಾಣ ಆಗುತ್ತದೆ ಎಂದರು.

ವಿಶೇಷವಾಗಿ ಚುನಾವಣೆ ಕರ್ತವ್ಯದಲ್ಲಿ ಪ್ರತಿಯೊಬ್ಬರು ಕಾರ್ಯ ನಿರತರಾಗಿದ್ದಾರೆ ಹಾಗೂ ಬೇಸಿಗೆ ಸಂದರ್ಭದಲ್ಲಿ ರಕ್ತದಾನ ಮಾಡುವಲ್ಲಿ ಯಾರು ಮುಂದಾಗುತ್ತಿಲ್ಲ. ಇಂತಹ ಸಂದರ್ಭದಲ್ಲಿ ಸೇಂಟ್ ಫಿಲೋಮಿನಾ ಕಾಲೇಜ್ ವಿದ್ಯಾರ್ಥಿಗಳು ಸ್ವಯಂ ಪ್ರೇರಿತ ರಕ್ತದಾನ ಮಾಡಿರುವುದು ಶ್ಲಾಘನೀಯ ಎಂದು ಹೇಳಿದರು. ಈ ವೇಳೆ ಮ್ಯಾನೇಜರ್ ಡಾ.ಬರ್ನಾಡ್ ಪ್ರಕಾಶ್, ಪ್ರಾಂಶುಪಾಲರಾದ ಡಾ.ರವಿ ಜೆಡಿ ಸಲ್ಡಾನ್ಹಾ, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಫ್ರಾನ್ಸಿಸ್ ಡಿಸೋಜ, ದೀಪ್ತಿ, ಎನ್‌ಎಸ್‌ಎಸ್ ಆಡಳಿತ ಅಧಿಕಾರಿ ಜೋಯಲ್ ಹಾಗೂ ಇನ್ನಿತರರು ಹಾಜರಿದ್ದರು.

ಬರ ಪರಿಹಾರ ಸಂಬಂಧ ಕೇಂದ್ರಕ್ಕೆ ಸುಪ್ರೀಂಕೋರ್ಟ್ ನಿರ್ದೇಶನ ನೀಡಿಲ್ಲ

ಮಾನಗೆಟ್ಟ ಕಾಂಗ್ರೆಸ್‌ನಿಂದ ತಪ್ಪು ವ್ಯಾಖ್ಯಾನ



ಬೆಂಗಳೂರು: ಬರ ಪರಿಹಾರ ಬಿಡುಗಡೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಕೇಂದ್ರ ಸರ್ಕಾರಕ್ಕೆ ಯಾವುದೇ ನಿರ್ದೇಶನ ನೀಡಿಲ್ಲ. ಆದರೆ, ಮಾನಗೆಟ್ಟ ಕಾಂಗ್ರೆಸ್ ತಪ್ಪು ವ್ಯಾಖ್ಯಾನ ಮಾಡಿ ಜಯವೆಂದು ಬಿಂಬಿಸಿಕೊಳ್ಳುತ್ತಿದೆ ಎಂದು ವಿಧಾನಸಭೆ ಪ್ರತಿಪಕ್ಷ ನಾಯಕ ಆರ್.ಅಶೋಕ್ ಚಾಟಿ ಬೀಸಿದರು. ಬಿಜೆಪಿ ಮಾಧ್ಯಮ ಕೇಂದ್ರದಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ರಾಜ್ಯ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿದರು.

ಬರ ಪರಿಹಾರ ಬಿಡುಗಡೆ ವಿಚಾರದಲ್ಲಿ ಸುಪ್ರೀಂಕೋರ್ಟ್ ಕೇಂದ್ರ ಸರ್ಕಾರಕ್ಕೆ ಯಾವುದೇ ನಿರ್ದೇಶನ ನೀಡಿಲ್ಲ. ಕೇಂದ್ರ ಸರ್ಕಾರವೇ ಚುನಾವಣಾ ಆಯೋಗದ ಅನುಮತಿ ಕೇಳಿದ್ದು, ಅದಕ್ಕೆ ಚುನಾವಣಾ ಆಯೋಗ ಅನುಮತಿ ನೀಡಿದೆ. ಈ ವಿಷಯವನ್ನು ನ್ಯಾಯಾಲಯದ ಗಮನಕ್ಕೆ ತಂದಿದೆ. ಇದೇ ವಿಷಯವನ್ನು ಸುಪ್ರೀಂಕೋರ್ಟ್‌ನಲ್ಲಿ ಕೇಂದ್ರ ಸರ್ಕಾರದ ಪರವಾಗಿ ಹಾಜರಿದ್ದ ಅಟಾರ್ನಿ ಜನರಲ್ ಪ್ರಸ್ತಾಪಿಸಿ, 'ನೆಕ್ಸ್ಟ್ ಮಂಡೆ (ಏಪ್ರಿಲ್ 29) ಸಮ್ ಥಿಂಗ್ ವಿಲ್ ಬಿ ಹ್ಯಾಪನ್' ಎಂದಾಗ ಕಾಂಗ್ರೆಸ್ ಪರ ವಕೀಲ ಕಪಿಲ್ ಸಿಬಲ್ ಸಹಮತ ವ್ಯಕ್ತಪಡಿಸಿದ್ದಾರೆ. ಈ ಕೇಸ್‌ನಲ್ಲಿ ವಾದ ಮಾಡುವ ಅಗತ್ಯವೇನಿಲ್ಲವೆಂದು ನ್ಯಾಯಾಲಯ ಹೇಳಿದೆ.

ಕೇಂದ್ರ ಸರ್ಕಾರದಿಂದ ಅನ್ಯಾಯವಾಗಿದೆ, ತೊಂದರೆ ನೀಡುತ್ತಿದೆ ಎಂದು ರಾಜ್ಯದ ಪರ ವಕೀಲ ವಾದ ಮಾಡಿಲ್ಲ. ಸುಪ್ರೀಂ ಕೋರ್ಟ್ ಅವಕಾಶ ಕೊಟ್ಟಿಲ್ಲ. ವಾರದೊಳಗೆ ಬಿಡುಗಡೆ ಮಾಡಿ ಎಂದೂ ಆದೇಶಿಸಿಲ್ಲ. ಕೇಂದ್ರ ಸರ್ಕಾರ ಈ ನಿಟ್ಟಿನಲ್ಲಿ ಮಾಡಿರುವ ಪ್ರಯತ್ನಗಳಿಗೆ ರಾಜ್ಯದ ಪರ ವಕೀಲ ಸಹಮತ ವ್ಯಕ್ತಪಡಿಸಿದರೆ, ವಾದ ಅಗತ್ಯವಿಲ್ಲವೆಂದು ಸುಪ್ರೀಂಕೋರ್ಟ್‌ಗೆ ನಿವೇದಿಸಿಕೊಂಡಿದ್ದಾರೆ.

ಆದರೆ, ಸುಪ್ರೀಂಕೋರ್ಟ್‌ನಲ್ಲಿ ಜಯವಾಗಿದೆ. ವಾರದೊಳಗೆ ಪರಿಹಾರ ಧನ ಬಿಡುಗಡೆ ಮಾಡಲು ಆದೇಶಿಸಿದೆ ಎಂದು ಕಾಂಗ್ರೆಸ್ ಹೇಳಿಕೊಳ್ಳುತ್ತಿರುವುದು ನಾಚಿಕೆಗೇಡಿನ ಸಂಗತಿ. ಕೇಂದ್ರ ಸರ್ಕಾರ ಎಲ್ಲ ರಾಜ್ಯಗಳನ್ನು ಸಮಾನವಾಗಿ ನೋಡಬೇಕಾಗುತ್ತದೆ. ತ್ವರಿತವಾಗಿ ಪರಿಹಾರ ನಿಧಿ ಬಿಡುಗಡೆ ಮಾಡಲು ಅನುಮತಿ ಕೋರಿ ಚುನಾವಣೆ ಆಯೋಗಕ್ಕೆ ಪತ್ರ ಬರೆದು, ಒಪ್ಪಿಗೆ ಪಡೆದಿದೆ. ಅದಕ್ಕಾಗಿ ಅಭಿನಂದನೆ ಸಲ್ಲಿಸುವೆ ಎಂದು ತಿಳಿಸಿದರು.

ಕೇಂದ್ರ ಸರ್ಕಾರ ಎಸ್‌ಡಿಆರ್‌ಎಫ್ ಅಡಿ ಈಗಾಗಲೇ ರೂ.700 ಕೋಟಿ ಕೊಟ್ಟಿದೆ. ಆ ಹಣದಲ್ಲೇ ರೂ.2,000 ಪರಿಹಾರ ನೀಡುತ್ತಿದೆ. ಆದರೆ, ಕೇಂದ್ರ ಸರ್ಕಾರ ಬಿಡುಗಡೆ ಮಾಡಿದ ಹಣದ ಬಗ್ಗೆ ಯಾವುದೇ ಪ್ರಸ್ತಾಪ ಮಾಡುತ್ತಿಲ್ಲ ಈ ರೂ.700 ಕೋಟಿಯಲ್ಲಿ ಶೇ 25 ರಷ್ಟು ಹಣವನ್ನು ರಾಜ್ಯ ಸರ್ಕಾರ ನೀಡಬೇಕು.

ಸಾಮಾನ್ಯವಾಗಿ ಬರಕ್ಕೆ ಸಂಬಂಧಿಸಿದಂತೆ ಎಲ್ಲ ರಾಜ್ಯಗಳಿಂದ ಹಣ ಬಂದ ಬಳಿಕವೇ ಪರಿಹಾರವನ್ನು ಕೊಡುವ ವ್ಯವಸ್ಥೆ ಮಾಡಲಾಗುತ್ತದೆ. ಹಿಂದಿನಿಂದಲೂ ಇದೇ ಪರಂಪರೆ ನಡೆದುಕೊಂಡು ಬಂದಿದೆ. ಆದರೆ, ಸಿದ್ದರಾಮಯ್ಯ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಐದು ಗ್ಯಾರಂಟಿಗಳನ್ನು ಜಾರಿ ತಂದಿತು. ಅದಕ್ಕೆ ಯಾವುದೇ ತಯಾರಿ ಮಾಡಿಕೊಂಡಿರಲಿಲ್ಲ. ಇದರಿಂದಾಗಿ ಸರ್ಕಾರದ ಖಜಾನೆ ಖಾಲಿ ಆಗಿದೆ. ಯಾವುದೇ ಗ್ಯಾರಂಟಿ ಜನರಿಗೆ ತಲುಪಿಲ್ಲ. ಆದ್ದರಿಂದ ರೊಚ್ಚಿಗೆದ್ದಿದ್ದಾರೆ. ಹೀಗಾಗಿ ಜನರ ಗಮನ ಬೇರೆಡೆ ಸೆಳೆಯಲು ಕೇಂದ್ರದ ಮೇಲೆ ಗೂಬೆ ಕೂರಿಸುವ ಪ್ರಯತ್ನ ನಿರಂತರ ಮಾಡುತ್ತಲೇ ಬಂದಿದೆ. ಯಾವುದೇ ಅಭಿವೃದ್ಧಿಗೂ ರಾಜ್ಯ ಸರ್ಕಾರದಲ್ಲಿ ಹಣ ಇಲ್ಲ, ಗ್ಯಾರಂಟಿಗಳಲ್ಲಿ ಎಲ್ಲರಿಗೂ ಅದರ ಪ್ರಯೋಜನ ಸಿಗುತ್ತಿಲ್ಲ, ತೆರಿಗೆ ಸಂಗ್ರಹಣೆ ಕಡಿಮೆ ಆಗಿದೆ. ಜನ ಸರ್ಕಾರಕ್ಕೆ ಶಾಪ ಹಾಕುತ್ತಿದ್ದಾರೆ. ಹಾಲಿನ ಸಬ್ಸಿಡಿ ರೂ.700 ಕೋಟಿಯನ್ನು ರೈತರಿಗೆ ಕೊಟ್ಟಿಲ್ಲ. ಚುನಾವಣೆ ಮುಗಿದ ಬಳಿಕ ನೌಕರರಿಗೆ ಸಂಬಳ ಪಾವತಿ ಮಾಡಲು ಹಣವಿಲ್ಲ, ನೌಕರರು ಸಂಕಷ್ಟಕ್ಕೆ ಸಿಲುಕುತ್ತಾರೆ ಎಂದು ದೂರಿದರು. ನೇಹಾ ಹತ್ಯೆ ಹಿರೇಮಠ ಹತ್ಯೆ ಬೆನ್ನಲ್ಲೇ ಯಾದಗಿರಿ ಜಿಲ್ಲೆಯಲ್ಲಿ ದಲಿತ ಯುವಕನ ಹತ್ಯೆಯಾಗಿದೆ. ಕಾಂಗ್ರೆಸ್ ಮುಸ್ಲಿಂ ಓಲೈಕೆಯು ಜನರನ್ನು ರೊಚ್ಚಿಗೆಬ್ಬಿಸಿದೆ. ಹಿಂದು ಕಾರ್ಯಕರ್ತರ ಆಕ್ರೋಶ ಭುಗಿಲೆದ್ದು, ಹೆಚ್ಚು ಫೋಕಸ್ ಆಗುತ್ತಿರುವ ಕಾರಣ ವಿಷಯಾಂತರಕ್ಕೆ ಕಾಂಗ್ರೆಸ್ ಹವಣಿಸಿದೆ. ವಿಧಾನಸೌಧ ಆವರಣದಲ್ಲಿ ಪ್ರತಿಭಟನೆ ನಡೆಸಿ ನೀತಿ ಸಂಹಿತೆ ಉಲ್ಲಂಘಿಸಿದೆ.. ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಚುನಾವಣಾ ಆಯೋಗಕ್ಕೆ ದೂರು ಕೊಡುತ್ತೇವೆ ಎಂದು ಹೇಳಿದರು.

'10 ದಿನಗಳ ಎಂಬಿಎ' ಕೋರ್ಸ್ ಬಗ್ಗೆ ಯುಜಿಸಿ ಎಚ್ಚರಿಕೆ

ನವದೆಹಲಿ: ಮಾನ್ಯತೆ ಇರುವ ಪದವಿ ಕೋರ್ಸ್‌ಗಳ ಹೆಸರಗಳನ್ನೇ ಹೋಲುವ ಸಂಕ್ಷಿಪ್ತ ಹೆಸರುಗಳ ಮೂಲಕ ನಕಲಿ ಆನ್‌ಲೈನ್ ಕಾರ್ಯಕ್ರಮಗಳನ್ನು ನಡೆಸುತ್ತಿರುವ ವ್ಯಕ್ತಿಗಳು ಮತ್ತು ಸಂಸ್ಥೆಗಳ ಬಗ್ಗೆ ವಿಶ್ವವಿದ್ಯಾಲಯ ಅನುದಾನ ಆಯೋಗ (ಯುಜಿಸಿ) ಸಾರ್ವಜನಿಕರಿಗೆ ಎಚ್ಚರಿಕೆ ನೀಡಿದೆ. ಅದರಲ್ಲೂ, ವಿಶೇಷವಾಗಿ '10 ದಿನಗಳ ಎಂಬಿಎ' ಕೋರ್ಸ್ ಬಗ್ಗೆ ಜನರು ಎಚ್ಚರಿಕೆಯಿಂದ ಇರಬೇಕು ಎಂದು ಆಯೋಗದ ಕಾರ್ಯದರ್ಶಿ ಮನೀಷ್ ಜೋಶಿ ಹೇಳಿದ್ದಾರೆ.

ಪ್ರವೇಶ ಪಡೆಯಲು ಅಗತ್ಯವಿರುವ ಶೈಕ್ಷಣಿಕ ಅರ್ಹತೆ ಕುರಿತು ಯುಜಿಸಿ ನಿರ್ಧರಿಸಿರುತ್ತದೆ. ಈ ಕುರಿತು ಕೇಂದ್ರ ಸರ್ಕಾರದ ಅನುಮೋದನೆ ಪಡೆಯುವ ಜೊತೆಗೆ, ಗೆಜೆಟ್‌ನಲ್ಲಿ ಈ ಕುರಿತು ಅಧಿಸೂಚನೆಯನ್ನು ಸಹ ಪ್ರಕಟಿಸಲಾಗಿರುತ್ತದೆ ಎಂದು ಅವರು ಹೇಳಿದ್ದಾರೆ.

ವಿಶ್ವವಿದ್ಯಾಲಯ ಅಥವಾ ಡೀಮ್ಡ್ ಟುಬಿ ವಿಶ್ವವಿದ್ಯಾಲಯ ಇಲ್ಲವೇ ಸಂಸ್ಥೆಯೊಂದು ಮಾತ್ರ ಪದವಿ ಪ್ರದಾನ ಮಾಡುವ ಹಕ್ಕು ಹೊಂದಿರುತ್ತದೆ ಎಂದೂ ಅವರು ಸ್ಪಷ್ಟನೆ ನೀಡಿದ್ದಾರೆ. ಉನ್ನತ ಶಿಕ್ಷಣ ಸಂಸ್ಥೆಗಳು ಯಾವುದೇ ಆನ್‌ಲೈನ್ ಕೋರ್ಸ್ ಆರಂಭಿಸಬೇಕಿದ್ದರೂ, ಅದಕ್ಕೆ ಯುಜಿಸಿಯಿಂದ ಅನುಮೋದನೆ ಪಡೆಯುವುದು ಅಗತ್ಯ. ಆನ್‌ಲೈನ್ ಕೋರ್ಸ್ ನಡೆಸಲು ಯುಜಿಸಿಯಿಂದ ಮಾನ್ಯತೆ ಹೊಂದಿರುವ ಉನ್ನತ ಶಿಕ್ಷಣ ಸಂಸ್ಥೆಗಳ ಪಟ್ಟಿಯು ಆಯೋಗದ ವೆಬ್‌ಸೈಟ್‌ನಲ್ಲಿ (deb.ugc.ac.in) ಲಭ್ಯ ಇದೆ ಎಂದು ತಿಳಿಸಿದ್ದಾರೆ.



ಹಿಂದುಳಿದ ವರ್ಗಗಳ ನಾಯಕರಿಗೆ ಬಿಜೆಪಿಯಲ್ಲಿ ಉಳಿಗಾಲವಿಲ್ಲ

ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ ಅಭಿಮತ

ಮೈಸೂರು, ಏ.23(ಬಿಎಲ್‌ಯು)– ಮಾಜಿ ಉಪ ಮುಖ್ಯಮಂತ್ರಿ ಕೆ.ಎಸ್. ಈಶ್ವರಪ್ಪ ಅವರನ್ನು ಬಿಜೆಪಿ ಉಚ್ಚಾಟಿಸಿ ಮಹಾ ಮೋಸ ಮಾಡಿದ್ದು, ಬಿಜೆಪಿಯಲ್ಲಿರುವ ಎಲ್ಲಾ ಹಿಂದುಳಿದ ವರ್ಗಗಳ ನಾಯಕರು ಇದರಿಂದ ಎಚ್ಚೆತ್ತುಕೊಳ್ಳಿ ಎಂದು ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ಅಧ್ಯಕ್ಷ ಸುಬ್ರಹ್ಮಣ್ಯ ಮನವಿ ಮಾಡಿದ್ದಾರೆ.



ಬಿಜೆಪಿಯ ಪ್ರಾಮಾಣಿಕ ಕಾರ್ಯಕರ್ತನಾಗಿ ವಿವಿಧ ಜವಾಬ್ದಾರಿ ನಿರ್ವಹಿಸಿದ ಈಶ್ವರಪ್ಪ ಪಕ್ಷದ ಸಂಘಟನೆಗೆ ಹಗಲಿರುಳು ಶ್ರಮಿಸಿದ್ದರು. ಈ ಮೂಲಕ ಬಿಜೆಪಿಯಲ್ಲಿ ಕುರುಬ ಸಮುದಾಯದ ಕೊರತೆ ನೀಗಿಸಿದ್ದರು. ಆದರೆ ಇದನ್ನೆಲ್ಲಾ ಪರಿಗಣಿಸದೆ ಬಿಜೆಪಿ, ಈಶ್ವರಪ್ಪ ಅವರನ್ನು ಪಕ್ಷದಿಂದಲೇ ಉಚ್ಚಾಟಿಸಿದೆ. ಇದನ್ನು ಬಿಜೆಪಿಯಲ್ಲಿರುವ ಹಿಂದುಳಿದ ವರ್ಗಗಳ ನಾಯಕರು ಸೂಕ್ಷ್ಮವಾಗಿ ಅವಲೋಕಿಸಬೇಕು ಎಂದು ಸಲಹೆ ನೀಡಿದರು. ಲೋಕಸಭಾ ಚುನಾವಣೆಯಲ್ಲಿ ಕುರುಬ ಸಮುದಾಯದ ಯಾವೊಬ್ಬ ಅಭ್ಯರ್ಥಿಗೂ ಟಿಕೆಟ್ ನೀಡದೆ ಬಿಜೆಪಿ ಮೋಸ ಮಾಡಿದೆ. ಈ ಮೂಲಕ ಕುರುಬ ವಿರೋಧಿ ನೀತಿ ಅನುಸರಿಸಿದೆ. ಇದು ಕುರುಬ ಸಮುದಾಯಕ್ಕೆ ಅರ್ಥವಾಗಬೇಕು. ಇದನ್ನು ಮನಗಂಡು ಲೋಕಸಭಾ ಚುನಾವಣೆಯಲ್ಲಿ ಬಿಜೆಪಿಗೆ ತಕ್ಕ ಪಾಠ ಕಲಿಸಬೇಕು ಎಂದು ಸುಬ್ರಹ್ಮಣ್ಯ ಮನವಿ ಮಾಡಿದರು.

ಸದೃಢ ಆರ್ಥಿಕತೆಯಲ್ಲಿ ಭಾರತ 3ನೇ ಸ್ಥಾನಕ್ಕೇರಬೇಕೆಂಬ ಬದ್ಧತೆಯಲ್ಲಿ ಮುನ್ನಡೆದಿರುವ

ಪ್ರಧಾನಿ ಮೋದಿಯವರ ಕೈ ಬಲಪಡಿಸಲು ಕಮಲಕ್ಕೆ ಮತ ನೀಡಿ

ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಒಡೆಯರ್ ಮನವಿ





ಮೈಸೂರಿನ ಇಟ್ಟಿಗೆಗೂಡಿನಲ್ಲಿ ಮಂಗಳವಾರ ಸಂಜೆ ರೋಡ್ ಶೋ ಮೂಲಕ ಯದುವೀರ್ ಮತ ಯಾಚಿಸಿದರು. ಮತ್ತೊಂದು ಚಿತ್ರದಲ್ಲಿ ಮೈಸೂರಿನ ಕೆಸಿ ನಗರದ ಶ್ರೀ ವೈದ್ಯನಾಥೇಶ್ವರಸ್ವಾಮಿ ಸನ್ನಿಧಿಗೆ ಭೇಟಿ ನೀಡಿದ ಯದುವೀರ್, ದೇವರ ದರ್ಶನ ಪಡೆದರು. ಚಿತ್ರದಲ್ಲಿ ಗಂಜೀಫ ಕಲಾವಿದ ರಘುಪತಿ ಭಟ್, ಶಾಸಕ ಟಿ.ಎಸ್. ಶ್ರೀವತ್ಸ ಇತರರಿದ್ದಾರೆ.

ಮೈಸೂರು,ಏ.23(ಪಿಎಂ)–ಪ್ರಧಾನಿ ನರೇಂದ್ರ ಮೋದಿಯವರ ಆಡಳಿತದ ಫಲವಾಗಿ ಸದೃಢ ಆರ್ಥಿಕತೆಯಲ್ಲಿ ಜಗತ್ತಿನ ಐದನೇ ರಾಷ್ಟ್ರವಾಗಿ ಭಾರತ ಹೊರಹೊಮ್ಮಿದೆ. ಅಂತೆಯೇ ಮೂರನೇ ಸ್ಥಾನಕ್ಕೇರಿಸಬೇಕೆಂಬ ಗುರಿಯೊಂದಿಗೆ ಮುನ್ನಡೆದಿರುವ ಮೋದಿಯವರ ಕೈ ಬಲಪಡಿಸಲು ಕಮಲದ ಗುರುತಿಗೆ ಮತ ನೀಡಬೇಕೆಂದು ಮೈಸೂರು–ಕೊಡಗು ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ಮನವಿ ಮಾಡಿದರು.

ಮೈಸೂರಿನ ಇಟ್ಟಿಗೆಗೂಡಿನ ಜ್ವಾಲಾಮುಖಿ ವೃತ್ತದಲ್ಲಿ ಮಂಗಳವಾರ ಸಂಜೆ ರೋಡ್ ಶೋ ಮೂಲಕ ಮತ ಯಾಚಿಸಿ ಅವರು ಮಾತನಾಡಿದರು. ಕಳೆದ 10 ವರ್ಷಗಳ ಉತ್ತಮ ಆಡಳಿತದ ಮೂಲಕ ನರೇಂದ್ರ ಮೋದಿಯವರು ಭಾರತದ ಆರ್ಥಿಕತೆಯನ್ನು ಸದೃಢಗೊಳಿಸಿದ್ದಾರೆ. ದೇಶ ಅಭಿವೃದ್ಧಿಗೊಳಿಸಿರುವುದು ಮಾತ್ರವಲ್ಲದೆ, ನಮ್ಮ ನೆಲದ ಪರಂಪರೆ ಸಂರಕ್ಷಣೆಗೂ ಮೋದಿಯವರ ಕೊಡುಗೆ ಅಪಾರವಾಗಿದೆ. ದೇಶದ ಭದ್ರತೆಗೆ ಎಲ್ಲಾ ರೀತಿಯ ಸೂಕ್ತ ಕ್ರಮ ಕೈಗೊಂಡು ಯಶಸ್ವಿಯಾಗಿದ್ದಾರೆ. ಒಟ್ಟಾರೆ ದೇಶದ ಸರ್ವತೋಮುಖ ಅಭಿವೃದ್ಧಿಯನ್ನು ಪ್ರಧಾನಿ ನರೇಂದ್ರ ಮೋದಿ ಮಾಡಿದ್ದಾರೆ ಎಂದರು.

ಕಳೆದ 10 ವರ್ಷಗಳ ತಮ್ಮ ಆಡಳಿತದಲ್ಲಿ ಪ್ರಧಾನಿ ಮೋದಿಯವರು ಭವಿಷ್ಯದ ಭಾರತಕ್ಕೆ ಅಡಿಪಾಯ ಹಾಕಿದ್ದಾರೆ. ದೇಶದ ಅಭಿವೃದ್ಧಿ ಮತ್ತು ರಕ್ಷಣೆ ವಿಚಾರದಲ್ಲಿ ಮಹತ್ತರ ಬದ್ಧತೆಯನ್ನು ಅವರು ಹೊಂದಿರುವಾಗ ನಾವೆಲ್ಲರೂ ಅವರ ಬೆಂಬಲಕ್ಕೆ ನಿಲ್ಲಬೇಕಿದೆ. ಅದಕ್ಕಾಗಿ ಮತಗಟ್ಟೆಯಲ್ಲಿ ಕಮಲದ ಗುರುತಿಗೆ ಮತ ನೀಡಿ ಪ್ರಧಾನಿಯವರ ಕೈಬಲಪಡಿಸಿ, ಅವರೊಂದಿಗೆ ನಾನು ಮೈಸೂರು–ಕೊಡಗು ಕ್ಷೇತ್ರದಲ್ಲಿ ಸೇವೆ ಮಾಡುತ್ತೇನೆ. ತಾವೆಲ್ಲರೂ ನನ್ನ ಬಗ್ಗೆ ಇಂದು ತೋರುತ್ತಿರುವ ಉತ್ಸಾಹವು ಏ.26ರಂದು ಮತವಾಗಿ ಪರಿವರ್ತನೆಯಾಗಬೇಕು ಎಂದು ಕೋರಿದರು.

ಇಟ್ಟಿಗೆಗೂಡು ನಮ್ಮ ಅರಮನೆ ಬಳಿಯೇ ಇರುವ ಬಡಾವಣೆ. ಹಾಗಾಗಿ ನನ್ನ ನೈಬರ್ ಎಂದು ಇಟ್ಟಿಗೆಗೂಡನ್ನು ಹೇಳಿಕೊಳ್ಳಬಹುದು. ಅರಮನೆ ಮತ್ತು ಇಟ್ಟಿಗೆಗೂಡಿಗೂ ಅವಿನಾಭಾವ ಸಂಬಂಧ ಇದೆ. ಅಂತಹ ಸಂಬಂಧದೊಂದಿಗೆ ಒಳ್ಳೆಯ ಕೆಲಸ ಕೂಡ ಆಗಬೇಕಿದೆ. ಅದಕ್ಕಾಗಿ ನಿಮ್ಮೆಲ್ಲರ ಸಹಕಾರ ನನಗೆ ಕೊಡಿ. ಇಂದು ಹನುಮ ಜಯಂತಿಯಾಗಿದ್ದು, ಆಂಜನೇಯಸ್ವಾಮಿ ನಿಮ್ಮೆಲ್ಲರಿಗೂ ಆರೋಗ್ಯ ಮತ್ತು ಅಭಿವೃದ್ಧಿ ದಯಪಾಲಿಸಲಿ ಎಂದು ಪ್ರಾರ್ಥನೆ ಮಾಡುತ್ತೇನೆ ಎಂದರು.

ಕೆಸಿ ನಗರದಲ್ಲಿ ಮತ ಯಾಚನೆ: ಬಳಿಕ ಕೆಸಿ ನಗರಕ್ಕೆ ಭೇಟಿ ನೀಡಿದ ಯದುವೀರ ಅವರನ್ನು ಸ್ಥಳೀಯ ನಿವಾಸಿಗಳು ಆತ್ಮೀಯವಾಗಿ ಸ್ವಾಗತಿಸಿದರು. ನಂತರ ಇಲ್ಲಿನ ಶ್ರೀ ವೈದ್ಯನಾಥೇಶ್ವರ ಸ್ವಾಮಿ ಸನ್ನಿಧಿಗೆ ಭೇಟಿ ನೀಡಿದ ಯದುವೀರ್, ದೇವರ ದರ್ಶನ ಪಡೆದು, ತೀರ್ಥ ಪ್ರಸಾದ ಸ್ವೀಕರಿಸಿದರು.

ಇದೇ ವೇಳೆ ಸ್ಥಳೀಯರು ಯದುವೀರ ಅವರನ್ನು ಆತ್ಮೀಯವಾಗಿ ಸನ್ಮಾನಿಸಿದರು. ನಂತರ ಯದುವೀರ ಅವರು ಎಲ್ಲಾ ನಾಗರಿಕರಲ್ಲಿ ಮತ ಯಾಚಿಸಿದರು. ಗಂಜೀಫಾ ಚಿತ್ರಕಲೆಯ ಹಿರಿಯ ಕಲಾವಿದ ರಘುಪತಿ ಭಟ್, ಕೆಂಪುಚೆಲುವಾಜಮ್ಮಣ್ಣಿ ನಗರ ಕ್ಷೇಮಾಭಿವೃದ್ಧಿ ಸಂಘದ ಗೌರವಾಧ್ಯಕ್ಷ ಡಾ.ಚೌಡೇಗೌಡ, ಅಧ್ಯಕ್ಷ ಯೋಗೇಂದ್ರ, ಕಾರ್ಯದರ್ಶಿ ವಿಶ್ವನಾಥ್, ಉಪಾಧ್ಯಕ್ಷೆ ವನಿತಾ, ಜಂಟಿ ಕಾರ್ಯದರ್ಶಿ ಅನುರಾಧ ಸೇರಿದಂತೆ ಬಿಜೆಪಿ ಮತ್ತು ಜೆಡಿಎಸ್ ಕಾರ್ಯಕರ್ತರು ಈ ವೇಳೆ ಹಾಜರಿದ್ದರು.

ಜೆಸಿ ನಗರದಲ್ಲಿ ಮತ ಯಾಚನೆ: ಇದಾದ ನಂತರ ಜೆಸಿ ನಗರಕ್ಕೆ ಭೇಟಿ ನೀಡಿದ ಯದುವೀರ ಅವರನ್ನು ಸ್ಥಳೀಯರು ಆತ್ಮೀಯವಾಗಿ ಸನ್ಮಾನಿಸಿ ಸ್ವಾಗತ ಕೋರಿದರು. ಅಲ್ಲದೆ ಇದೇ ವೇಳೆ ಪಟಾಕಿ ಸಿಡಿಸಿ ಸಂಭ್ರಮಿಸಿದರು. ನಂತರ ಇಲ್ಲಿನ ಚಾಮುಂಡೇಶ್ವರಿ ದೇವಸ್ಥಾನಕ್ಕೆ ಭೇಟಿ ನೀಡಿದ ಯದುವೀರ, ಚಾಮುಂಡೇಶ್ವರಿ ದರ್ಶನ ಪಡೆದರು.

ಬಳಿಕ ಇಲ್ಲಿನ ನಿವಾಸಿಗಳಲ್ಲಿ ಮತ ಯಾಚಿಸಿದರು. ತದನಂತರ ಕುರುಬಾರಹಳ್ಳಿಗೆ ತೆರಳಿದ ಯದುವೀರ ಅವರಿಗೆ ಅದ್ಧೂರಿ ಸ್ವಾಗತ ದೊರೆಯಿತು. ತಮಗೆ ಮತದಾನ ಮಾಡುವಂತೆ ಯದುವೀರ ಅವರು ಇಲ್ಲಿನ ನಿವಾಸಿಗಳನ್ನು ಕೋರಿದರು. ಇದಕ್ಕೂ ಮುನ್ನ ನವೋದಯ ಬಡಾವಣೆಯಲ್ಲಿ (ಪೌರಕಾರ್ಮಿಕರ ಕಾಲೋನಿ) ರೋಡ್ ಶೋ ನಡೆಸಿ ಮತಯಾಚಿಸಿ ದರು. ಬಳಿಕ ಧರ್ಮಸಿಂಗ್ ಕಾಲೋನಿ ಹಾಗೂ ಅರಸು ಕಾಲೋನಿಗಳಲ್ಲಿ ಮತಯಾಚಿಸಿದರು. ಹೀಗೆ ಕೆಆರ್ ಕ್ಷೇತ್ರದ ವಿವಿಧೆಡೆ ಮತ ಯಾಚಿಸಿದ ಯದುವೀರ್, ಬಳಿಕ ಚಾಮುಂಡೇಶ್ವರಿ ಕ್ಷೇತ್ರದ ವಿವಿಧೆಡೆ ಪ್ರಚಾರ ನಡೆಸಿದರು.

ಶಾಸಕ ಟಿ.ಎಸ್.ಶ್ರೀವತ್ಸ, ಪಾಲಿಕೆ ಮಾಜಿ ಸದಸ್ಯರಾದ ಬಿ.ವಿ.ಮಂಜುನಾಥ್, ಛಾಯಾ ನವೀನ್, ಶಾಂತಮ್ಮ ವಡಿವೇಲು, ಬಿಜೆಪಿ ನಗರ ಉಪಾಧ್ಯಕ್ಷ ಜೋಗಿ ಮಂಜು, ಬಿಜೆಪಿ ಪ್ರಕೋಷ್ಠಗಳ ನಗರ ಸಂಯೋಜಕ ಗೋಕುಲ ಗೋವರ್ಧನ್, ಜೆಡಿಎಸ್ ನಗರ ಕಾರ್ಯಾಧ್ಯಕ್ಷ ಪ್ರಕಾಶ್ ಪ್ರಿಯದರ್ಶನ್, ಕಾರ್ಯದರ್ಶಿ ಆರ್ಯ ರಾಧಾಕೃಷ್ಣ, ಪ್ರಧಾನ ಕಾರ್ಯದರ್ಶಿ ಸತ್ಯನಾರಾಯಣ್, ಜೆಡಿಎಸ್ ಹಿರಿಯ ಮುಖಂಡರಾದ ಕೋದಂಡ ರಾಮು, ಸುಬ್ರಹ್ಮಣ್ಯ ಸೇರಿದಂತೆ ಬಿಜೆಪಿ–ಜೆಡಿಎಸ್ ಇನ್ನಿತರ ಮುಖಂಡರು, ಕಾರ್ಯಕರ್ತರು ಪಾಲ್ಗೊಂಡಿದ್ದರು.

ನೇಹಾ ಹಿರೇಮಠ ಹತ್ಯೆ ಖಂಡಿಸಿ ಮೈಸೂರಲ್ಲಿ ಬಿಜೆಪಿ ಪ್ರತಿಭಟನೆ



ಹುಬ್ಬಳ್ಳಿಯ ನೇಹಾ ಹಿರೇಮಠ್ ಕೊಲೆ ಖಂಡಿಸಿ ಬಿಜೆಪಿ ನಗರ ಮಹಿಳಾ ಮೋರ್ಚಾದ ಪದಾಧಿಕಾರಿಗಳು ಹಾಗೂ ರಾಜ್ಯ ಬಿಜೆಪಿ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್ ನೇತೃತ್ವದಲ್ಲಿ ಮೈಸೂರು ಜಿಪಂ ಕಚೇರಿ ಮುಂಭಾಗ ಮಂಗಳವಾರ ಪ್ರತಿಭಟನೆ ನಡೆಸಿದರು.

ಮೈಸೂರು, ಏ.23(ಎಸ್‌ಪಿಎನ್)– ಹುಬ್ಬಳ್ಳಿಯ ನೇಹಾ ಹಿರೇಮಠ್ ಕೊಲೆ ಖಂಡಿಸಿ ಬಿಜೆಪಿ ನಗರ ಮಹಿಳಾ ಮೋರ್ಚಾದ ಪದಾಧಿಕಾರಿಗಳು ಹಾಗೂ ರಾಜ್ಯ ಬಿಜೆಪಿ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್ ನೇತೃತ್ವದಲ್ಲಿ ಮೈಸೂರು ಜಿಪಂ ಕಚೇರಿ ಮುಂಭಾಗ ಮಂಗಳವಾರ ಪ್ರತಿಭಟನೆ ನಡೆಸಿದರು.

ನಂತರ ಮಾತನಾಡಿದ ಅವರು, ರಾಜ್ಯ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಮಹಿಳೆಯರು, ಯವತಿಯರ ಮೇಲೆ ನಿರಂತರ ದೌರ್ಜನ್ಯ, ಕೊಲೆಗಳಾಗುತ್ತಿವೆ. ಇದನ್ನು ತಡೆಗಟ್ಟುವಲ್ಲಿ ರಾಜ್ಯ ಸರ್ಕಾರ ವಿಫಲವಾಗಿದೆ. ಅದರಲ್ಲೂ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಹಿಂದೂ ಹೆಣ್ಣು ಮಕ್ಕಳಿಗೆ ರಕ್ಷಣೆ ಇಲ್ಲದಂತಾಗಿದೆ. ಇದಕ್ಕೆ ನೇಹಾ ಹಿರೇಮಠ ಕೊಲೆ ಪ್ರಕರಣವೇ ಸಾಕ್ಷಿ ಎಂದು ತಿಳಿಸಿದರು.

ಕಳೆದೊಂದು ವರ್ಷದಿಂದ ಹನುಮಾನ್ ಚಾಲಿಸ್ ಭಕ್ತಿ ಗೀತೆಗಳನ್ನು ಹಾಕಿದರೆ, ಅಂತಹವರ ಮೇಲೆ ಹಲ್ಲೆಗಳಾಗುತ್ತಿವೆ. ವಿಧಾನಸೌಧ ಆವರಣದಲ್ಲಿ ಮತಾಂಧರು ಪಾಕಿಸ್ತಾನ್ ಪರ ಜಿಂದಾಬಾದ್ ಕೂಗುತ್ತಾರೆ. ಆದರೂ ಕ್ರಮಗಳಾಗುತ್ತಿಲ್ಲ. ಒಂದು ಸಮುದಾಯದ ಮತಕ್ಕಾಗಿ ಹಿಂದೂಗಳ ಮೇಲೆ ನಿರಂತರ ದೌರ್ಜನ್ಯ ನಡೆಯುವುದನ್ನು ಎಷ್ಟು ದಿವಸ ಎಂದು ಸಹಿಸುವುದು ಎಂದು ಆಕ್ರೋಶ ವ್ಯಕ್ತಪಡಿಸಿದರು.

ನೇಹಾ ಹಿರೇಮಠ ಕೊಲೆ ಪ್ರಕರಣದ ಆರೋಪಿಯು 14 ಬಾರಿ ಕುತ್ತಿಗೆ ಭಾಗಕ್ಕೆ ಇರಿದು ಕೊಂದಿದ್ದಾನೆ. ಈ ಘಟನೆಯನ್ನು ನೋಡಿದರೆ, ಸಾರ್ವಜನಿಕವಾಗಿ ಹೆಣ್ಣು ಮಕ್ಕಳು ಓಡಾಟ ಮಾಡುವುದೇ ಕಷ್ಟಕರವಾಗಿದೆ. ಈ ಪ್ರಕರಣದ ಆರೋಪಿಯನ್ನು ರಕ್ಷಿಸಲು ರಾಜ್ಯ ಸರ್ಕಾರ, ನೇಹಾ ಹಿರೇಮಠ್ ಕುಟುಂಬದ ಮೇಲೆ ತನಿಖೆ ನೆಪದಲ್ಲಿ ಒತ್ತಡ ತರುತ್ತಿದೆ. ನೇಹಾ ಜೊತೆ ಆರೋಪಿ ಜೊತೆಗಿರುವ ಫೋಟೋಗಳನ್ನು ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಮಾಡುತ್ತಿದ್ದಾರೆ. ಇದು ನೊಂದ ಹೆಣ್ಣು ಮಕ್ಕಳಿಗೆ ನ್ಯಾಯ ಒದಗಿಸುವ ಪರಿಯೇ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸೂಕ್ತ ತನಿಖೆಗೆ ಆಗ್ರಹ: ರಾಜ್ಯ ಸರ್ಕಾರ ಅಲ್ಪಸಂಖ್ಯಾತರನ್ನು ಓಲೈಕೆ ಮಾಡುವ ದೃಷ್ಟಿಯಿಂದ ಆರೋಪಿಗಳ ಪರವಾಗಿ ಗೃಹ ಸಚಿವ ಡಾ.ಜಿ.ಪರಮೇಶ್ವರ್, ಮುಖ್ಯಮಂತ್ರಿ ಸಿದ್ದರಾಮಯ್ಯನವರೇ ಮಾಧ್ಯಮಗಳ ಮೂಲಕ ಕ್ಲೀನ್ ಚಿಟ್ ನೀಡುವಂತಹ ಹೇಳಿಕೆ ನೀಡಿದರೆ, ರಾಜ್ಯ ಪೊಲೀಸರು ನಡೆಸುವ ತನಿಖೆ ಯಾವ ದಿಕ್ಕಿನಲ್ಲಿ ಸಾಗುತ್ತದೆ ಎಂಬುದು ಎಲ್ಲರಿಗೂ ತಿಳಿದ ವಿಷಯ. ಹಾಗಾಗಿ ಯಾವುದಾದರೂ ಈ ಪ್ರಕರಣವನ್ನು ಸ್ವತಂತ್ರ ತನಿಖಾ ಸಂಸ್ಥೆಗೆ ವರ್ಗಾಯಿಸಿ, ಆ ಕುಟುಂಬಕ್ಕೆ ನ್ಯಾಯ ಒದಗಿಸುವಂತೆ ಆಗ್ರಹಿಸಿದರು.

ಈ ವೇಳೆ ಮಹಿಳಾ ಮೋರ್ಚಾ ಜಿಲ್ಲಾಧ್ಯಕ್ಷೆ ರೇಣುಕಾ ರಾಜು, ಮಹಿಳಾ ಮುಖಂಡರಾದ ಚಂದ್ರಕಲಾ, ಸಿಂಧೂ ಪ್ರಸಾದ್, ಶ್ರೀಲಕ್ಷ್ಮಿ, ನಗರ ಪಾಲಿಕೆ ಮಾಜಿ ಸದಸ್ಯೆ ಪ್ರಮಿಳಾ ಭರತ್, ಸವಿತಗೌಡ, ಮಾಲಿನಿ ಲಕ್ಷ್ಮಿಜಯರಾಂ ಸೇರಿದಂತೆ ಇತರರಿದ್ದರು.

ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ಮಹಿಳೆಯರ ಮಂಗಳಸೂತ್ರಕ್ಕೂ ಉಳಿಗಾಲವಿಲ್ಲ: ಮಾಳವಿಕಾ ಸಮರ್ಥನೆ

ಮೈಸೂರು, ಏ.25(ಎಸ್‌ಪಿಎನ್)– ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ, ಹಿಂದೂ ಹೆಣ್ಣು ಮಕ್ಕಳ ಮಂಗಳ ಸೂತ್ರವನ್ನೂ ಬಿಡದೇ ಕಿತ್ತು ಒಂದು ಸಮುದಾಯಕ್ಕೆ ಮರುಹಂಚಿಕೆ ಮಾಡುತ್ತದೆ ಎಂಬ ಪ್ರಧಾನಿ ಮೋದಿ ಅವರ ಹೇಳಿಕೆಯಲ್ಲಿ ಅರ್ಥವಿದೆ ಎಂದು ಬಿಜೆಪಿ ಉಪಾಧ್ಯಕ್ಷೆ ಮಾಳವಿಕಾ ಅವಿನಾಶ್ ಬಲವಾಗಿ ಸಮರ್ಥಿಸಿಕೊಂಡರು.


ಈ ಕುರಿತು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಪ್ರಧಾನಿ ಮೋದಿ, ಕೇಂದ್ರದಲ್ಲಿ ಐಎನ್‌ಡಿಐಎ ಒಕ್ಕೂಟ ಅಧಿಕಾರಕ್ಕೆ ಬಂದರೆ, ಹೆಣ್ಣು ಮಕ್ಕಳ ಮಂಗಳ ಸೂತ್ರವನ್ನು ಕಸಿದುಕೊಳ್ಳಲಿದೆ ಎಂಬ ಹೇಳಿಕೆಗೆ ಪ್ರತಿಕ್ರಿಯಿಸಿದ ಅವರು, ಇಂಡಿಯಾ ಒಕ್ಕೂಟ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ ಜಾತಿ ಗಣತಿ, ಆರ್ಥಿಕ ಗಣತಿ ಹಾಗೂ ವೈಯಕ್ತಿಕ ಸಂಪತ್ತಿನ ಕುರಿತು ಸರ್ವೆ ನಡೆಸಿ ಹೆಚ್ಚುವರಿ ಸಂಪತ್ತನ್ನು ಮರುಹಂಚಿಕೆ ಮಾಡುತ್ತೇವೆ ಎಂದು ತಮ್ಮ ಪ್ರಣಾಳಿಕೆಯಲ್ಲಿ ಹೇಳಿದೆ. ಈ ಹೇಳಿಕೆಯನ್ನು ರಾಹುಲ್‌ಗಾಂಧಿ, ಹೈದರಾಬಾದಿನ ಚುನಾವಣಾ ರ್‍ಯಾಲಿಯಲ್ಲಿ ನೀಡಿದ್ದರು. ಅದೇ ಹೇಳಿಕೆಯನ್ನು ಉಲ್ಲೇಖಿಸಿ ಪ್ರಧಾನಿ ಮೋದಿ ಈ ರೀತಿ ಹೇಳಿಕೆ ನೀಡಿದ್ದಾರೆ ಎಂದು ಸಮರ್ಥಿಸಿಕೊಂಡರು.

ಒಂದು ವೇಳೆ ಕಾಂಗ್ರೆಸ್ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದರೆ, ಸಂಪತ್ತಿನ ಮರು ಹಂಚಿಕೆ ಯಾವ ರೀತಿ ಮಾಡುತ್ತೀರಿ?. ಯಾವ ಆಧಾರದಲ್ಲಿ ಹಂಚಿಕೆ ಮಾಡುತ್ತೀರಿ?. ಇದಕ್ಕೆ ಯಾವ ಮಾನದಂಡ ಅನುಸರಿಸುತ್ತೀರಿ?. ಮಧ್ಯಮ ವರ್ಗದ ವೈಯಕ್ತಿಕ ಸಂಪತ್ತನ್ನು ಮರುಹಂಚಿಕೆ ಮಾಡುವುದಕ್ಕೆ ಕಾನೂನಿನಲ್ಲಿ ಅವಕಾಶವಿದೆಯೇ?. ಯಾರ ಸಂಪತನ್ನು ಯಾರಿಗೆ ಹಂಚಿಕೆ ಮಾಡುತ್ತೀರಿ ಎಂಬುದನ್ನು ಮೊದಲು ರಾಹುಲ್‌ಗಾಂಧಿ ಸ್ಪಷ್ಟಪಡಿಸಲಿ ಎಂದು ತಿಳಿಸಿದರು.

ಏಪ್ರಿಲ್ 28 ರಂದು ರಾಜ್ಯಕ್ಕೆ ಪ್ರಧಾನಿ ನರೇಂದ್ರ ಮೋದಿ ಭೇಟಿ; 14 ಲೋಕಸಭಾ ಕ್ಷೇತ್ರಗಳಲ್ಲಿ ಪ್ರಚಾರ

ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿ ಅವರು ಏಪ್ರಿಲ್ 28 ರಿಂದ ಕರ್ನಾಟಕಕ್ಕೆ ಎರಡು ದಿನಗಳ ಭೇಟಿ ನೀಡಲಿದ್ದು, ಮುಖ್ಯವಾಗಿ ಉತ್ತರ ಕರ್ನಾಟಕ ಭಾಗದಲ್ಲಿ ಪ್ರಚಾರ ನಡೆಸಲಿದ್ದಾರೆ.

ಉತ್ತರ ಕರ್ನಾಟಕ ಪ್ರದೇಶವು ಬಿಜೆಪಿಯ ಭದ್ರಕೋಟೆ ಎಂದೇ ಪರಿಗಣಿಸಲಾಗಿದ್ದು, ಪ್ರಧಾನಿ ಮೋದಿಯವರ ಆಗಮನದಿಂದಾಗಿ ಪಕ್ಷದ ಸ್ಥಾನವನ್ನು ಮತ್ತಷ್ಟು ಬಲಪಡಿಸಲಿದೆ. ಮೋದಿಯವರು ಈ ಭಾಗದ 14 ಲೋಕಸಭಾ ಕ್ಷೇತ್ರಗಳಲ್ಲಿ ಆರು ರ್‍ಯಾಲಿಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.



ಏಪ್ರಿಲ್ 28 ರಂದು ಪ್ರಧಾನಿ ಮೋದಿ ದಾವಣಗೆರೆ, ಕಾರವಾರ ಮತ್ತು ಬೆಳಗಾವಿಯಲ್ಲಿ ಸಾರ್ವಜನಿಕ ಸಭೆಯನ್ನು ಉದ್ದೇಶಿಸಿ ಮಾತನಾಡಲಿದ್ದಾರೆ. ಇದರೊಂದಿಗೆ ಕಾಂಗ್ರೆಸ್ ಹೊಸ ಮುಖಗಳನ್ನು ಕಣಕ್ಕಿಳಿಸಿರುವ ವಿಜಯಪುರ, ಕೊಪ್ಪಳ ಮತ್ತು ಕಲಬುರಗಿ ಕ್ಷೇತ್ರಗಳಲ್ಲಿಯೂ ಸಾರ್ವಜನಿಕ ಸಭೆಗಳನ್ನು ಉದ್ದೇಶಿಸಿ ಮಾತನಾಡಲಿದ್ದಾರೆ.

ಬೀದರ್ ಲೋಕಸಭಾ ಕ್ಷೇತ್ರದಲ್ಲಿ ಕಾಂಗ್ರೆಸ್ ಅಭ್ಯರ್ಥಿ ಸಾಗರ್ ಖಂಡ್ರೆ ವಿರುದ್ಧ ಬಿಜೆಪಿ ಅಭ್ಯರ್ಥಿಯಾಗಿ ಕೇಂದ್ರ ಸಚಿವ ಭಗವಂತ ಖೂಬಾ ಕಣಕ್ಕಿಳಿದಿದ್ದಾರೆ. ಮಾಜಿ ಮುಖ್ಯಮಂತ್ರಿ ಹಾಗೂ ಬೆಳಗಾವಿ ಬಿಜೆಪಿ ಅಭ್ಯರ್ಥಿ ಜಗದೀಶ್ ಶೆಟ್ಟರ್ ಅವರಿಗೂ ಕಾಂಗ್ರೆಸ್ ಅಭ್ಯರ್ಥಿ ಮೃಣಾಲ್ ಹೆಬ್ಬಾಳ್ಕರ್ ತೀವ್ರ ಪೈಪೋಟಿ ನೀಡುತ್ತಿದ್ದಾರೆ.

ಚಿಕ್ಕೋಡಿ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿ ಅಣ್ಣಾಸಾಹೇಬ ಜೊಲ್ಲೆ ವಿರುದ್ಧ ಕಾಂಗ್ರೆಸ್ ಅಭ್ಯರ್ಥಿ ಪ್ರಿಯಾ ಜಾರಕಿಹೊಳಿ ಸ್ಪರ್ಧಿಸಿದ್ದಾರೆ. ಕಾಂಗ್ರೆಸ್‌ನ ಪ್ರಭಾ ಮಲ್ಲಿಕಾರ್ಜುನ್ ಮತ್ತು ಬಿಜೆಪಿಯ ಗಾಯತ್ರಿ ಸಿದ್ದೇಶ್ವರ್ ನಡುವೆ ತೀವ್ರ ಪೈಪೋಟಿ ಏರ್ಪಟ್ಟಿದೆ. ಬಿಜೆಪಿ ಶಾಸಕ ಕರಡಿ ಸಂಗಣ್ಣ ಕಾಂಗ್ರೆಸ್ ಸೇರಲು ಮಾಜಿ ಉಪಮುಖ್ಯಮಂತ್ರಿ ಹಾಗೂ ಕಾಂಗ್ರೆಸ್ ಶಾಸಕ ಲಕ್ಷ್ಮಣ ಸವದಿ ಅನುಕೂಲ ಮಾಡಿಕೊಟ್ಟಿದ್ದಾರೆ. 2019ರ ಸಾರ್ವತ್ರಿಕ ಚುನಾವಣೆಯಲ್ಲಿ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸೋಲಿಸುವಲ್ಲಿ ಬಿಜೆಪಿಗೆ ಪ್ರಮುಖ ಪಾತ್ರ ವಹಿಸಿದ್ದ ಕಲಬುರಗಿ ಜಿಲ್ಲೆಯ ಅಫಜಲಪುರ ವಿಧಾನಸಭಾ ಕ್ಷೇತ್ರದಿಂದ ಆರು ಬಾರಿ ಶಾಸಕರಾಗಿರುವ ಮಾಲೀಕಯ್ಯ ಗುತ್ತೇದಾರ್ ಕೂಡ ಇದೀಗ ಕಾಂಗ್ರೆಸ್‌ಗೆ ಸೇರ್ಪಡೆಗೊಂಡಿದ್ದಾರೆ.

ಲಿಂಗಾಯತ ಮತಬ್ಯಾಂಕ್ ಅನ್ನು ಕ್ರೋಢೀಕರಿಸಲು ಮತ್ತು ಮೇ 7 ರಂದು ನಡೆಯಲಿರುವ ಎರಡನೇ ಹಂತದ ಚುನಾವಣೆಯಲ್ಲಿ ಉತ್ತರ ಕರ್ನಾಟಕ ಭಾಗದಲ್ಲಿ ಯಾವಾಗಲೂ ಬಿಜೆಪಿಯನ್ನು ಬೆಂಬಲಿಸುವ ಶೋಷಿತ ವರ್ಗಗಳು ಮತ್ತು ಹಿಂದುಳಿದವರ ಬೆಂಬಲವನ್ನು ಉಳಿಸಿಕೊಳ್ಳಲು ಬಿಜೆಪಿ ಬಯಸಿದೆ. ಉತ್ತರ ಕರ್ನಾಟಕ ಭಾಗದಲ್ಲಿ ರಾಜ್ಯ ಸರ್ಕಾರದ ಐದು ಖಾತರಿಗಳ ಫಲಾನುಭವಿಗಳಾಗಿರುವ ಜನಸಾಮಾನ್ಯರು ತಮಗೆ ಮತ ಹಾಕುತ್ತಾರೆ ಎಂಬ ಭರವಸೆಯಲ್ಲಿ ಕಾಂಗ್ರೆಸ್ ಈ ಬಾರಿ ನಿರೀಕ್ಷೆ ಇಟ್ಟುಕೊಂಡಿದೆ. ಆದರೆ, ಪ್ರಧಾನಿ ಮೋದಿ ಅಲೆ ಪಕ್ಷಕ್ಕಿರುವ ಎಲ್ಲ ಅಡೆತಡೆಗಳನ್ನು ಅಳಿಸಿಹಾಕಿ ಕ್ಷೇತ್ರದಲ್ಲಿ ಹಿಡಿತವನ್ನು ಉಳಿಸಿಕೊಳ್ಳಲಿದೆ ಎಂದು ಬಿಜೆಪಿ ವಿಶ್ವಾಸ ವ್ಯಕ್ತಪಡಿಸಿದೆ.

ಮೈಸೂರು ಚಿತ್ರಮಂದಿರಗಳಲ್ಲಿ



ಪದ್ಮ ಚಿತ್ರಮಂದಿರ	(ದೂ: 2521923)
ಬಡೇ ಮಿಯಾನ್ ಚೋಟೆ ಮಿಯಾನ್ (ಕ)	2 ಪ್ರದರ್ಶನಗಳು
ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ)	2 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್ ಚಿತ್ರಮಂದಿರ	(ದೂ: 2422871)
ಯುವ (ಕ)	4 ಪ್ರದರ್ಶನಗಳು
ಬಾಲಾಜಿ ಚಿತ್ರಮಂದಿರ	(ದೂ: 2497199)
ಸೈತಾನ್ (ಹಿಂ)	4 ಪ್ರದರ್ಶನಗಳು
ಮಹದೇಶ್ವರ ಚಿತ್ರಮಂದಿರ	(ಮೊ:9900820093)
ಮುಕ್ತ ಮನಸ್ಸು (ಕ)	4 ಪ್ರದರ್ಶನಗಳು
ಗಾಯಿತ್ರಿ	
ಯುವ (ಕ)	4 ಪ್ರದರ್ಶನಗಳು
ರಾಜಕಮಲ್	
ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ)	4 ಪ್ರದರ್ಶನಗಳು
ಸಂಗಂ	
ಅವತಾರ ಪುರುಷ 2 (ಕ)	4 ಪ್ರದರ್ಶನಗಳು
ಲಿಡೋ	
ಮ್ಯಾಟ್ನಿ (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ)	4 ಪ್ರದರ್ಶನಗಳು
ಪ್ರಭಾ	
ಮಾರಿಗೋಲ್ಡ್ (ಕ)	4 ಪ್ರದರ್ಶನಗಳು

ಡಿಆರ್‌ಸಿ ಸಿನಿಮಾಸ್
ದೂ : 4240422/4241800

ಸ್ಕ್ರೀನ್ 1	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.15ಕ್ಕೆ, ರಾ.7.05ಕ್ಕೆ, ರಾ.10.15ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (ಇಂ): ಮ.1.25ಕ್ಕೆ, ಸ್ವತಂತ್ರ್ಯ ವೀರ ಸಾವರ್ಕರ್ (ಹಿಂ): ಮ.3.45ಕ್ಕೆ.
ಸ್ಕ್ರೀನ್ 2	ಅಪ್ಪ ಐ ಲವ್‌ಯು (ಕ): ಬೆ.10.20ಕ್ಕೆ, ಮುಕ್ತ ಮನಸ್ಸು (ಕ): ಮ.1.10ಕ್ಕೆ, ಗೀತಾಂಜಲಿ ಮಲ್ಲಿ ವಚ್ಚಿಂದಿ (ತೆ): ಸಂ.4.20ಕ್ಕೆ, ವರ್ಷನ್‌ಗಲ್ಕು ಶೇಷಂ (ಮ): ರಾ.7.10ಕ್ಕೆ, ಆವೇಶಂ (ಮ): ರಾ.10.20ಕ್ಕೆ.
ಸ್ಕ್ರೀನ್ 3	ಅವತಾರ ಪುರುಷ 2 (ಕ): ಬೆ.10.55ಕ್ಕೆ, ರೊಮಿಯೋ (ತ): ಮ.1.25ಕ್ಕೆ, ಡಿಯರ್ (ತ): ಸಂ.4.15ಕ್ಕೆ, ಮೈದಾನ್ (ಹಿಂ): ಸಂ.6.55ಕ್ಕೆ, ರಾ.10.20ಕ್ಕೆ.
ಸ್ಕ್ರೀನ್ 4	ವರ್ಷನ್‌ಗಲ್ಕು ಶೇಷಂ (ಮ): ಬೆ.10.05ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಮ.1.15ಕ್ಕೆ, ಯುವ (ಕ): ಸಂ.4ಕ್ಕೆ, ರಾ.7ಕ್ಕೆ, ರಾ.10ಕ್ಕೆ.

ಐನಾಕ್ಸ್ ಮೂವೀಸ್
LIVE THE MOVIE
ದೂ : 2533444 / 2433456

ಸ್ಕ್ರೀನ್ 1	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.10.50ಕ್ಕೆ, ಮ.3ಕ್ಕೆ, ರಾ.10ಕ್ಕೆ, ಬಡೇ ಮಿಯಾನ್ ಚೋಟೆ ಮಿಯಾನ್ (3ಡಿ) (ಹಿಂ): ಸಂ.6.30ಕ್ಕೆ.
ಸ್ಕ್ರೀನ್ 2	ಮೈದಾನ್ (ಹಿಂ): ಬೆ.9.50ಕ್ಕೆ, ಮ.1.40ಕ್ಕೆ, ಸಂ.5.30ಕ್ಕೆ, ರಾ.9.20ಕ್ಕೆ.
ಸ್ಕ್ರೀನ್ 3	ಬಡೇ ಮಿಯಾನ್ ಚೋಟೆ ಮಿಯಾನ್ (ಹಿಂ): ಬೆ.9.40ಕ್ಕೆ, ಅಪ್ಪ ಐ ಲವ್‌ಯು (ಕ): ಮ.1.10ಕ್ಕೆ, ಅವತಾರ ಪುರುಷ 2 (ಕ): ಸಂ.4.15ಕ್ಕೆ, ಯುವ (ಕ): ಸಂ.6.55ಕ್ಕೆ, ಮೈದಾನ್ (ಹಿಂ): ರಾ.10.10ಕ್ಕೆ.
ಸ್ಕ್ರೀನ್ 4	ಯುವ (ಕ): ಬೆ.9.40ಕ್ಕೆ, ಸಂ.4ಕ್ಕೆ, ರೋಮಿಯೋ (ತ): ಮ.12.55ಕ್ಕೆ, ಗೀತಾಂಜಲಿ ಮಲ್ಲಿ ವಚ್ಚಿಂದಿ (ತೆ): ರಾ.7.05ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ರಾ.10.20ಕ್ಕೆ.

ಮೈಸೂರು ವಿಷನ್ ಸಿನಿಮಾ
ದೂ : 0821–2973519

ಸ್ಕ್ರೀನ್ 1	ಪಾರ್ಕಿಂಗ್ (ಕ): ಬೆ.10.35ಕ್ಕೆ, ಸಪ್ತಸಾಗರದಾಚೆ ಎಲ್ಲೋ 2 (ಕ): ಮ.1.10ಕ್ಕೆ, ಬ್ಯಾಡ್ ಮ್ಯಾನರ್ಸ್ (ಕ): ಸಂ.4ಕ್ಕೆ, ಅರ್ಧಂಬರ್ಧ ಪ್ರೇಮಕಥೆ (ತ): ಸಂ.6.35ಕ್ಕೆ, ಅನ್ನಪೂರ್ಣಿ (ತ): ರಾ.9.15ಕ್ಕೆ.
ಸ್ಕ್ರೀನ್ 2	ಅನಿಮಲ್ (ಹಿಂ): ಬೆ.10ಕ್ಕೆ, ಸಂ.6ಕ್ಕೆ, ರಾ.9.45ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ಮ.1.45ಕ್ಕೆ.
ಸ್ಕ್ರೀನ್ 3	ಸ್ಯಾಮ್ ಬಹದ್ದೂರ್ (ಹಿಂ): ಬೆ.10.10ಕ್ಕೆ, ಸಂ.4.50ಕ್ಕೆ, ಅನಿಲಲ್ (ಹಿಂ): ಮ.1.05ಕ್ಕೆ, ರಾ.7.45ಕ್ಕೆ.
ಸ್ಕ್ರೀನ್ 4	ಸಪ್ತ ಸಾಗರದಾಚೆ ಎಲ್ಲೋ 2 (ತೆ): ಬೆ.10.45ಕ್ಕೆ, ಅನಿಮಲ್ (ಹಿಂ): ಮ.2.40ಕ್ಕೆ, ನೆಪೋಲಿಯನ್ (ಇಂ): ಸಂ.6.25ಕ್ಕೆ, ಸ್ಯಾಮ್ ಬಹದ್ದೂರ್ (ಹಿಂ): ರಾ.9.35ಕ್ಕೆ.

ಪಿವಿಆರ್ ಸಿನಿಮಾಸ್
ನೆಕ್ಸಸ್ ಸೆಂಟರ್‌ಸಿಟಿ ಮಾಲ್,
2ನೇ ಮಹಡಿ, ಮೊ.ನಂ: 8951357139

ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.10ಕ್ಕೆ, ಮ.12.30ಕ್ಕೆ, ಮ.3.50ಕ್ಕೆ, ರಾ.7.10ಕ್ಕೆ, ರಾ.10.30ಕ್ಕೆ, ಯುವ (ಕ): ಬೆ.10.20ಕ್ಕೆ, ಬೆ.11.35ಕ್ಕೆ, ಮ.12.45ಕ್ಕೆ, ಮ.3.20ಕ್ಕೆ, ಸಂ.5.45ಕ್ಕೆ, ಸಂ.6.45ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಬೆ.10.45ಕ್ಕೆ, ಮ.1.25ಕ್ಕೆ, ಸಂ.6.50ಕ್ಕೆ, ರಾ.9.30ಕ್ಕೆ, ಅವತಾರ ಪುರುಷ 2 (ಕ): ಮ.12.40ಕ್ಕೆ, ಸಂ.6.35ಕ್ಕೆ, ಮ್ಯಾಟ್ನಿ (ಕ): ಮ.1.35ಕ್ಕೆ, ಭರ್ಜರಿ ಗಂಡು (ಕ): ಮ.2.50ಕ್ಕೆ, ದಿ ಫಸ್ಟ್ ಓಮನ್ (ಇಂ): ಸಂ.4ಕ್ಕೆ, ರಾ.9ಕ್ಕೆ, ಕ್ರೂವ್ (ಹಿಂ): ಸಂ.4.05ಕ್ಕೆ, ರಾ.9.15ಕ್ಕೆ, ಮಂಜುಮ್ಮೆಲ್ ಬಾಯ್ಸ್ (ಮ): ಸಂ.4.30ಕ್ಕೆ, ಮಾರಿಗೋಲ್ಡ್ (ಕ): ರಾ.7.25ಕ್ಕೆ, ಆಡುಜೀವಿತಂ (ಮ): ರಾ.10.15ಕ್ಕೆ.

ಗರುಡ ಮಾಲ್,
1ನೇ ಮಹಡಿ, ಮೊ.ನಂ: 9901373210

ಯುವ (ಕ): ಬೆ.9.30ಕ್ಕೆ, ಮ.12.25ಕ್ಕೆ, ಮ.3.40ಕ್ಕೆ, ಸಂ.6.30ಕ್ಕೆ, ರಾ.10.30ಕ್ಕೆ, ದಿ ಫ್ಯಾಮಿಲಿ ಸ್ಟಾರ್ (ತೆ): ಬೆ.9.50ಕ್ಕೆ, ಮ.12ಕ್ಕೆ, ಮ.3.20ಕ್ಕೆ, ಸಂ.6.40ಕ್ಕೆ, ರಾ.10ಕ್ಕೆ, ಗಾಡ್ಜಿಲ್ಲಾ ಎಕ್ಸ್ ಕಾಂಗ್ ದಿ ನ್ಯೂ ಎಂಪೈರ್ (3ಡಿ) (ಇಂ): ಮ.1.10ಕ್ಕೆ, ಮ.3.50ಕ್ಕೆ, ರಾ.9.45ಕ್ಕೆ, ಅವತಾರ ಪುರುಷ 2 (ಕ): ಮ.2ಕ್ಕೆ, ರಾ.7.35ಕ್ಕೆ, ಮ್ಯಾಟ್ನಿ (ಕ): ಸಂ.4.40ಕ್ಕೆ, ಆಡುಜೀವಿತಂ (ಮ): ಸಂ.6.55ಕ್ಕೆ, ರಾ.10.15ಕ್ಕೆ.

ಸೂಚನೆ : ಸಿನಿಮಾ ಮಾರ್ಗದರ್ಶಿಯಲ್ಲಿ ಮಾಹಿತಿಯನ್ನು ಪರಿಪೂರ್ಣಗೊಳಿಸಲು ನಾವು ಸಾಧ್ಯವಾದಷ್ಟೂ ಪ್ರಯತ್ನಿಸುತ್ತಿದ್ದೇವೆ. ಆದರೂ ಕೆಲವೊಮ್ಮೆ ಮಾಹಿತಿ ಅಲಭ್ಯತೆಯಿಂದ ಲೋಪಗಳು ಉಂಟಾಗುವ ಸಾಧ್ಯತೆಯಿದ್ದು, ಸಾರ್ವಜನಿಕರು ಸಹಕರಿಸಬೇಕಾಗಿ ಕಳಕಳಿ ಮನವಿ.